ನಾಡಿದಿನಾ ಕನ್ನಡನಾಡು

(ಅಂಬಿಕಾತನಯದತ್ತರ ಕರ್ನಾಟಕ ಕುರಿತ ಕವನಗಳ ಸಂಗ್ರಹ-ಸಂಗೀತ ಸಂಯೋಜನೆಯೊದಿಗೆ)

'ಕನ್ನಡವೂ ಭಾರತವೂ ಜಗವೆಲ್ಲವೂ ಒಂದೇ'

-ಅಂಬಿಕಾತನಯದತ್ತ



ಸಂಪಾದಕರು:

ಡಾ॥ ವಾಮನ ಬೇಂದ್ರೆ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ

ಹುಬ್ಬಳ್ಳಿ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು




ಅಂಬಿಕಾತನಯದತ್ತರ

"ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು"

(ವರಕವಿ ದ. ರಾ. ಬೇಂದ್ರೆಯವರ ಆಯ್ದ ಕವನಗಳ ಸಂಕಲನ)

(ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ವರ ಸಂಯೋಜನೆ ಒಳಗೊಂಡು)



ಅಂಬಿಕಾತನಯದತ್ತರ

“ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು”

(ವರಕವಿ ದ. ರಾ. ಬೇಂದ್ರೆಯವರ ಆಯ್ದ ಕವನಗಳ ಸಂಕಲನ)

(ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ವರ ಸಂಯೋಜನೆ ಒಳಗೊಂಡು)

ಸಂಪಾದಕರು :

ಡಾ॥ ವಾಮನ ಬೇಂದ್ರೆ

ಸಂಗೀತ ಸಂಯೋಜಕರು :

ಶ್ರೀ ಕೃಷ್ಣಾಜಿ ಕುರ್ತಕೋಟಿ

ಪ್ರಕಾಶಕರು :

ಡಾ॥ ಕೆ. ಎಸ್. ಶರ್ಮಾ, ನಿರ್ದೇಶಕರು,

ವರಕವಿ ಡಾ॥ ದ. ರಾ. ಬೇಂದ್ರೆ, ಸಂಶೋಧನ ಸಂಸ್ಥೆ

ಹಾಗೂ ಬೇಂದ್ರೆ, ಸಂಗೀತ ಅಕಾಡೆಮಿ, ಹುಬ್ಬಳ್ಳಿ

★ AMBIKATANAYADATTARA "INDANDINADALLEE HADU; NADADINAA KANNADA NADU"

(An Anthology of Poems by DR. D. R. BENDRE comprising of Musical Notations in Hindustani Classical Style)

★ Edited by : Dr. Vaman Bendre.

★ Music Compositions by : Sri Krishnaji Kurtkoti.

★ D. T. P. :Sri Iranna B. Noolvi - D.T.P. Section - Dr. K. S. Sharma I. T. C., Hubli

★ Cover Design by : Sri.Ravindra Shirolkar, Dharwad.

★ Published by : Dr. K. S. Sharma,
Director, Poet Laureate Dr.D.R.Bendre Research Institute and Bendre Sangeeth Academy,
"Vishwashrama Chetana", Gokul Road, Hubli- 580 030. (Phone 0836-2330466)

★ First Edition : 1000 copies

★ Published on : 10-2-2009
(On the occasion of the 114th Birth Anniversary of Dr. D. R. Bendre & 10th Anniversary of Bendre Research Institute : 10-2-2009-Gurupratipada)

★ Price : Rs.100-00

★ ಅಂಬಿಕಾತನಯದತ್ತರ "ಇಂದಂದಿನದಲ್ಲೀ ಹಾಡು; ನಾಡದಿನಾ ಕನ್ನಡ ನಾಡು"
ವರಕವಿ ಡಾ॥ದ.ರಾ.ಬೇಂದ್ರೆಯವರ ಆಯ್ದ ಕವನಗಳ ಸಂಕಲನ :
ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಸ್ವರ ಸಂಯೋಜನೆ ಒಳಗೊಂಡ ಕವನಗಳ ಸಂಕಲನ

★ ಸಂಪಾದಕರು : ಡಾ॥ ವಾಮನ ಬೇಂದ್ರೆ.

★ ಸಂಗೀತ ಸಂಯೋಜನೆ : ಶ್ರೀ ಕೃಷ್ಣಾಜಿ ಕುರ್ತಕೋಟಿ.

★ ಪುಟ ವಿನ್ಯಾಸ : ಶ್ರೀ ಈರಣ್ಣ ಬ. ನೂಲ್ವಿ-ಡಿ.ಟಿ.ಪಿ. ವಿಭಾಗ, ಡಾ. ಕೆ. ಎಸ್. ಶರ್ಮಾ ಸಮೂಹ ಸಂಸ್ಥೆಗಳು, ಹುಬ್ಬಳ್ಳಿ

★ ರಕ್ಷಾಕವಚ : ಶ್ರೀ ರವೀಂದ್ರ ಶಿರೋಳಕರ, ಧಾರವಾಡ

★ ಮುದ್ರಕರು : ಶರ್ಮಾ ಮುದ್ರಕರು ಹಾಗೂ ಪ್ರಕಾಶಕರು, ೪, ಪತ್ರಕರ್ತರ ಕಾಲೋನಿ, ಹುಬ್ಬಳ್ಳಿ-೩೨

★ ಪ್ರಕಾಶಕರು :
ಡಾ॥ ಕೆ. ಎಸ್. ಶರ್ಮಾ,
ನಿರ್ದೇಶಕರು, ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡೆಮಿ,
'ವಿಶ್ವ ಶ್ರಮಚೇತನ', ಗೋಕುಲ ರಸ್ತೆ, ಬಸವೇಶ್ವರ ನಗರ, ಹುಬ್ಬಳ್ಳಿ-೫೮೦ ೦೩೦

★ ಪುಸ್ತಕಗಳಿಗಾಗಿ ಬರೆಯಿರಿ :
ಶ್ರೀಮಾತಾ ಪ್ರಕಾಶನ,
ವಿಶ್ವಶ್ರಮ ಚೇತನ, ಗೋಕುಲ ರಸ್ತೆ ಹುಬ್ಬಳ್ಳಿ - 580 030 (ದೂರವಾಣಿ : 0836-2330466)
ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 421, ಶಿವಮೊಗ್ಗ ಜಿಲ್ಲೆ, ದೂರವಾಣಿ : 08186-228616 (ಕ).

★ ಮೊದಲ ಮುದ್ರಣ : ೧೦೦೦ ಪ್ರತಿಗಳು

★ ಮೊದಲ ಪ್ರಕಟಣೆ : (ಡಾ॥ ದ. ರಾ. ಬೇಂದ್ರೆಯವರ ೧೧೪ನೇ ಜನ್ಮದಿನೋತ್ಸವ ಹಾಗೂ
ಬೇಂದ್ರೆ ಸಂಶೋಧನ ಸಂಸ್ಥೆಯ ೧೦ನೇ ವಾರ್ಷಿಕೋತ್ಸವದ ಪ್ರಯುಕ್ತ : ೧೦-೨-೨೦೦೯ - ಗುರುಪ್ರತಿಪದಾ)

★ ಬೆಲೆ : ರೂ.೧೦೦-೦೦

ಅರ್ಪಣೆ

ಕನ್ನಡ ಮಾತಿನ ಅರಿವು ಅರ್ಥವತ್ತಾಗಬೇಕಾದರೆ,
ಅದರ ಪ್ರತಿ ಶಬ್ದಕ್ಕೆ ಇರುವ ಅರ್ಥದ ಸಪ್ತವಲಯಗಳಾದ

ವಿಘಟನೆ,
ವಿಕ್ಲೇಶ,
ವಿಪ್ಲವ,
ವಿಶೇಷ,
ವಿರಸ,
ವಿರೋಧ
ವಿನಾಶ

ಎಂಬ ಭಾವಗಳ ದೋಷಗಳು ಪರಿಹಾರವಾಗಬೇಕು. ಆಗ

ಉತ್-ಭಾವ,
ಉತ್-ಬುದ್ಧಿ
ಉತ್-ವಿವೇಕ
ಉತ್-ಹೃದಯ
ಉತ್-ಮನ,
ಉತ್-ಶುದ್ಧಿ,
ಉತ್-ಯೊಗ

ಎಂಬ ಸಪ್ತ ಉನ್ನತಿಗಳ ಜಾಗೃತಿಯಾಗುತ್ತದೆ. ಸಪ್ತ ವಿಕೃತಿಗಳು ಪರಿಹಾರಗೊಂಡು, ಸಪ್ತ ಪ್ರಕೃತಿಯ ಸುಕೃತಿಗಳ ಜಾಗೃತಿಯ ಪ್ರಕ್ರಿಯೆ ಹಾಗೂ ಅದರ ಎಚ್ಚರ ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು; ನಾಡಿದಿನಾ ಕನ್ನಡನಾಡು'' ಸಂಕಲನದ ಕವನಗಳ ಅಧ್ಯಯನದ ಮೂಲಕ ಅಂತರ್ಗತಗೊಳಿಸಿಕೊಳ್ಳಬೇಕಾಗುತ್ತದೆ.
ದ. ರಾ. ಬೇಂದ್ರೆ ಕನಸಿನ ''ನಾಡಿದಿನಾ ಕನ್ನಡನಾಡು'' ಉದಯವಾಗಲು ಸಶಕ್ತರಾದ ನವಮಾನವರು ಉದ್ಭವಿಸಲಿ ಎಂಬ ಸದ್ಭಾವದಿಂದ ಆ ನವಮಾನವರಿಗೆ ಈ ಸಂಕಲನವನ್ನು ಅರ್ಪಣೆ ಮಾಡುತ್ತಿದ್ದೇವೆ.

ವಾಮನ
(ಸಂಪಾದಕ)

ಕುವಲಯಶ್ಯಾಮ
(ಪ್ರಕಾಶಕ)

ಪರಿವಿಡಿ

ಭಾಗ - ೧ : ಕವನಗಳು

ಭಾಗ - ೨ :
ಶಾಸ್ತ್ರೀಯ ಸಂಗೀತ ಸಂಯೋಜನೆ

‘ಬೇಂದ್ರೆ ನುಡಿ’

‘ನನ್ನ ಕವನ’ಗಳು ಎಂದು ಇದೀಗ ಹೇಳಿದೆನಷ್ಟೆ, ಅದೊಂದು ರೂಢಿಯಮಾತು. ಇವು ನನ್ನವಲ್ಲ; ಕನ್ನಡದ ಕವನಗಳು. ಕನ್ನಡದ ಅಶರೀರವಾಣಿಯು ಸಾವಿರ ಬಾಯಿಗಳಿಂದ ತನ್ನ ಕಣಸನ್ನು ಕನ್ನಡಿಸುತ್ತಿದೆ. ಆ ಸಾವಿರ ಬಾಯಿಗಳಲ್ಲಿ ನನ್ನದೊಂದು; ಅದೇ ನನ್ನ ಧನ್ಯತೆ. ಕನ್ನಡದ ಪುನರ್ಜನ್ಮದ ಪ್ರಭಾತದಲ್ಲಿ ಹಾಡುವ ಕವಿಗಣದಲ್ಲಿ ನಾನೊಬ್ಬ. ಅದೆ ನನ್ನ ಅಚ್ಚುಮೆಚ್ಚು. ಹಾಗಿರದಿದ್ದರೆ ನನ್ನ ಕವನಗಳನ್ನು ಉಳಿದವರು ಓದಬೇಕೇಕೆ? ‘ನನ್ನ ಕವನ, ಅವನ ಕವನ’ ಎಂಬುದು ಸಟೆ; ಕನ್ನಡವು ತನ್ನ ಕವನ ಎನ್ನುವದಷ್ಟೆ ದಿಟ. ಒಂದೇ ಕಣಸನ್ನು ಹಲವು ಕಣ್ಣು ಕಾಣುತ್ತಿವೆ. ಒಂದೇ ಕಣಿಯನ್ನು ಹಲವು ಬಾಯಿ ಹಾಡುತ್ತಿವೆ. ಈ ಹಲವುಗಳಲ್ಲಿ ತೋರಿ ಮರೆಯಾಗುವ ಒಂದನ್ನು, ಎಲ್ಲಿಯೋ ಎಲ್ಲರೂ ಅರಿತೇ ಹಲವನ್ನು ಬರಮಾಡಿಕೊಳ್ಳುವರು. ಇದರಲ್ಲಿ ಅಪ್ಪಿತಪ್ಪಿ ಬಂದ ‘ನನ್ನ’ದೆಂಬ ಕಿಟ್ಟವು ಸಹೃದಯರ ಸಾರಸ್ವತಯಜ್ಞದಲ್ಲಿ ಸುಟ್ಟು, ಕನ್ನಡದ ಚಿನ್ನವಷ್ಟೇ ಉಳಿಯುವದು.

- ‘ಗರಿ’ ಕವನ ಸಂಗ್ರಹದ ಮುನ್ನುಡಿಯಿಂದ

ಪ್ರಕಾಶಕರ ನುಡಿ

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗೌರವ ಸಂದದ್ದು ಕನ್ನಡಿಗರಿಗೆ ಅತೀವ ಆನಂದವನ್ನು ತಂದಿದೆ. ಈ ಸಂತಸದ ಸಂದರ್ಭದ ಸವಿನೆನಪಿಗಾಗಿ ಅಂಬಿಕಾತನಯದತ್ತರ "ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು" ಎಂಬ ಕವನ ಸಂಕಲನವನ್ನು ಬೇಂದ್ರೆ ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡೆಮಿಗಳ ಸಂಯುಕ್ತಾಶ್ರಯದಲ್ಲಿ ಲೋಕಾರ್ಪಣ ಮಾಡುತ್ತಿದ್ದೇವೆ. ಈ ಸಂಕಲನದ ವಿಶಿಷ್ಠತೆಯೆಂದರೆ-ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಡಾ।। ದ. ರಾ. ಬೇಂದ್ರೆಯವರು ಕನ್ನಡ ನಾಡು, ಕನ್ನಡ ನುಡಿ ಹಾಗೂ ಕನ್ನಡ ನಾಡಿಗರ ಬಗ್ಗೆ ಬರೆದ ಇಪ್ಪತ್ತೈದು ಕವನಗಳನ್ನು ಆಯ್ದು, ಈ ಸಂಕಲನವನ್ನು ಸಿದ್ಧಪಡಿಸಲಾಗಿದೆ; ಅಂತೆಯೇ ಇದರ ವಿಶೇಷತೆಯೆಂದರೆ ಈ ಎಲ್ಲ ಕವನಗಳಿಗೂ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪದ್ಧತಿಯಂತೆ ಸಂಗೀತ ಸಂಯೋಜನೆಯನ್ನು ಅಳವಡಿಸಿಕೊಂಡು ಸಿದ್ಧಪಡಿಸಿರುವುದು. ಹೀಗಾಗಿ ಇದೊಂದು ಅನುಪಮ ಕೃತಿಯಾಗಿದೆ ಎಂದೇ ನಾವು ಭಾವಿಸಿದ್ದೇವೆ. ಇದನ್ನು ಓದಿದಾಗ ನಿಮಗೇ ಈ ಭಾವ ಬರದೇ ಇರಲಾರದು. ಈ ಕೃತಿಯ ಸಂಪಾನೆಯನ್ನು ಬೇಂದ್ರೆ ಸಂಶೋಧನ ಸಂಸ್ಥೆಯ ಸಹನಿರ್ದೇಶಕರೂ, ವರಕವಿ ದ. ರಾ. ಬೇಂದ್ರೆಯವರ ಸುಪುತ್ರರೂ ಆದ ಡಾ।। ವಾಮನ ಬೇಂದ್ರೆಯವರು ನಿರ್ವಹಿಸಿದ್ದಾರೆ. ಅಂತೆಯೇ ಸಂಗೀತ ಸಂಯೋಜನೆಯನ್ನು ಪಂಡಿತ ಶ್ರೀ ಕೃಷ್ಣಾಜಿ ಕುರ್ತಕೋಟಿಯವರು ರಚಿಸಿದ್ದಾರೆ. ಈ ಕೃತಿಯಲ್ಲಿಯ ಕವನಗಳ ಕೆಲ ವೈಶಿಷ್ಟ್ಯಗಳನ್ನು ವೀಕ್ಷಿಸೋಣ.

ಕಾವ್ಯದಲ್ಲಿ ಶಬ್ದಾರ್ಥ ಪ್ರಾಧಾನ್ಯ ಕಾವ್ಯ ಮತ್ತು ಶುದ್ಧ ಭಾವ ಜಾಗೃತಿಗಾಗಿ ಬರೆದ ಕಾವ್ಯ ಎಂದು ಎರಡು ಪ್ರಕಾರಗಳು. ಶಬ್ದಾರ್ಥ ಕಾವ್ಯ ಪಾಂಡಿತ್ಯ ಪ್ರಧಾನ; ಭಾವ ಕಾವ್ಯ ಚಾರಿತ್ರ್ಯ ನಿರ್ಮಿತಿಯ ಕಾವ್ಯ. ಪಾಂಡಿತ್ಯಕಾವ್ಯ ವ್ಯಕ್ತಿಯ ಪಾಂಡಿತ್ಯವನ್ನು ಬೆಳೆಸಿದರೆ, ಭಾವಕಾವ್ಯ ಹಾಡಾಗಿ, ವ್ಯಕ್ತಿಯ ಹೃದಯವನ್ನು ಹದಗೊಳಿಸಿ, ವ್ಯಕ್ತಿತ್ವ ವಿಕಸನದ ಕಾರ್ಯವನ್ನು ಮಾಡುತ್ತದೆ. ಸಂಗೀತವು, ಯಾವುದೇ ಪ್ರಕಾರದ್ದಾಗಿರಲಿ, ಅದು ಭಾವಕಾವ್ಯಕ್ಕೆ ನಿಕಟಸಂಬಂಧಿ. ಅದನ್ನು ಹೃದಯದಲ್ಲಿ ಸ್ಥಿರಗೊಳಿಸಿಕೊಂಡು, ಹಾಡುವವನು ರಾಗ-ರಾಗಿಣಿಯರನ್ನು ಕಂಡು, ಶ್ರೋತೃಗಳೂ ಆ ದರ್ಶನ ಪಡೆಯುವಂತೆ ಮಾಡುತ್ತಾನೆ. ಭಾವಕವಿಗೆ, ಅವನ ಕಾವ್ಯದ ಶ್ರವಣವಾಗಿ, ಅದು ಸಾಕಾರಗೊಳ್ಳುತ್ತದೆ ಎಂಬ ಸಿದ್ಧಾಂತವನ್ನು ರೂಪಿಸಿದ ಭಾವಋಷಿ ದ. ರಾ. ಬೇಂದ್ರೆಯವರು - ಹಿಂದೂಸ್ತಾನಿ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತದ ಹಿನ್ನೆಲೆಗೆ ಹೊಂದಾಣಿಕೆಯಾಗುವಂತೆಯೇ ತಮ್ಮ ಭಾವಕವನಗಳನ್ನು ಹಾಗೂ ಹಾಡುಗಳನ್ನು "ಚೀಜ" ಆಗಿ ಸೃಷ್ಟಿಸಿ; ಅವುಗಳನ್ನು ಆಲಾಪಗಳಂತೆ ವಿಸ್ತರಿಸಿ, ಸಾಕಾರಗೊಳಿಸುತ್ತಾ ಹೋದರು. ಆದುದರಿಂದಲೇ, ಬೇಂದ್ರೆ ಭಾವಗೀತೆಗಳನ್ನು ಜಾನಪದ, ಭಜನೆ, ಲಾವಣಿ, ಏಕತಾರಿ, ತತ್ತ್ವಪದ, ಸುಗಮಸಂಗೀತ, ಗಮಕ ಮೊದಲಾದ ವಿವಿಧ ಪದ್ಧತಿಗಳಲ್ಲಿ ಹಾಡಲಾಗುತ್ತಿದೆ. ಬೇಂದ್ರೆಯವರ ಪ್ರಬಲೇಚ್ಛೆ-ಕನ್ನಡ ಚೀಜುಗಳನ್ನೇ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ

ಹೃದಯವಾಗಿಸಬೇಕು ಎಂಬುದಾಗಿತ್ತು. ಈ ಹಿನ್ನೆಲೆಯಲ್ಲಿ ಬೇಂದ್ರೆಯವರು ಹೇಳಿದ ಈ ಮಾತಿಗೆ ವಿಶೇಷ ಮಹತ್ವ ಬರುತ್ತದೆ. ''ನಾನು ಹೋದ ಜನ್ಮದಲ್ಲಿ ಗಂಧರ್ವನಾಗಿದ್ದೆ; ಈ ಜನ್ಮದಲ್ಲಿ ಕವಿಯಾಗಿರುವೆ'' ಎಂಬುದಾಗಿ ಬೇಂದ್ರೆ ಅನೇಕ ಸಲ ಹೇಳಿ, ಸಂಗೀತತಜ್ಞರ ಲಕ್ಷ್ಯವನ್ನು ತಮ್ಮ ಕವನಗಳಲ್ಲಿಯ ಸಂಗೀತಶಕ್ತಿಯತ್ತ ಸೆಳೆದದ್ದುಂಟು.

''ಬೇಂದ್ರೆ ಸಂಗೀತ''ವನ್ನು ''ರವೀಂದ್ರ ಸಂಗೀತ''ದಂತೆಯೇ ಒಂದು ವಿಶಿಷ್ಠ ಸಂಗೀತ ಪದ್ಧತಿಯಾಗಿ ರೂಪಿಸಿ, ಬೇಂದ್ರೆಯವರ ಕನಸನ್ನು ನನಸು ಮಾಡುವ ಉದ್ದೇಶದಿಂದಲೇ ನಾವು ''ಬೇಂದ್ರೆ ಸಂಶೋಧನ ಸಂಸ್ಥೆ''ಯ ಎರಡನೆಯ ದಲವಾಗಿ ''ಬೇಂದ್ರೆ ಸಂಗೀತ ಅಕಾಡೆಮಿ''ಯನ್ನು ಸ್ಥಾಪಿಸಿದೆವು. ಬೇಂದ್ರೆ ಶತಮಾನೋತ್ಸವದ ನೆನಪಿಗೆಂದು ಪ್ರಾರಂಭವಾದ ಈ ಕಾರ್ಯ ನಾಗಲೋಟದಿಂದ ಮುಂದೆ ಸಾಗುತ್ತಿರುವುದು ಸಂತಸದ ಸಂಗತಿಯಾಗಿದೆ. ನಾವು ಬೇಂದ್ರೆ ಸಂಗೀತ ಅಕಾಡೆಮಿಯಿಂದ ಈಗಾಗಲೇ ''ಬೇಂದ್ರೆ ಸಂಗೀತ ಸಿದ್ಧಾಂತ ಹಾಗೂ ಪ್ರಯೋಗ'' ಎಂಬ ಮೌಲಿಕ, ತಾತ್ತ್ವಿಕ ಗ್ರಂಥವನ್ನು ಪ್ರಕಟಿಸುವುದರೊಡನೆ, ಬೇಂದ್ರೆ ಹಾಡಿಗೆ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಪದ್ಧತಿಯ ಮೇರೆಗೆ ಸಂಗೀತ ಸಂಯೋಜನೆಯನ್ನು ಅಳವಡಿಸಿ, ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದೇವೆ. ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು; ನಾಡಿದಿನಾ ಕನ್ನಡನಾಡು'' ಎಂಬ ಕೃತಿಯು ಹಿಂದೂಸ್ತಾನಿ ಸಂಗೀತ ಸಂಯೋಜನೆಯನ್ನು ಒಳಗೊಂಡ ಹನ್ನೆರಡನೆಯ ಕೃತಿಯಾಗಿದೆ. ಈಗಾಗಲೇ ಒಟ್ಟು ಮೂನ್ನೂರಕ್ಕೂ ಹೆಚ್ಚು ಕವನಗಳಿಗೆ ಸಂಗೀತ ಸಂಯೋಜನೆ ಮಾಡಿ, ಸಂಕಲನಗಳನ್ನು ಪ್ರಕಟಪಡಿಸಿದ್ದು ಸಾಹಿತ್ಯ ಹಾಗೂ ಸಂಗೀತ ಪ್ರಿಯರಿಗೆ ತಿಳಿದ ವಿಷಯ. ಇದು ಸಾಹಿತ್ಯ-ಸಂಗೀತ ಕ್ಷೇತ್ರಕ್ಕೆ ಒಂದು ಅಪೂರ್ವ ಕಾಣಿಕೆ ಎಂದೇ ಹೇಳಬೇಕು.

ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು; ನಾಡಿದಿನಾ ಕನ್ನಡನಾಡು'' ಸಂಕಲನದಲ್ಲಿ ಸೇರ್ಪಡೆಯಾಗಿರುವ ಕವನಗಳಲ್ಲಿಯ ''ಚೀಜು''ಗಳೆಲ್ಲ ಸುಶ್ರಾವ್ಯವಾಗಿ, ಶಾಸ್ತ್ರೀಯವಾಗಿ, ರಾಗಬದ್ಧವಾಗಿ, ಆಲಾಪಸಹಿತವಾಗಿ, ಶಬ್ದಾರ್ಥ ಸ್ಪಷ್ಟತೆಯಿಂದ ಭಾವ ಜಾಗೃತಿಯನ್ನು ಮಾಡುವಂತೆ ಹಾಡಿದಾಗ; ಕನ್ನಡಿಗರಿಗೆ ಹಾಗೂ ಕನ್ನಡ ನಾಡಿಗೆ ಭದ್ರ ನೆಲೆಯ ಸೃಷ್ಟಿಯಾಗಲು ಸಹಕಾರಿಯಾಗುತ್ತದೆ ಹಾಗೂ ಕನ್ನಡಿಗರು ಭಾಗ್ಯವಂತರು-ಹೃದಯವಂತರು ಆಗಲು ಅನುಕೂಲವಾಗುತ್ತದೆ. ಕನ್ನಡಿಗರಲ್ಲಿ ನವಭಾವ ಜಾಗೃತಿ, ಐಕ್ಯದ ಹಿಡಿತ, ಶಾಂತಿಯ ಆಕಾಂಕ್ಷೆ, ಫಲರೂಪ ತಾಳಲಿ ಎಂಬುದೇ ನಮ್ಮ ಆಶಯ ಹಾಗೂ ಆಕಾಂಕ್ಷೆಯಾಗಿದೆ. ಇದೇ ಈ ಕವನಗಳ ಆಧಾರ ಶ್ರುತಿ; ಈ ಶ್ರಾವಣ ಕವಿಯ ಆಕಾಂಕ್ಷೆ. ಈ ಭಾವವೇ ಪ್ರತಿ ಕನ್ನಡಿಗನ ಹೃದಯಸ್ಥ ಭಾವವಾದಾಗ, ಬೇಂದ್ರೆಯವರ ಭವಿಷ್ಯವಾಣಿ, ''ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೇ'' ಎಂಬುದು ಫಲಪ್ರದವಾದೀತು.

ಹುಬ್ಬಳ್ಳಿ.
೧೦-೨-೨೦೦೮

ಡಾ|| ಕೆ. ಎಸ್. ಶರ್ಮಾ
ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನಾ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಸಂಪಾದಕರ ಭೂಮಿಕೆ

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ೩೧-೧-೧೮೯೬ರಂದು ಧಾರವಾಡದಲ್ಲಿ ಹುಟ್ಟಿ ಧಾರವಾಡದ ಪರಿಸರ, ದೇಸೀ ಆಟ, ದೇಸೀ ಸಾಹಿತ್ಯ ಮತ್ತು ಸಂಸ್ಕೃತಿ, ದೇಸೀ ಸಂಗೀತ ಹಾಗೂ ಜಾತ್ರೆ, ಹಬ್ಬ, ವಿವಿಧ ನೋಟಗಳೊಂದಿಗೆ ಬೆಳೆದ ವರ್ಣನೆಯನ್ನು ಅವರು ಅವರ 'ಬಾಲ್ಯಕಾಂಡ'ದಲ್ಲಿ ('ಔದುಂಬರಗಾಥೆ' - ವಿಕಾಸ ಸಂಪುಟ) ಮಾಡಿದ್ದು ಹೀಗಿದೆ-

೧

ಬೆಳವಲ ಬೊಗರಿಯು ಭೌಂಗುಡುತಿರುವಾಗ
ನಿದ್ದೆಯ ಕನಸಿತ್ತು ಕಣ್ಬುಂದೆಯೆ
ಬೀಸಿದ ಜಾಳಿಗೆ ಬರಿದಾಗಿ ಬೆರಳಲ್ಲಿ
ಸುಳು ಸುಳು ಸುಳಿದಾಡುತ್ತಿತ್ತಲ್ಲಿಯೆ.

೨

ಏನು ತಲ್ಲೀನತೆ, ಲಯದ ನವೀನತೆ
ಈ ನಯಕೆ ಭಯವುಂಟೆ ಪ್ರಲಯದೊಳು ?
ಸರಭರ ಚಕ್ರದ ತೂರಾಟ, ಏರಾಟ
ಕಲಿತ ಕವಾಯತು ಇದರಿದಿರು

೩

ಹುಣಸಿಯ ಪಕ್ಕದ ಭಿಂಗರಿಗಿಂತಲು
ಸಿಂಗಾರಿ ಆಹುದಹುದೀ ಬೊಗರಿಯು
ಕೈ ಇಲ್ಲಾ, ಕಾಲೊಂದೆ, ಗೋಣಿಲ್ಲಾ, ತಲೆಯಷ್ಟೇ
ಟೊಂಕದ ಬಿಂಕವೆ, ಮೈದುಂಡಗೆ

೪

ಪೊಳ್ಳಿನ, ಸುಳ್ಳಿನ, ಸುಳಿವ ಗಾಳಿಯ ನಾದ
ಕಿವಿಮಂತ್ರ, ಸವಿಮಂತ್ರ ಓದುವುದು
ರವದೀಗು ಭವದೀಕ್ಷೆ, ಕನಸು ಕಡ್ಡಿಗು ಇದೆ
ಆವೇದ ಸಂವೇದ ಊದುವುದು

೫

ತೆಯ್ದದ್ದೆ ತೆಯ್ದದ್ದು ತುಟಗೆರೆ ಬಿಚ್ಚಿರಲು
ಉಸಿರೆ ಆಗುವದಣ್ಣ ಸಾಕಾರವು
ಯಾವ ತಿಪ್ಪೆಯ ಬಸಿರ ಬಿರಕಿಗೆ ಮೂಡಿತೊ
ಮಾವಿನ ಪೀಪಿಯ ಆಕಾರವು ?

೬

ತಾಕುವ ತೇಕುವ ನೂಕಾಟ, ಡೀಕಾಟ
ತಪ್ಪಂಟೆ ಎಲ್ಲಾರೆ ಗೇಣಾಗಿಯೇ
ಗುಂಡಿನಾಟಗಳಲ್ಲಿ ಗುರಿಯಿಟ್ಟು ಹೊಡೆದಾಗ
ವೇಧದ ಪಾಠವು ತಾನಾಗಿಯೆ

೭

ಸರಿಮನೆ, ಸರಿಬಡಿಗೆ ಯಾವುದಾದರು ಸರಿಯೆ
ನಾ ಸರಿ, ನೀ ಸರಿ ಏರಾಟವು
ಕುಂಟ್ಹಲಪಿ ಚೆಲ್ಲಾಡಿ, ಕುಂಟೆಬಿಂದಕೆ ಕುಂಟ
ಆನೆಕಿರ್ರಿಗೆ ಬೆನ್ನ ಹಾರಾಟವು

೮

ಚಾವಂಗ, ಹುಲಿಹಳ್ಳು ಎಲ್ಲೂ ಆಡಲು ಬಹುದು
ಇಬ್ಬರಿದ್ದರು ಸಾಕು ಸರಸಾಟಕೆ
ಸಾಕ್ಷಿ ಪ್ರೇಕ್ಷಕಬೇಕು, ಲೀಲಾವಿನೋದಕೆ
ನ್ಯಾಯದ ಚಾವಡಿಯ ಹೊರನೋಟಕೆ

೯

ಚಿಣಿಫಣಿ, ಚೆಂಡಾಟ, ಅನ್ನೆರಂಟೇಮಾಟ
ಕಾಲ್ಕೆದರಿ ಕಾಡುವ ಮೊಂಡಾಟವು
ಹಾಗೂ ಹೀಗೂ ಉಂಟು, ಆಟಕೆ ಕಟ್ಟಳೆ
ಮುರಿವಗೆ ಎಲ್ಲವು ಚಿನ್ನಾಟವು

೧೦

ಹಾಡುವುದೆ ಚಟವಾಗಿ, ಹಾಳಿಹಡಗಕ್ಕಾಗಿ
ಗಾಳಿಗೆ ಪಟವಾಗಿ ಏರಿಸಿದ್ದೆ
ಶಿವಪುಷ್ಪ ದತ್ತೂರಿ, ನನಗಾಗಿ ತುತ್ತೂರಿ
ಕನ್ನಡಕತ್ತೂರಿ ಬೀರಿಸಿದ್ದೆ.

೧೧

‘ಗೀತ ಗೋವಿಂದ’ವ ಹಾಡಿ ಹುಚ್ಚಾದೆನು
ಶಂಕರ ಸ್ತೋತ್ರಕೆ ಮರುಳಾದೆನು
‘ಗಂಗಾಲಹರಿ’ಯ ಮೆಚ್ಚಿ ಏನೋ ಥಾಟಿಯುಹಚ್ಚಿ
ತಾಯಿಗೆ ಸಂತೋಷ ತರುತಿದ್ದೆನು.

೧೨

‘ಮೂಕ ಪಂಚಾಶತಿ’ ಕ್ಷೇಮೇಂದ್ರನಾಕಥಿ
ಬಳ್ಳಾರಿ ಭಾಪೆಯ ಶುಕ ಸಪ್ತತಿ
‘ಬತ್ತೀಸ ಪುತ್ತಳಿ’ ಬೀರಬಲ್ಲನ ಸುರಳಿ
ಬರ್ಥೋರ್ಲ್ಡನಾ ಸರಣಿ ಸರಸಗತಿ

೧೩

ರಾಜರ ಕತೆಗಳು, ಕಳ್ಳರ ಸುಳ್ಳರ ಕತೆ
ಒಳ್ಳೆಯವರ ನೀತಿ ನಾಡನುಡಿ
ಡೊಳ್ಳಿನ ಕತೆ ಜಗಜೊಳ್ಳಿನ ಜತೆಜತೆ
ಚವುಡಿಕೆಯ ಗತ್ತಿನ ಹಳದಿ ಹುಡಿ

೧೪

ಗೊಂದಲಿಗರ ಗಡಿ ಸಂಬಾಳ ಸಿಡಿಮಿಡಿ
ಜಗದಂಬೆ ಎಂದೊಡೆ ಹೋಗೆಂಬೆನೇ ?
ಅವರಂತೆ ನಾನೆಂಬೆ, ನನ್ನಂತೆ ಅವರೆಂಬೆ
ಮೈದುಂಬಿದಂತಾಗೆ ನಾನೆಂಬೆನೇ ?

೧೫

ಈಗೇನು ನವರಾತ್ರಿ, ಆಗೇನು ಶಿವರಾತ್ರಿ
ಹರಿದಿನ ಹಬ್ಬದ ದಿನವೆಂದರೂ
ಹುಣ್ಣಿಮಿ, ಅಮಾಸಿ, ಯಾವುದಕ್ಕೂ ಸರಿಯೆ
ಸ್ವಾಗತ ಶ್ರಾದ್ಧದ ದಿನ ಬಂದರೂ

೧೬

ಶ್ರಾವಣ ಜನಜಾತ್ರಿ, ಬೆಳುದಿಂಗಳ ರಾತ್ರಿ
ಬಯಲಾಟಗಳಿಗಾಗಿ ತಾ ಮೀಸಲು
ಕ್ವಾಟೆಯ ಹುಡಿಗೆಯರು ಬ್ಯಾಟೆಯ ತರುಣರು
ಪ್ಯಾಟಿಯ ಉತ್ಸಾಹ ಜೀವನವು

೧೭

ಒಂದೊಂದು ಋತುವಿಗೆ-ಒಂದೊಂದು ಚೆಂದವು
ರಸಿಕರು ಸಂತತ ಉತ್ಸುಕರು
ಹನ್ನೆರಡು ತಿಂಗಳು ಸಾಲದೆ ಹಬ್ಬಕೆ
ಈ ಜನ ಇನ್ನೊಂದ ಬೇಡುವರು

ಧಾರವಾಡದ ಜೀವಂತ ಗಂಡುಮೆಟ್ಟಿನ ಕನ್ನಡ, ಜನಪದ ಸಾಹಿತ್ಯ, ಸಂಸ್ಕೃತಿ ತನ್ನದಾಗಿಸಿಕೊಂಡ ಬೇಂದ್ರೆ, ೧೯೧೪ರಲ್ಲಿ ಪದವಿ ಅಭ್ಯಾಸಕ್ಕಾಗಿ ಪುಣೆಗೆ ಹೋದರೂ; ಅಲ್ಲಿಯ ಕನ್ನಡಿಗರೊಂದಿಗೆ ಮಹಾರಾಷ್ಟ್ರದ ಗೆಳೆತನ ಭದ್ರಗೊಳಿಸಿದರು. ೧೯೧೭ರಲ್ಲಿ ಕುಲಪುರೋಹಿತ ಆಲೂರ ವೆಂಕಟರಾಯರ "ಕರ್ನಾಟಕ ಗತವೈಭವ" ಪ್ರಸಿದ್ಧವಾದುದನ್ನು ಪುಣೆಯಲ್ಲಿ ಕೇಳಿ-

"ಸ್ಥಿರವಾಗು, ಸ್ಥಿರವಾಗು ಮೋಹನದ ನೋಟವೇ
ಎರಗಿ ನಿನ್ನಯ ಮುಂದೆ ಮರುಗಲೆನಗೊಂದಿಷ್ಟು
ತರಲತನವೇಕಿಂತು ಒರವಿನೊಳು ಬಿದ್ದಂಥ ಚಂದ್ರಮನ ಬಿಂಬದಂತೆ
ನೆರೆಗಣ್ಣುಗಳಿಗೆ ನೀ ಕಾಣದಿದ್ದರು ನನಗೆ
ಹರುಷವನ್ನೀಯುವೆಯೆ ಹೃದಯ ಪರಿಸರದಲ್ಲಿ
ಹುರಿದುಂಬಿಸುವದಕ್ಕೆ ನಿಲ್ಲಿನ್ನು ಪ್ರಾಣವೇ ! ಹರಿದಾಡು ನೂರು ಮಡಿಯೆ"

ಎಂಬುದಾಗಿ ಉತ್ಸಾಹಭರಿತರಾದರು. ಕರ್ನಾಟಕವನ್ನಾಳಿದ-ರಾಜಮನೆತನಗಳ ಕಥೆ ಕೇಳಿ ಮರುಗಿದರು. ಪುಣೆಯಲ್ಲಿ ಲೋಕಮಾನ್ಯ ಟಿಳಕ ಹಾಗೂ ಅಗರಕರ ಇವರಲ್ಲಿ ಗೆಳೆತನವಾಗಲಿಲ್ಲ ಎಂಬುದನ್ನು ಕಂಡು; ಧಾರವಾಡದ ಎಳೆಯ ಗೆಳೆಯರ ಹೃದಯದಲ್ಲಿ ಕನ್ನಡದ ಬೀಜ ಬಿತ್ತುವ ಕನಸು ಕಾಣುತ್ತ ೧೯೧೮ರಲ್ಲಿ ಧಾರವಾಡಕ್ಕೆ ಬಂದರು.

೧

ಶಾಲೆಯಲ್ಲಿರಬೇಕು, ವಿದ್ಯಾರ್ಥಿವೃಂದದ
ಮಾಲೆಯಲ್ಲಿರಬೇಕು, ಎಳೆಗೆಳೆಯರ
ಓಣಿಯಲ್ಲಿರಬೇಕು, ಬಯಕೆಗಿತ್ತಾಗ
ಯಾವ ಜನ್ಮದ ಭಾವ ಚಿಮ್ಮಿ ಸ್ವರಾ !

೨

ಹಾಲಗೇರಿಯ ದತ್ತ ಅವನನ್ನೆ ಸುತ್ತುತ್ತ
ಚಿತ್ತ ಧ್ಯಾನಿಸುತ್ತಿತ್ತು ಮರುಸಂಭವ
ಮತ್ತೆ ಕಾಮನಕಟ್ಟೆ, ಹುಣಸೆ ಮರಗಳ ನೇರಿ
ಮಂಗಮನಸಾಡಿತ್ತು ಹೋದಭವ

೩
ಬಂದೆ ತವರಮನೆಗೆ ಬಡತನ ಎಂದೆನೇ?
ಶಾಲಾ ಮಾಸ್ತರನಾಗಿ ನಾ ಧುಮುಕಿದೆ
ಹೊಸ ಕವನ ಹೇಳುತ್ತ, ಹೊಸ ಧಾಟಿ ಹಾಡುತ್ತ
ಕಾವ್ಯ ಪ್ರಭಾತದ ಹದಿಹಾಕಿದೆ
೪
ಶಾಂತಕವಿ ಸಕ್ಕರಿ, ಕಾವ್ಯಾನಂದರ ಝರಿ
ಲಾವಣಿ, ಸಾಂಗತ್ಯ ಹುಡುಕಾಡಿದೆ
ಕೋಲುಹಾಡುಗಳನ್ನು ಹಾಡಿಸಿ ದಣಿಸಿದೆ
ಅಂಬಿಕೆಯ ನಂಬಿಕೆಯ ನಾ ಕಾಡಿದೆ.

ಎಂದು ಬೇಂದ್ರೆ, ತಮ್ಮ ಇಪ್ಪತ್ತೆರಡು ವರ್ಷಗಳ ಜೀವನದ ಸಿಂಹಾವಲೋಕನ ಕಥನದಿಂದ, ತಾವು ರೂಪಗೊಂಡ ಬಗೆಯನ್ನು ವರ್ಣಿಸಿದ್ದಾರೆ. ಮರಾಠಿಮಯವಾದ ಧಾರವಾಡದಲ್ಲಿ, ಕನ್ನಡಕ್ಕೆ ಪ್ರಾಧಾನ್ಯ ಕೊಟ್ಟು, ಕನ್ನಡ ಭಕ್ತಿ-ಪ್ರೇಮ-ಆದರ-ಕರ್ತವ್ಯ ವಿದ್ಯಾರ್ಥಿಗಳಲ್ಲಿ ಬೆಳೆಸಿದರು. ಕನ್ನಡ ಮಾತನಾಡಬಲ್ಲವರು ಯಾರೇ ಇರಲಿ; ವಿಶ್ವದಲ್ಲಿ ಎಲ್ಲೇ ಇರಲಿ-ಅವರೆಲ್ಲರೂ ಕನ್ನಡಿಗರು ಮತ್ತು ಅವರಿದ್ದ ಭಾಗ-ಹೊರನಾಡು ಆಗಿದ್ದರೂ; ಅದು ಕರ್ನಾಟಕದ ಸೊತ್ತು ಎಂಬ ಅಭಿಮಾನ ಬೆಳೆಸಿದರು. ಧಾರವಾಡದಲ್ಲಿ ''ಗೆಳೆಯರ ಗುಂಪು'' ಕಟ್ಟಿದರು; ಅದನ್ನು ಕರ್ನಾಟಕದ ನಾಕೂಕಡೆ ಹಬ್ಬಿಸಿದರು; ''ತಾಯಿ ಭುವನೇಶ್ವರಿ''ಯ ಮೆರವಣಿಗೆಯಿಂದ ೧೯೨೬ರಲ್ಲಿ ನಾಡಹಬ್ಬ ಆಚರಿಸುವ ಪರಂಪರೆ ಪ್ರಾರಂಭಿಸಿದರು, ಧಾರವಾಡದಲ್ಲಿ-ಬೇಂದ್ರೆ ಮಾಸ್ತರ! ೧೯೧೯ ರಿಂದ 'ವಾಗ್ಭೂಷಣ' ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರಾಗಿದ್ದ ಬೇಂದ್ರೆ, ೧೯೨೬ರಲ್ಲಿ - 'ಸ್ವಧರ್ಮ' ಪತ್ರಿಕೆ, ೧೯೨೯ರಲ್ಲಿ 'ಜಯಕರ್ನಾಟಕ' ಪತ್ರಿಕೆ ಮತ್ತು ೧೯೩೮ರಲ್ಲಿ-'ಜೀವನ' ಪತ್ರಿಕೆಯ ಸಂಪಾದಕರಾಗಿ, ಸಂಪಾದಕೀಯ ಬರೆಯುತ್ತ ಕವನ, ಲೇಖನ ಪ್ರಕಟಿಸುತ್ತ ಕರ್ಣಾಟಕದ ಕನ್ನಡಿಗರ ಮನಸ್ಸು ಕಟ್ಟಿದರು, ಭದ್ರಪಡಿಸಿದರು, ಕನ್ನಡಿಗರಲ್ಲಿ ಐಕ್ಯಭಾವನೆ ಬೆಳೆಸಲು ಶ್ರಮಿಸಿದರು. ಈ ಕಾಲಕ್ಕೆ ಬೇಂದ್ರೆಯವರ ಮನಸ್ಸಿನ ಹದ ಹೀಗಿತ್ತು-

> ''ಇಂದಿನ ಕನ್ನಡ''ವು ಸಪ್ತ ಭಾಷಾ ಸರಸ್ವತಿಗಳ ನೀರ್ಕುಡಿದು, ಕಡಲಾಗಿ ಬಿತ್ತರಗೊಂಡಿದೆ. ಗತೇತಿಹಾಸದಲ್ಲಿ ಅನೇಕ ಸಲ ಕನ್ನಡದ ಉನ್ನತ ಭೂಮಿಯು ಕೂರ್ಮಪೃಷ್ಠವನ್ನು ಆಶ್ರಯಿಸಿದ ಭೂತಲದಂತೆ ಸ್ಥಿರರಾಜ್ಯಗಳಿಗೆ ಭದ್ರವಾದ ನೆಲೆಯಾಗಿದ್ದುದು ಕಂಡು ಬಂದಿದೆ. ಕನ್ನಡವೆಂಬ ಹೆಸರು ಕೂಡ, ಕೃಷ್ಣೆ ಭೀಮರಥಿಗಳಿಗೆ ಅಣ್ಣನಾಗಿರುವುದು-ಕುಳಒಕ್ಕಲು, ಹೊಲೆಯರು, ಬಣಂಜಿಗರು, ನಾಡವರು, ಕುರುಂಬರು, ಕಲ್ಲರು, ವಿಂಧ್ಯಸಹ್ಯಗಳಿಗಿಂತಲೂ

ಹಿಂದಿನವರಾಗಿದ್ದಾರೆ. ಇಂದಿನ ಹಿಂದೂ ತತ್ತ್ವಜ್ಞಾನವು ಕನ್ನಡ ನಾಡಸಸಿ; ಮತ ಸ್ವಾತಂತ್ರ್ಯದ ರಂಗಭೂಮಿಯು ಕನ್ನಡವಲ್ಲದಿದ್ದರೆ ಇನ್ನಾವುದು? ನಾಟ್ಯ, ನಾಡವರ ಜಾತಿಶೀಲ. ಕಲಿತನವು ದಿನದ ಹೋರೆ; ತ್ಯಾಗವು ಜೀವದುಸಿರು! ಇಲ್ಲಿಯ ಜನಸಾಮಾನ್ಯಕ್ಕೆ ಪಂಚಮತಮುಗಳ ಪಂಚಾಮೃತವು ಕನ್ನಡದೊಳಲ್ಲದೆ ಯಾವ ಭಾಷೆಯಲ್ಲಿದೆ? ಇಲ್ಲಿಯ ಕಲ್ಲೇ ವೀರಶಾಸನ! ಸೊಲ್ಲೇ ಸಾಹಿತ್ಯದ ಸಾರ! ಇಂಥ ಜನದ, ನಾಡಿನ, ನುಡಿಯ, ಸಂಸ್ಕೃತಿವೈಭವವನ್ನು ಸಾಧಾರವಾಗಿಯೂ, ಸಾಂಗವಾಗಿಯೂ, ಸಂಪೂರ್ಣವಾಗಿಯೂ, ಸರಸವಾಗಿಯೂ ವಿವರಿಸುವುದು ಅಲ್ಪ ಸಾಹಸವಲ್ಲ. ಇದನ್ನು ವೆಂಕಟರಂಗೋ ಕಟ್ಟಿಯವರ ಕಾಲದಿಂದಲೂ ಅನೇಕರು ಕರ್ನಾಟಕದ ಭವ್ಯ ಇತಿಹಾಸವನ್ನು ಬರೆಯುತ್ತ ಬಂದಿದ್ದಾರೆ''

- ಬೇಂದ್ರೆಯವರ ಅಪ್ರಕಟಿತ ಮುನ್ನುಡಿ

ಈ ಹದವನ್ನು, ಪ್ರತಿ ಕನ್ನಡಿಗರ ಹೃದಯದಲ್ಲಿ ಕಸಿಮಾಡಲು ಬೇಂದ್ರೆ ಸತತವಾಗಿ ಪ್ರಯತ್ನಿಸುತ್ತಿದ್ದರು. 'ಗರಿ' ಕವನ ಸಂಗ್ರಹದೊಳಗಿನ 'ಸೀಮೋಲ್ಲಂಘನ' ಎಂಬ ಕವನ, ಕನ್ನಡಿಗರು ಯಾವ ಯಾವ ಸೀಮೆ ಮೀರಬೇಕು ಎಂಬುದನ್ನು ಸೂಚಿಸುತ್ತದೆ.

ಹೀನಪ್ರಕೃತಿಯಿಂದ, ಉತ್ತಮಪ್ರಕೃತಿಗೆ ಹೋಗುವ ವಿಧಿವಿಧಾನಗಳ ವಿದ್ಯಾಕೌಶಲ್ಯವೇ ಸಂಸ್ಕೃತಿ! ನರನಲ್ಲಿ ಪಶುಭಾವ ಅರಗಿ, ಮಾನವತೆ ಮಾಗಿ, ದಿವ್ಯತೆಯು ರಸವಾಗಿ ಬರುವುದೇ ಜೀವನ ಸಾಫಲ್ಯ. ಕನ್ನಡ ನುಡಿಯು ಎಷ್ಟು ಮಟ್ಟಿಗೆ ಆ ವಿದ್ಯೆಯ ಮಂತ್ರವಾಗಿ ಹವಣುಗೊಂಡಿದೆ, ಕನ್ನಡಿಗರ ನಡೆಯು, ಜೀವನ ತಂತ್ರದ ಯಾವ ಹದಕ್ಕೆ ಬಂದಿದೆ, ವಿಶಾಲ ಕಾಲದಲ್ಲಿ - ಈ ನಾಡಿನ ಪುಣ್ಯಕ್ಷೇತ್ರದಲ್ಲಿ, ಸಂಸ್ಕೃತಿಯ ರಾಸಲೀಲೆಯು ಯಾವ ಯಾವ ಮಟ್ಟ ಮುಟ್ಟಿ ಯಾವ ಘಟ್ಟಕ್ಕೆ ತಲುಪಿದೆ ಎಂಬುದರ ಹೆಜ್ಜೆ ಗುರುತುಗಳು ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು; ನಾಡಿದಿನಾ ಕನ್ನಡನಾಡು'' ಎಂಬ ಈ ಸಂಕಲನದಲ್ಲಿ ಪ್ರಭಾವಿಯಾಗಿ ಒಡಮೂಡಿವೆ.

''ಜೈನ ಮನ್ವಂತರಗಳಲ್ಲಿ ಸಮಾಜ ವಿಕಾಸದ ಚಿತ್ರ'' ಎಂಬ ಲೇಖನ, ಬೇಂದ್ರೆ ೧೯೩೫ರಲ್ಲಿಯೇ ಬರೆದು ಪ್ರಕಟಿಸಿದ್ದರು. ''ಜೈನರ ಪ್ರಥಮ ತೀರ್ಥಂಕರ ಪುರುದೇವನ ಮಗ-ಭರತನೇ ಭಾರತ ಎಂಬ ರಾಷ್ಟ್ರನಿರ್ಮಿತಿಗೆ ಮೂಲ'' ಎಂಬ ವಿಚಾರವು ಕರ್ನಾಟಕದ ಪ್ರಾಚೀನತೆಗೆ ಭದ್ರವಾದ ನೆಲೆ. ಇದೇ ಕಾಲಕ್ಕೆ ''ಮಾನವ ವಂಶ ಶಾಸ್ತ್ರಜ್ಞರು ಸಂಶೋಧಿಸಿ ಕಂಡ ಸಮಾಜ ವಿಕಾಸ ಕುರಿತು ಇನ್ನೊಂದು ಲೇಖನ ಬರೆಯಬೇಕಾದೀತು'' ಎಂಬ ಸೂಚನೆ ಬೇಂದ್ರೆ ಕೊಟ್ಟಿದ್ದರು. ಈ ಲೇಖನಕ್ಕೆ ಆಧಾರ ಆದಿಕವಿ ಪಂಪನ ''ಆದಿ ಪುರಾಣ'' ಎಂದೇ ನೆನಪು

ಮಾಡಿಕೊಟ್ಟಿದ್ದಾರೆ.

''ಕರ್ನಾಟಕದಲ್ಲಿ ಭಕ್ತಿ ಪಂಥ'' ಎಂಬ ಲೇಖನವನ್ನೂ ಬೇಂದ್ರೆ ೧೯೩೯ರ ''ಜೀವನ'' ಪತ್ರಿಕೆಯ ಸಂಪಾದಕರಾಗಿದ್ದಾಗ ಬರೆದು ಪ್ರಕಟಿಸಿದ್ದು, ಅದರಲ್ಲಿ ಸಮಗ್ರ ಕರ್ಣಾಟಕದ, ಅದರ ಸುತ್ತುಮುತ್ತಲಿರುವ ಭಕ್ತಿ ಸಂಪ್ರದಾಯುಗಳ ಮತ್ತು ಭಾರತದಲ್ಲಿ ಹಬ್ಬಿದ ಭಕ್ತಿಯ ಮಹಿಮೆ ವಿವರವಾಗಿ, ಅವತರಣಿಕೆಗಳೊಂದಿಗೆ ವರ್ಣಿಸಿದ್ದಾರೆ. ಕರ್ನಾಟಕದಲ್ಲಿ ಹಬ್ಬಿರುವ ರಾಜರು, ಮಹಾರಾಜರುಗಳು ಕಟ್ಟಿಸಿದ ಗುಡಿಗೋಪುರಗಳಲ್ಲಿ ಗಂಟೆಗಳು ಇಂದಿಗೂ ಭಕ್ತರನ್ನು ಕರೆಯುವವು'' ಎಂದಿದ್ದಾರೆ. ''ವೈಷ್ಣವ ಭಕ್ತಿ ಪಂಥವು ಕನ್ನಡ ಶಿವಶರಣರ ಜೊತೆಜೊತೆಯಲ್ಲಿಯೇ ಅಂಕುರಿಸಿದರೂ; ಅದರ ಪ್ರಾಬಲ್ಯ ತಡವಾಗಿ ಬಂತು. ಕನ್ನಡದ ಶಿವಶರಣರು ತಮ್ಮ ಭಕ್ತಿಯ ಯುಕ್ತಿಯಿಂದ ಕೈಲಾಸವನ್ನೇ ಕಲ್ಯಾಣಕ್ಕೆ ತರಲು ಮಾಡಿದ ಅದ್ಭುತ ಸಾಧನೆಯು ಕನ್ನಡದ, ಅದೇಕೆ ಭಾರತದ, ಅಷ್ಟೇಕೆ ಈ ಇಡಿ ಜಗತ್ತಿನ ಇತಿಹಾಸದಲ್ಲಿಯೇ ರೋಮಹರ್ಷಕವಾಗಿದೆ'' ಎಂದೂ ಬೇಂದ್ರೆ ನುಡಿದಿದ್ದಾರೆ.

ಈ ರೀತಿ ನಾಡು, ನುಡಿ, ಮತ, ಪಂಥ ಕುರಿತು; ಭಾರತದ ಸ್ವಾತಂತ್ರ್ಯ ಕುರಿತು ವಿಚಾರ ಮಾಡುವುದು ೧೮೫೭ ರಿಂವ ಪ್ರಾರಂಭವಾಗಿತ್ತು. ''ಕರ್ಣಾಟಕ ಏಕೀಕರಣ'' ವಿಚಾರವು ಆಗೀಗ ತಲೆ ಎತ್ತಿದರೂ ೧೯೪೭ರ ವರೆಗೆ ಗುಪ್ತಮಂತ್ರವಾಗಿತ್ತು. ೧೯೪೭ ರಿಂದ ೧೯೫೬ರ ವರೆಗೆ ಭಾಷಾವಾರು ವಿಭಜನೆಯ ಕಾರ್ಯಕ್ಕೆ ಆವೇಶ ತುಂಬಿ, ಕರ್ನಾಟಕ ರಾಜ್ಯದ ರಚನೆಯಾದರೂ; ಅದಕ್ಕೆ ಮೈಸೂರು ರಾಜ್ಯ ಎಂದು ಹೆಸರಿಸಲಾಯಿತು, ಆದರೆ ''ಕರ್ನಾಟಕರಾಜ್ಯ'' ಎಂದು ನಾಮಕರಣವಾದದ್ದು ೧೯೭೩ಕ್ಕೆ. ಇಷ್ಟಾದರೂ; ಸೀಮಾವಾದಗಳು ಹಸಿಯಾಗಿಯೇ ಉಳಿದಿವೆ. ಆದುದರಿಂದ ಬೇಂದ್ರೆಯವರು ಬಳಸಿದ 'ಭಕ್ತಿ' ಶಬ್ದವು ಐಕ್ಯಸೂಚಕವಾಗುವುದರ ಬದಲಾಗಿ ಅದು ವಿಭಕ್ತಿ=ಒಡಕಿನ ಧ್ವನಿಯಾಗಿ ವಿಜೃಂಭಿಸುತ್ತಿರುವುದನ್ನು ಕಂಡು ಕೊರಗುತ್ತಿದ್ದರು. ಹೀಗಾಗಿ ಕರ್ನಾಟಕ=ಭಾರತ=ಜಗತ್ತು ಒಂದಾಗಬೇಕೆಂಬ ವಿಚಾರದ ಪ್ರತಿಪಾದನೆ ಮಾಡಿದ್ದರು. ಈ ವಿಚಾರಕ್ಕೆ ಎಷ್ಟು ಜನರ ವಿಚಾರಗಳು ಪೂರಕವಾಗಿದ್ದವು ಎಂಬುದು ತಿಳಿಯಬೇಕಾದರೆ-ಕರ್ಣಾಟಕ ರಾಜಮನೆತನಗಳ ಇತಿಹಾಸ; ಸಾಮ್ರಾಜ್ಯ ಅಧಿಪತಿಗಳ ಇತಿಹಾಸ; ಸಂಸ್ಥಾನಿಕರ ಇತಿಹಾಸ: ಹಿಂದುಸ್ಥಾನ+ಪಾಕಿಸ್ಥಾನ ಕೂಡಿ ಭಾರತ ಒಂದಾಗಬೇಕೆಂಬ ಇತಿಹಾಸ, ಭಾರತ ಸ್ವಾತಂತ್ರ್ಯ ಹೋರಾಟದ ಇತಿಹಾಸ.............ನಾಡು, ನುಡಿ, ಸಂಸ್ಕೃತಿ ಹಾಗೂ ರಾಷ್ಟ್ರ ಮತ್ತು ವಿಶ್ವ ಒಂದಾಗಬೇಕೆಂಬ ಸಮಷ್ಟಿಯ ಕಲ್ಯಾಣದ ಕನಸಿನ ಇತಿಹಾಸ ವಿವರವಾಗಿ ತಿಳಿಸಿಕೊಡಲು ೨೦೦೮ರಲ್ಲಿ - ಕರ್ನಾಟಕ ರಾಜ್ಯ, ಮುಕ್ತ ವಿಶ್ವವಿದ್ಯಾಲಯದ ಪ್ರಸಾರಾಂಗವು, ಡಾ|| ಎ. ರಂಗಸ್ವಾಮಿಯವರ ಸಂಪಾದಕತ್ವದಲ್ಲಿ; ಕುಲಪತಿ ವಿವೇಕ ರೈ ಬರೆದ ''ಬದ್ಧತೆಯಿಂದ ಬದ್ಧತೆಯೆಡೆಗೆ'' ಎಂಬ ಮುನ್ನುಡಿ ಹಾಗೂ ಡಾ|| ಡಿ. ಕೆ. ರಾಜೇಂದ್ರರ ನಿರ್ದೇಶಕ ನುಡಿ

ಇವುಗಳಿಂದ ಕೂಡಿದ ಬೃಹತ್ ಗ್ರಂಥ ''ಮುಕ್ತ ಕರ್ನಾಟಕ'' ಪ್ರಕಟಿಸಿದ್ದು ಪ್ರೇರಕ ಶಕ್ತಿಯಾಗಿದೆ. ಈ ಶಕ್ತಿಯೊಂದಿಗೆ ಇಂದಿನ ಸಾಹಿತ್ಯ, ಸಂಸ್ಕೃತಿಯ ಅಭಿಮಾನಿಗಳು, ಪಂಡಿತರು, ಜನಸಾಮಾನ್ಯರು ಮಾಡಿದ ಹೋರಾಟದಿಂದ, ೩೧ನೇ ಅಕ್ಟೋಬರ, ೨೦೦೮ರಂದು ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಲಭಿಸಿದ್ದು-ಹೊಸ ಕ್ಷಿತಿಜ ಕಾಣುವಂತೆ ಆಗಿದೆ. ಎಲ್ಲರ ಆನಂದ ದ್ವಿಗುಣಿತವಾಗಿದೆ.

''ಪಾಶ್ಚಾತ್ಯ ಸಂಸ್ಕೃತಿ, ಅದರಲ್ಲಿ ಅಮೇರಿಕನ್ ಸಂಸ್ಕೃತಿಯೇ ಇಂದಿನ ನಾಳಿನ ಸಂಸ್ಕೃತಿ ಎಂದೂ, ಉಳಿದೆಲ್ಲ ಪ್ರಕೃತಿಯವರು ಸುಶಿಕ್ಷಿತರಾಗಿ ಈ ಮಟ್ಟಕ್ಕೆ ಏರಬೇಕು; ಇಲ್ಲದಿದ್ದರೆ ತಾರತಮ್ಯದಿಂದ ಬರುವ ಕೆಳಗಿನ ಮಟ್ಟಗಳಲ್ಲಿ, ತಮ್ಮ ಕರ್ಮಾನುಸಾರ ಬಂದ ಭೋಗವನ್ನು ಪಡೆಯುತ್ತಿರಬೇಕು'' ಎಂದು ಬೇಂದ್ರೆಯವರು ಅವರ ''ಕರ್ನಾಟಕ ಸಂಸ್ಕೃತಿ'' ಎಂಬ ಲೇಖನದಲ್ಲಿ ಬಹಿರಂಗ ಪಡಿಸಿದ ವಿಚಾರವೇ, ಕಳೆದ ಏಳೆಂಟು ವರ್ಷಗಳಲ್ಲಿ ರೌದ್ರರೂಪ ತಾಳುತ್ತಿದೆ. ಕೌಟುಂಬಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಹಣವೇ ಪ್ರಬಲವಾಗಿ; ವೈರಭಾವ ಮತ್ತು ಅಹಂಭಾವ ದಿನದಿನಕ್ಕೆ ಬೆಳೆಯುತ್ತಿದೆ. ''ಈ ಮೂರು ಮುಖಗಳು ಒಮ್ಮುಖವಾಗಿ ಬಾಳುವೆ ಮಾಡಬೇಕಾದರೆ, ಒಮ್ಮುಖದ ಬಾಳುವೆಯ ಸ್ವಭಾವವಾದ ಪಾರಮಾರ್ಥಿಕದ ರೀತಿಯು ವ್ಯವಹಾರ ರಂಗದಲ್ಲಿ ಇಳಿಯಬೇಕು. ಆದರೆ ಪಾರಮಾರ್ಥಿಕ ಮಾರ್ಗದಲ್ಲಿಯೇ ಭೇದ ತಲೆಯೆತ್ತಿ ನಿಂತಿದೆ. ಇಷ್ಟೇ ಅಲ್ಲ; ಭೇದವೇ ಪರಮಾರ್ಥ, ಅಭೇದವು ಅಜ್ಞಾನ ಎಂಬ ಮಾತೂ ಬಂದಿದೆ. ಅಭೇದವೆಂಬುದು ಸಾಮಾನ್ಯ, ಭೇದ ಎಂಬುದು ಶೇಷ. ಈ ಅಭೇದದಲ್ಲಿ ಭೇದವೇ ವಿಶೇಷ''ವಾಗುತ್ತಿದ್ದುದು ಬೇಂದ್ರೆಯವರಿಗೆ ಸರಿ ಎನಿಸಲಿಲ್ಲ. ಆದುದರಿಂದ ಅವರು-

೧. ನಮ್ಮ ನಮ್ಮ ಸಂಸ್ಕೃತಿ ವಿಶೇಷಗಳು ಬಹಿರ್ಮುಖ ಐಕ್ಯವನ್ನು ಪಡೆಯಬೇಕು.

೨. ನಮ್ಮ ಪ್ರಕೃತಿಯ ವಿಕೃತಿಯು ಇಲ್ಲದಾಗಿ, ಸಂಸ್ಕೃತಿಯು ನಮ್ಮ ಜೀವದಾಕೃತಿಯಲ್ಲಿಯೆ ಬೇರುಬಿಟ್ಟು, ನಮ್ಮ ಅವ್ಯಕ್ತ ಸೌಂದರ್ಯದ ಅಭಿವ್ಯಕ್ತಿಯಂತೆ, ಅದೇ ಸಂಸ್ಕೃತಿ ಪುಷ್ಪಿತವಾಗದಿದ್ದರೆ, ನಾಳಿನ ನಾಡಿದಿನಾ ಮಧುರವಾದ ಬಾಳಿನ ಬೀಜಗಾಳಿನ ಕೋಶದಂತೆ ಮೂಡಲಿರುವ ಫಲಕ್ಕೆ ಕ್ಷೇತ್ರವಾದರೂ ಯಾವುದು? ವ್ಯಕ್ತಿವ್ಯಕ್ತಿಯ ಪ್ರಕೃತಿಯು ಸಹಜವಾಗಿ ಉದಾತ್ತವೂ, ಉನ್ನತವೂ ಆಗದಿದ್ದರೆ, ಜೀವನದ ಅರ್ಕ ಮೂಡುವುದಾದರೂ ಹೇಗೆ? ಪರಿಸ್ಥಿತಿಯು ಮನಸ್ಥಿತಿಯ ಪರಿಪಾಕವೆನಿಸಬೇಕು.

೩. ಮಾನವನ ಹೃದಯಾಂತರಾಳದ ಆತ್ಮಿಕ ದಿವ್ಯಭಾವಗಳು ಅಮೃತಪಾಕವಾಗುವ ಹಾದಿಯನ್ನು ತೋರಬೇಕು. ಆಗ ಸಂಸ್ಕೃತಿ ಸಫಲವಾಗಬೇಕು, ಎಂಬ ಕನಸು ಕಾಣುತ್ತಿದ್ದರು.

''ಈಗಿನ ಕರ್ನಾಟಕವನ್ನು ಸುತ್ತುಮುತ್ತಿಕೊಂಡು ನಾಲ್ಕು ಭಾಷಿಕ ಸಂಸ್ಕೃತಿಗಳಿವೆ (ಕನ್ನಡ, ಮರಾಠಿ, ಗುಜರಾಥಿ, ಆಂಧ್ರ) ಎಂಬುದು ವರ್ತಮಾನಕಾಲದ ಸುದ್ದಿ. ಅವುಗಳೊಡನೆ ಸೀಮೆ ಕಾಪಾಡಿಕೊಂಡು, ಮರ್ಯಾದೆಯಿಂದ, ಗೌರವ ಕಾಯ್ದುಕೊಳ್ಳುವುದರಲ್ಲಿ ನಮ್ಮ ಸಂಸ್ಕೃತಿಯ ಕೆಚ್ಚು ಕಂಡು ಬರುವದಿದೆ. ಸೀಮಾ ಪ್ರಾಂತದಲ್ಲಿ ಸ್ಪೃಶ್ಯಾಸ್ಪೃಶ್ಯತೆಯ ಒಣ ಮಡಿವಂತಿಕೆ ಮಾಡಿ, ನಮ್ಮ ಸಂಸ್ಕೃತಿಯೆ ಮೇಲೆಂಬುದು, ಯಾವ ಸಂಸ್ಕೃತಿಗೂ ಗೌರವ ತರಲಾರದು. ಏಕೆಂದರೆ ಇಲ್ಲಿಯ ಎಲ್ಲ ಭಾಷಿಕ ಸಂಸ್ಕೃತಿಗಳ ತಿರುಳು ಭಾರತೀಯವಾಗಿದೆ. ಅವುಗಳ ವಿಶೇಷವಷ್ಟೇ ತಮ್ಮ ತಮ್ಮದಾಗಿದೆ'' ಎಂದಿದ್ದರು ಬೇಂದ್ರೆ ; ಬಹಳ ಹಿಂದೆ.

ಆದರೆ ಈಗ ಪಾಶ್ಚಿಮಾತ್ಯ ಸಂಸ್ಕೃತಿ, ಎಲ್ಲ ಸಂಸ್ಕೃತಿಗಳನ್ನು ಜಾಗತೀಕರಣ, ಔದ್ಯೋಗೀಕರಣದ ಧೋರಣೆಯಿಂದ ನುಂಗಲು ಮುಂದಾಗಿದೆ. ಅಮೇರಿಕೆಯಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣ ಆಗುವ ಸ್ಥಿತಿ ನಿರ್ಮಾಣಗೊಂಡು, ಭಾರತ ಮತ್ತು ಇನ್ನುಳಿದ ದೇಶಗಳಲ್ಲಿಯ ಉದ್ಯೋಗಗಳು ಮುಚ್ಚಲ್ಪಟ್ಟು, ನಿರುದ್ಯೋಗ ಹಾಗೂ ಬಡತನದ ತಾಂಡವನೃತ್ಯ ಉಲ್ಬಣವಾಗುವ ಲಕ್ಷಣಗಳು ಇವೆ. ರಾಜಕೀಯ, ಸಾಮಾಜಿಕ, ಪಾರಮಾರ್ಥಿಕ ಮತ್ತು ಕೌಟುಂಬಿಕ ಸ್ವರೂಪ ಬದಲಾಗಿ ಜನರಲ್ಲಿ ಆಕ್ರಮಣಭಾವ ಬೆಳೆಯುತ್ತಿದೆ. ಇದರ ಹಾನಿಯನ್ನು ಬೇಂದ್ರೆಯವರು ೧೯೭೮ರಲ್ಲಿ 'ಯಾವುದು ಸೀಮಾವಾದ' ಎಂಬ ಕವನದಲ್ಲಿ-

೧

''ಹೆಜ್ಜೆ ಹೆಜ್ಜೆಗೆ ಸೀಮೆ !

೨

ಒಪ್ಪಬೇಕು ;
ಇಲ್ಲಾ-ತಪ್ಪಬೇಕು

೩

ಆಕ್ರಮಣಕೆ ಇಲ್ಲಾ ಅಂತ
ಒಬ್ಬ ಒತ್ತಪ್ಪ, ಇನ್ನೊಬ್ಬ ಮೆತ್ತಪ್ಪ,
ಆಟ ನೋಡುವವರೆ ಸುತ್ತಪ್ಪ

೪

ಸೀಮೆ-ನಾಗನ ತಳಕು,
ಅಲ್ಲಿಪ್ಪ ಹುತ್ತಪ್ಪ
ಕುರುಡು-ಕತ್ತಲರಾತ್ರಿ
ದೇವರಿಗೆ ಪರಲೋಕಯಾತ್ರಿ''

ಎಂಬ ದಶಪದಿಯಲ್ಲಿ, ಮಾರ್ಮಿಕವಾಗಿ ವರ್ಣಿಸಿದ್ದಾರೆ. ಅದರ ಸ್ಪಷ್ಟ ಚಿತ್ರ ಈಗ ಎಲ್ಲರಿಗೂ ಕಾಣುವಂತಾಗಿದೆ. ಹಣದ ದಾಹ, ಅಧಿಕಾರದ ದಾಹ, ಆಕ್ರಮಣದ ದಾಹ ಹೆಚ್ಚಾಗಿ ಪ್ರಜೆಗಳ ಸುಖ=ದೇವ ಎಂಬುದು ಪರಲೋಕಯಾತ್ರೆ ಮಾಡುವ ಸ್ಥಿತಿ ನಿರ್ಮಾಣಗೊಂಡಿದೆ. ಇದು ಬದಲಾಗಬೇಕಾದರೆ-ಬೇಂದ್ರೆಯವರು ಕನ್ನಡಿಗರನ್ನು ಕುರಿತು ಹೇಳಿದ ಮಾತು ಜಗತ್ತಿನ ಎಲ್ಲ ಭಾಷೆಯ ಜನರಿಗೆ ಅನ್ವಯಿಸುತ್ತದೆ. ೧೯೭೦ರಲ್ಲಿ ಬೇಂದ್ರೆಯವರು ''ಇದು ನಭೋವಾಣಿ'' ಎಂಬ ಮಹತ್ತ್ವದ ಕವನ ರಚಿಸಿ ಸಾಮರಸ್ಯದ ಸಂದೇಶ ನೀಡಿದ್ದಾರೆ. ಅದರ ಭಾವ ಹೀಗಿದೆ-

ಪ್ರತಿಯೊಬ್ಬರ ಭಾಷೆ ಎಂಬುದು ಆಕಾಶದಷ್ಟು ಉನ್ನತ! ಅವರ ಭಾವ ಎಂಬ ಪ್ರಕಾಶ ಶುದ್ಧವಾದಷ್ಟೂ; ಅವರ ಆತ್ಮಶಕ್ತಿಗಳು ಪವಿತ್ರವಾಗುತ್ತವೆ, ಉದಾತ್ತವಾಗುತ್ತವೆ. ತಾವೇ ಶ್ರೇಷ್ಠ ಎಂಬ ದುರಭಿಮಾನ ಸಲ್ಲದು. ದುರಭಿಮಾನವೇ ದ್ವೇಷಕ್ಕೆ, ವೈರಕ್ಕೆ ಮೂಲ. ಹಿಂದಿನ ಜಾಗತಿಕ ಯುದ್ಧಗಳಿಂದ ಮಾನವ, ಬುದ್ಧಿ ಕಲಿಯದಿದ್ದರೆ; ಮತ್ತೆ ಜಾಗತಿಕ ಯುದ್ಧ ಎಂಬುದು ಅನಿವಾರ್ಯವಾದೀತು. ಆಗ ಸರ್ವನಾಶವಾದೀತು, ಆಗ ಶಾಂತಿ ಅಸಾಧ್ಯವಾದೀತು. ಆದುದರಿಂದ ಬೇಂದ್ರೆಯವರು ಈ ಸಂಕಲನದಲ್ಲಿ ಐಕ್ಯದ, ಸಾಮರಸ್ಯದ ಮಂತ್ರಗಳನ್ನೇ ಸಾರುತ್ತ ಬಂದಿದ್ದಾರೆ. ಇವುಗಳಿಗೆ ಕನ್ನಡಿಗರ-

''ಹೃದಯದ ಬಂದರ ತೆರವು ಇರಲಿ
ಅಲ್ಲಿ ಬುದ್ಧಿಯ, ಶುದ್ಧ ಭಾವದ ಮನೆ ಕಟ್ಟೀತು.
ನೀನೆಲ್ಲೆ ಇರು ಕೇಳುವ ಸೂತ್ರ ಸರಿ ಇರಲಿ
ಹೃದಯ ತೆರೆದಿರಲಿ''

ಎಂಬ ಪ್ರಾರ್ಥನೆ ಹಾಗೂ ಬಿನ್ನಹ ಬೇಂದ್ರೆ, ಮಾಡಿದ್ದಾರೆ. ಇದಕ್ಕಾಗಿ ಸಮಗ್ರ ಕನ್ನಡ ಸಾಹಿತ್ಯದ ಆಧಾರಪಡೆದು, ಅವರು ಸಾರಿದ್ದು ಹೀಗೆ-

ಜೈನ ಸಾಹಿತ್ಯದೊಳಗಿನ ದಿವ್ಯಧ್ವನಿ ಸಿದ್ಧಾಂತ, ವೀರಶೈವ ಸಾಹಿತ್ಯದೊಳಗಿನ ಒಲವಿನ ಸಿದ್ಧಾಂತ ಮತ್ತು ವೈದಿಕ ಅದ್ವೈತ ಭಾವದ ಸಿದ್ಧಾಂತಕ್ಕೆ ಕನ್ನಡಿಗರು ಸ್ವಾಗತಿಸಲಿ. ಮೂಲದಲ್ಲಿ ಇವು ಶ್ರಾವಕ, ಶರಣ ಮತ್ತು ದಾಸರು ಭಕ್ತಿಮಾರ್ಗದ ಉಪಾಸನೆಯಿಂದ ಪಡೆದ ಅನುಭಾವಗಳು. ಇವುಗಳನ್ನೇ ಇಂದು ವ್ಯಕ್ತಿತ್ವದ ಸಾಮರ್ಥ್ಯವನ್ನು ಬೆಳೆಸಲು ಉಪಯೋಗಿಸಿಕೊಳ್ಳುವುದರಿಂದ ಭೇದ ಬುದ್ಧಿ ಅಡಗಿ; ಐಕ್ಯ ಎಂಬುದಕ್ಕೆ ಕನ್ನಡಿಗರ ಭಾವ ಮತ್ತು ಬುದ್ಧಿ, ವಿವೇಕದಿಂದ ಸ್ವೀಕಾರ ಮಾಡಲು ಸಾಧ್ಯವಾಗುತ್ತದೆ. ಇದು ಬೇಂದ್ರೆ ಕಂಡ ''ನಾಡಿದಿನಾ ಕನ್ನಡನಾಡು''. ಇದರ ಸ್ವರೂಪ, ಈ ದೃಷ್ಟಿಕೋನ ಎಲ್ಲ ಭಾಷಿಕರದಾಗಬೇಕಾಗಿದೆ. ಇದು ಸಫಲವಾದಾಗ, ಎಲ್ಲ ಸಂಸ್ಕೃತಿಯವರು ಒಂದಾಗುತ್ತಾರೆ. ಇದೇ ನವಮಾನವೀಯತೆ! ಮನುಷ್ಯರಂತೆ ಕಾಣುವ ಪ್ರಾಣಿಗಳೆಲ್ಲ ಮಾನವರಲ್ಲ ಎಂದು ಪ್ರಾಜ್ಞರು ಸಾರುತ್ತಲೇ ಬಂದಿದ್ದಾರೆ. ಮಾನವರಲ್ಲಿಯ

ಪಶುಗುಣ ಅಸ್ತವಾಗಿ; ಹೃದಯವಂತಿಕೆ ಮತ್ತು ವಿವೇಕೋದಯವಾಗಬೇಕಾಗಿದೆ. ಮಹಾಯೋಗಿ ಶ್ರೀ ಅರವಿಂದರು ಅವರ 'ಸಾವಿತ್ರಿ' ಎಂಬ ಭವಿಷ್ಯಬೋಧವಿರುವ ಕಾವ್ಯದಲ್ಲಿ-

"Only the pure in soul can walk in light" ಎಂದಿದ್ದಾರೆ. ಬೇಂದ್ರೆಯವರ ಕಾಣ್ಕೆಗಳ ಮಾರ್ಗ ಇದು. ಆತ್ಮದ ಶುದ್ಧಿಯೇ ಶಾಶ್ವತ ಬೆಳವಣಿಗೆಯ ಕಾರಣಶಕ್ತಿ! ಕಾರ್ಯ ಮತ್ತು ಕಾರಣ ಸಮನ್ವಯವೇ ಸಂಸ್ಕೃತಿಯ ಜೀವಾಳ.

ಬೇಂದ್ರೆಯವರು ಅಪೇಕ್ಷಿಸಿದ ಪ್ರಾದೇಶಿಕ ಐಕ್ಯ, ಭಾಷಾಐಕ್ಯ, ಮತೀಯ ಐಕ್ಯ, ಭಾವ=ಬುದ್ಧಿ=ವಿವೇಕ=ಹೃದಯಐಕ್ಯದ ಸೂಕ್ಷ್ಮಗಳು ಅವರ ಈ ಇಪ್ಪತ್ತೈದೂ ಕವನಗಳಲ್ಲಿ ಜೀವಂತ ಸೆಲೆಯಾಗಿ ಮೂರ್ತೀಭವಿಸಿವೆ.

"ಬೇಂದ್ರೆ ಕುಟೀರ", ಹುಬ್ಬಳ್ಳಿ.
ವರಕವಿ ಡಾ|| ದ. ರಾ. ಬೇಂದ್ರೆ ೧೧೪ನೇ ವಾರ್ಷಿಕ ಜನ್ಮ ದಿನ
ದಿನಾಂಕ : ೧೦-೨-೨೦೦೯

ಡಾ|| ವಾಮನ ಬೇಂದ್ರೆ
ಉಪ ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಕಾರ್ಯಸ್ಥಳ : "ಬೇಂದ್ರೆ ಕುಟೀರ", ವಿಶ್ವಶ್ರಮ ಚೇತನ, ಗೋಕುಲ ರಸ್ತೆ, ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೪೬೬

ಬೇಂದ್ರೆ, ನವಕರ್ನಾಟಕ ದರ್ಶನ

''ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ'' ಎಂಬ ಭವಿಷ್ಯವಾಣಿಯನ್ನು ನುಡಿದ ವಿಶ್ವಕವಿ, ವರಕವಿ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಕನ್ನಡ ನಾಡು, ನುಡಿ ಹಾಗೂ ನಾಡಿಗರ ಕುರಿತಾಗಿ ಕಂಡ ಭವಿತವ್ಯವನ್ನು ಕುರಿತು ಪಡೆದ ದರ್ಶನವನ್ನು ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಎಂಬ ಸ್ಥಾನಮಾನ ಹಾಗೂ ಗೌರವ ಪ್ರಾಪ್ತವಾದ ಈ ಶುಭ ಸಂದರ್ಭ (೩೧-೧೦-೨೦೦೮)ದಲ್ಲಿ ಅರಿಯುವ ಅವಶ್ಯಕತೆ ಇದೆ. ಬೇಂದ್ರೆಯವರು ''ನನ್ನದು ಈ ಕನ್ನಡ ನಾಡು'' ಎಂಬ ಕವನದಲ್ಲಿ ನುಡಿದಿದ್ದರು-

''ಇಂದಂದಿನದಲ್ಲೀ ಹಾಡು
ನಾಡಿದಿನಾ ಕನ್ನಡ ನಾಡು
ಆ ಕನ್ನಡ ನಾಡು ನನ್ನದು
ನನ್ನದು ಈ ಕನ್ನಡ ನಾಡು''

ಎಂದು. ಬೇಂದ್ರೆಯವರ ಈ ''ನಾಡದಿನಾ ಕನ್ನಡನಾಡು'' ಯಾವುದು ಎಂದು ಅರಿಯಬೇಕಾದರೆ, ಅವರ ಈ ಮಹಾನ್ ಪರಿಕಲ್ಪನೆ ಮೂಡಿಬಂದ ದಾರಿಯ ಪೂರ್ಣದರ್ಶನವನ್ನು ನಾವು ಪಡೆಯಬೇಕಾಗುತ್ತದೆ. ಬೇಂದ್ರೆ ಕಂಡ ಕರ್ನಾಟಕದ ಸತ್ಯದರ್ಶನವಾಗಬೇಕಾದರೆ ಅವರ ಜೀವನ ಮಹಾಕಾವ್ಯವಾಗಿರುವ ''ಔದುಂಬರಗಾಥೆ''ಯ ಎರಡನೆಯ ಸಂಪುಟ-''ದರ್ಶನ ಸಂಪುಟ'' ದಲ್ಲಿರುವ ಕನ್ನಡ-ಕರ್ನಾಟಕ ಕುರಿತಾದ ಹದಿನೇಳು ಕವನಗಳ ಅಂತಃದರ್ಶನವನ್ನು ಪಡೆಯಬೇಕಾಗುತ್ತದೆ. ಇದುವೇ ''ಬೇಂದ್ರೆ ನವಕರ್ನಾಟಕ ದರ್ಶನ''. ಇದು ಬೇಂದ್ರೆಯವರ ನವಕರ್ನಾಟಕದ ದರ್ಶನವನ್ನೆಷ್ಟೇ ಅಲ್ಲ, ಅವರು ಕರ್ನಾಟಕವನ್ನು ಕುರಿತಂತೆ ಹೊಂದಿದ ನವದರ್ಶನಗಳ ಆಂತರ್ಯದ ಅರಿವನ್ನೂ ಮಾಡಿಸುತ್ತದೆ.

''ಇತಿಹಾಸ ತಿಳಿಯದವ ಶುದ್ಧ ನಿರ್ಬುದ್ಧ'' ಎಂಬ ಬೇಂದ್ರೆ ನುಡಿ, ಅವರ ನವ ದರ್ಶನಗಳನ್ನು ಅರ್ಥೈಸಲು ಮಾರ್ಗಸೂಚಿ. ಈ ದಿಕ್‌ಸೂಚಿಯನ್ನು ಹಿಡಿದು ಬೇಂದ್ರೆ ನವಕರ್ನಾಟಕದ ನವದರ್ಶನಗಳ ವಿವೇಚನೆಯಲ್ಲಿ ತೊಡಗೋಣ.

ಬೇಂದ್ರೆ ನವ ಕರ್ನಾಟಕದ ಪ್ರಥಮ ದರ್ಶನವನ್ನು ''ಗತ ವೈಭವ ದರ್ಶನ'' ಎಂದು ಬಣ್ಣಿಸಬಹುದಾಗಿದೆ. ಕರ್ನಾಟಕದ ಕುಲಪುರೋಹಿತರೆಂದೇ ಖ್ಯಾತಿ ಪಡೆದ ಶ್ರೀ ಆಲೂರ ವೆಂಕಟರಾಯರು ರಚಿಸಿದ ''ಗತವೈಭವ'' ಕೃತಿಯನ್ನು ಓದಿದ ಬೇಂದ್ರೆಯವರು ೧೯೧೭ರಲ್ಲಿ ಒಂದು ಕವನವನ್ನು ರಚಿಸಿದ್ದರು. ಅದರಲ್ಲಿ ಮೂಡಿಬಂದ ನುಡಿ ಇದು :

"ಇತಿಹಾಸವೇ ನಮ್ಮ ಅತಿಗೂಢ ತತ್ವಗಳ
ಕತೆಯನ್ನು ಹೇಳುತ್ತ ಮತಿಯನ್ನು ತಿಳಿಮಾಡಿ
ಹತರಾದ ಜನರೊಳುತ್ಸಾಹವನ್ನೇರಿಸುತ ಮಾಡಿದ್ಯೆ ಪುರುಷರನ್ನು"

ನಾಡಿನ ಜನತೆ 'ಗತವೈಭವ'ದಲ್ಲಿ ಮೆರೆಯುತ್ತಾ, ಗರ್ಭದಲ್ಲಿ ಅಡಗಿದ ತತ್ವಗಳನ್ನು ಅರಿತು, ಅರಗಿಸಿಕೊಂಡು, ತಮ್ಮ ಮತಿಯನ್ನು ತಿಳಿ ಮಾಡಿಕೊಂಡು, ಹತಾಶರಾಗದೆ, ಅಮಿತೋತ್ಸಾಹಿಗಳಾಗಿ, ಪೌರುಷೇಯ ಭಾವ ಧರಿಸಬೇಕು ಎಂಬ ಭವಿಷ್ಯ ಮಾರ್ಗಸೂಚಿ-ಇದಾಗಿದೆ. ಬೇಂದ್ರೆಯವರು 'ಕನಸಿನೊಳಗೊಂದು ಕಣಸು'ದಲ್ಲಿ ಕನ್ನಡ ತಾಯಿ ಹಾಗೂ ಮಗುವಿನ ಸಂಭಾಷಣೆಯನ್ನು ಚಿತ್ರಿಸುತ್ತಾರೆ. ಅದರಲ್ಲಿ ಕನ್ನಡತಾಯಿ ಕೇಳುತ್ತಾಳೆ- "ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು?" ಎಂದು. ಭವ್ಯ ಕರ್ನಾಟಕದ ನಿರ್ಮಾಣಕ್ಕೆ ಕನ್ನಡಿಗರು ಪಡೆಯಬೇಕಾದ ಸನ್ನದ್ಧತೆಯ ನಿರೀಕ್ಷೆ ಇದು. ಅಂತೆಯೇ ಬೇಂದ್ರೆ ಹೇಳಿದ್ದರು-"ಕೆಳಗೆ ಬೇರಾದೆ, ಮೇಲೆ ಮರವಾದೆ, ಅದೇ ಮರ್ಯಾದೆ" ಎಂದು. ಇದೇ ಬೇಂದ್ರೆಕರ್ನಾಟಕಇತಿಹಾಸದ ಮರ್ಯಾದೆಯೂ ಆಗಿದೆ.

ಬೇಂದ್ರೆಯವರ ಪ್ರಥಮ ಪ್ರಕಟಿತ ಕವನ "ತುತೂರಿ-ಎಚ್ಚರ". ಇದನ್ನು ಅವರು ರಚಿಸಿದ್ದು ೧೯೧೮ರಲ್ಲಿ. ಈ ಕವನದಲ್ಲಿ ಬೇಂದ್ರೆ "ಕರ್ನಾಟಕತ್ವದ ಎಚ್ಚರ"ದ ದರ್ಶನವನ್ನು ಮೂಡಿಸಿದ್ದಾರೆ. ಅದು ಹೀಗಿದೆ-

"ಕರ್ನಾಟಕ ಭಾಷೆಯು ಮತ್ತೊಮ್ಮೆ
ಕರ್ಣಾಟನ ಮಾಡಲಿ ಮೂಲೋಕದ
ಕರ್ಣಾಟಕ ಕರ್ಣಾಟಕವೆಂಬೀ
ಕರ್ಣಕರ್ಣದೊಳು ಕೂಗು ಹೋಗಲಿ"

ಇಲ್ಲಿ "ಕರ್ಣಾಟಕ" ಭಾಷ್ಯ, ಮೂಲೋಕದಲ್ಲಿ ಕರ್ಣಾಟನ ಮಾಡುತ್ತಾ ಕರ್ಣಕರ್ಣದಲ್ಲಿ ಮೊಳಗಲಿ ಎಂಬ ಕೂಗು ಇದೆ. ಇದಕ್ಕಾಗಿ ಬೇಂದ್ರೆ ಹಳೆಯ "ಕಾಳಿಕೊಂಬು"ಗಳನ್ನು "ಕೊಳಲು ಶಂಖ ರಣಭೇರಿ"ಗಳನ್ನು ತ್ಯಜಿಸಿ, ಹೊಸ ಕಾಲಕ್ಕಾಗಿ ಹೊಸ ವಾದ್ಯ "ತುತೂರಿ"ಯನ್ನು ಊದಿ, "ಏಳಿರೈ, ಕೇಳಿರೈ, ಕೂಗು ಕೇಳಿರೈ" ಎಂದು ಎಚ್ಚರಿಸಿದರು. ಹೊಸ ಕಾಲಕ್ಕಾಗಿ ಹೊಸ ವಾದ್ಯ ! ಹೊಸ ಧ್ವನಿಯನ್ನು ೧೯೧೮ರಲ್ಲಿ ಪ್ರಕಟವಾದ ತಮ್ಮ ಕವನ "ತುತೂರಿ-ಎಚ್ಚರ" ಇದರ ಮೂಲಕ ಕರೆಕೊಟ್ಟ ದಾರ್ಶನಿಕರು ಬೇಂದ್ರೆ.

"ಕಾರ್ಣಾಟಕದ ಕರ್ಣಾಟನ"ಕ್ಕೆ ಬೇಂದ್ರೆ "ಕನ್ನಡ ರಾಷ್ಟ್ರಗೀತೆಯ ದರ್ಶನ"ವನ್ನಿತ್ತರು. ಜಾನಪದ ಛಂದಸ್ಸಿನಲ್ಲೇ ಇದನ್ನು ರಚಿಸಿದ ಬೇಂದ್ರೆ, ಈ ಕವನಕ್ಕೆ ಕೊಟ್ಟ ಶೀರ್ಷಿಕೆ "ಕನ್ನಡದಪ್ಪನ

 ಅಂಬಿಕಾತನಯದತ್ತರ "ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು"-ಸಂ :ಡಾ|| ವಾಮನ ಬೇಂದ್ರೆ

ಕೋಲು''. ಈ ಗೀತೆ ಮೊಳಗಿದ ಎರಡು ನುಡಿ ಹೀಗಿವೆ-

"ನವ್ಯನಂದನ ಮಾಟ, ದಿವ್ಯ ಹೃದಯದ ತೋಟ,
ಕರುಳವಳ್ಳಿಯ ಕೋಲ।
ಕಾವ್ಯರಸದ ಕೂಟ, ನೇಹದುಸುರಿನ ತೀಟ,
ತಿರುಳು ಮಲ್ಲಿಗೆಯ ಕೋಲ॥"

"ತಂತ್ರಯುಕ್ತಿಯ ಕೋಲ, ರಾಗದುಕ್ತಿಯ ಕೋಲ,
ಪ್ರೇಮಭಕ್ತಿಯ ಕೋಲ॥
ಯಂತ್ರಶಕ್ತಿಯ ಕೋಲ, ತ್ಯಾಗಭುಕ್ತಿಯ ಕೋಲ,
ಲೀಲಾಮುಕ್ತಿಯ ಕೋಲ॥"

"ಕನ್ನಡದ ಕಂದವ್ವನ ಲಾಲಿ"ಯನ್ನು ರಚಿಸಿದ ಅಂಬಿಕಾತನಯದತ್ತರು ನುಡಿದದ್ದು ಹೀಗೆ-

"ನಾಳೆ ಬೆಳಗಿನವರೆಗೆ ಮಲಗು ಸಂಪಿಂಪಾಗಿ ಆತ್ಮ-ತನು-
ಜಾತೆ ಜೋ ಜೋ
ನಾಳೆ ಬೆಳಗಿನವರೆಗೆ ಅಂಬಿಕಾತನಯದತ್ತನ ತೊದಲು
ಮಾತೆ ಜೋ ಜೋ॥"

ಎಂದು. 'ಅಂಬಿಕಾತನಯದತ್ತ' ಮುದ್ರಿಕೆಯುಳ್ಳ ಪ್ರಥಮ ಕವನ ಈ 'ಲಾಲಿ'ಯಾದ್ದರಿಂದ, ಇದನ್ನು 'ತೊದಲು ಮಾತು' ಎಂದು ಬಣ್ಣಿಸಿದ್ದಾರೆ. ಇದು ಅವರ ಕಾವ್ಯನಾಮ ಹೊತ್ತ ಮೊದಲ ಮಾತು-ಅದು ಕನ್ನಡದ ಕಂದವ್ವನಿಗೆ ಹಾಡಿದ ಲಾಲಿಯಾಗಿತ್ತು, ಲಾಲಿ ತೊದಲು ಮಾತಿನಲ್ಲೇ ಇರಬೇಕಲ್ಲ!

ಅನಂತರ ಬೇಂದ್ರೆ ಪಡೆದದ್ದು "ಭುವನೇಶ್ವರಿ"ಯ ದರ್ಶನ. ೧೯೨೦ರಲ್ಲೇ ರಚಿಸಿದ ಈ ಕವನದಲ್ಲಿ ಬೇಂದ್ರೆ ಕನ್ನಡ ಮಕ್ಕಳ ಪರವಾಗಿ ಮಾಡಿದ ಪ್ರಾರ್ಥನೆ ಹೀಗಿತ್ತು-

"ಸೇವಕರಿಷ್ಟವನೀವಾ ಶಕ್ತಿ!
ಭಾವಿಸೆ ತನ್ನೊಳು ಸಂವಿತ್ ಶಕ್ತಿ॥"
ನಾನಾಭಕ್ತಸುಖಪ್ರದೆಯವಳು॥"

ಬೇಂದ್ರೆಯವರು 'ಭುವನೇಶ್ವರಿ' ಕನ್ನಡ ಮಾತೆಯನ್ನು ಕವನದ ಅಂಬಾರಿಯಲ್ಲಿ ಮೆರೆಸಿ, 'ನಿನ್ನ

ಸೇವಕರ ಇಷ್ಟವನ್ನು ಪೂರೈಸಿ, ಈ ಭಕ್ತರನ್ನು ಸುಖಪ್ರದರನ್ನಾಗಿಸು' ಎಂದು ಬೇಡಿದ್ದಾರೆ. ಬೇಂದ್ರೆ ಪರಿಕಲ್ಪನೆಯ ''ನಾಡಹಬ್ಬ''ಕ್ಕೆ ಈ ಪ್ರಾರ್ಥನೆ ನಾಂದಿಯಾಗಿತ್ತು.

'ಗೆಳೆಯರ ಗುಂಪಿ'ನ ಹುಟ್ಟಿನ ನಂತರ ''ನಾಡಹಬ್ಬ ದರ್ಶನ''ವನ್ನು ಪಡೆದ ಬೇಂದ್ರೆ, ಈ ನವ ಪರಿಕಲ್ಪನೆಗೆ ೧೯೨೬ರಲ್ಲಿ ''ಸೀಮೋಲ್ಲಂಘನೆ'' ಎಂಬ ಕಾವ್ಯ ರೂಪವನ್ನು ಕೊಟ್ಟರು. ಈ ಗೀತವನ್ನು ಹಾಡುತ್ತಾ ಗೆಳೆಯರ ಗುಂಪಿನ ಗೆಳೆಯರು ಧಾರವಾಡದ ಸೀಮೋಲ್ಲಂಘನವನ್ನು ಮಾಡಿದ್ದು ಹೊಸ ಇತಿಹಾಸ ನಿರ್ಮಿಸಿತ್ತು. ಕರ್ನಾಟಕ-ಕನ್ನಡ ಮಾತೆ ಧ್ವನಿದೋರುವ ಒಂದು ಹೃದಯಸ್ಥಭಾವ ಬೇಂದ್ರೆಯವರ ಉಸಿರಾಯಿತು. ''ನಾಳಿನ ಮಾನವೀಯತೆಯ ಹೃದಯಸ್ಥ ಭಾಷೆ, ಕವಿತೆ'' ಇದನ್ನು ಹಾಡುವ ಕನಸು ಬೇಂದ್ರೆ ಕಂಡರು. ಒಲವು ಲಿಂಗದ ಉದ್ಭವವಾದಿಯಾಗಿ ಅವರು ಕಾರ್ಯೋನ್ಮುಖರಾಗಿದ್ದರು. ''ರಾಷ್ಟ್ರೀಯ ಉತ್ಸವ'' ಎಂಬ ಅರ್ಥದಲ್ಲಿ ''ನಾಡಹಬ್ಬ'' ಎಂಬ ನವಪರಿಕಲ್ಪನೆಯನ್ನು ಮೂಡಿಸಿದರು ಬೇಂದ್ರೆ.

ಬೇಂದ್ರೆಯವರ ''ಸೀಮೋಲ್ಲಂಘನೆ'' ನವನವತೆಯ ಪಡೆಯಲು ಸೀಮೋಲ್ಲಂಘನೆಯಾಗಿತ್ತು. ಈ ದರ್ಶನವನ್ನು ನಾಡಹಬ್ಬದ ಆಚರಣೆಯ ವಿಸ್ತರಣೆಯನ್ನು ಹೊಸ ಗೆಳೆಯರ ಮೂಲಕ ಹಲಸಂಗಿ, ವಿಜಾಪುರ, ಕೊಪ್ಪಳ, ಹೈದರಬಾದ್, ಮೈಸೂರು, ಬೆಂಗಳೂರು ಹೀಗೆ ಧಾರವಾಡವನ್ನು ದಾಟಿ ಹೊಸ ಭೌಗೋಲಿಕ ಸೀಮೆಗಳ ಅನ್ವೇಷಣೆಯಲ್ಲಿ ಪರ್ಯವಸಾನವಾಯಿತು. ಆದರೆ ಇಲ್ಲಿ ಅರಿಯಬೇಕಾದ ಅತ್ಯಂತ ಮಹತ್ವದ ಅಂಶವೆಂದರೆ, ಬೇಂದ್ರೆ ಸೀಮೋಲ್ಲಂಘನೆಯ ಅಂತರ್ಯದ ದರ್ಶನ. ಅದು ಹೀಗಿತ್ತು-

''ಒಂದೆ ತಾಯಿಯ ಮಕ್ಕಳಂತೆ ಒಂದಾಗಿ
ಅಂದಗೇಡನು ಕೆಡಿಸಿ ಚೆಲುವು ಚೆಂದಾಗಿ
ಮುಂದಿರುವ ಜನರ ಸರಿಮೇಲು ಮುಂದಾಗಿ
ಸಾಗೋಣ ಹೋಗೋಣ ಸೀಮೆಯನು ದಾಟಿ''

''ಹೋಗಲಾಡಿಸಿಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆಮುರುಕುತನವನ್ನು
ಬೇಗದಿಂ ಕರುನಾಡ ಹರಕುತನವನ್ನು
ಕಳೆದು, ಹಿರಿದಾಗೋಣ ಸೀಮೆಯನು ದಾಟಿ''

''ಪಡುವಣದ ಶಕ್ತಿಯಲಿ ಮೂಡಣದ ಭಕ್ತಿ
ಬಡಗಣದ ಭುಕ್ತಿಯಲಿ ತೆಂಕಣದ ಮುಕ್ತಿ
ಒಡನೊಡನೆ ನೆರೆಬೆರೆತು ಹೊಸತಾಯ್ತು ಯುಕ್ತಿ
ಹೀಗೆ ಇಡಿಯಾಗೋಣ ಸೀಮೆಯನು ದಾಟಿ''

XXVI ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು''-ಸಂ :ಡಾ॥ ವಾಮನ ಬೇಂದ್ರೆ

ರಾಜ್ಯ ವಿಸ್ತರಣೆ, ರಾಜ್ಯ ಗಡಿಗಳ ಸೀಮೋಲ್ಲಂಘನೆ ಮಾಡಿದ್ದು ಇತಿಹಾಸ. ಆದರೆ ಕರ್ನಾಟಕದ-ಕರ್ನಾಟಕರ ಅಭ್ಯುದಯಕ್ಕಾಗಿ ಈ ಕವನದಲ್ಲಿ ಮೂಡಿ ಬಂದಿರುವ ದರ್ಶನವೇ ಬೇರೆ. ನವೋನವ ಪ್ರಜ್ಞೆಯುಳ್ಳವರಾಗಿ, ನವಮಾನವತೆಯನ್ನು ವಿಜೃಂಭಿಸುವುದೇ ಬೇಂದ್ರೆಯವರ ಪರಿಕಲ್ಪನೆಯ ನವಸೀಮೋಲ್ಲಂಘನೆ. ಈ ನವದೃಷ್ಟಿಯುಳ್ಳವರಾಗಿ, ನವಸೃಷ್ಟಿಯಲ್ಲಿ ತೊಡಗಿದ ಬೇಂದ್ರೆಯವರಿಗೆ ಕುಲಪುರೋಹಿತ ಶ್ರೀ ಆಲೂರು ವೆಂಕಟರಾಯರು ಇತ್ತ ಮನ್ನಣೆಯೇ ೧೯೨೯ರಲ್ಲಿ ತಮ್ಮ ಪತ್ರಿಕೆಯಾದ ''ಜಯಕರ್ನಾಟಕ''ದ ಸಂಪಾದಕತ್ವವನ್ನು ಒಪ್ಪಿಸಿದ್ದು. ಇದು ಸಾರಸ್ವತ ಲೋಕದಲ್ಲಿ ಹೊಸ ಜಾಗೃತಿಗೆ ಪ್ರೇರಣೆಯಾಯಿತು.

೧೯೫೬ರಲ್ಲಿ ಕರ್ನಾಟಕ ರಾಜ್ಯೋದಯವಾದಾಗ, ಧಾರವಾಡದಲ್ಲಿ ನಡೆದ ಕವಿಗೋಷ್ಠಿಯಲ್ಲಿ ನಿವೇದಿಸಿದ ಕವನದ ಮೂಲಕ, ವರಕವಿ ಅಂಬಿಕಾತನಯದತ್ತ ಅವರು ''ಕನ್ನಡ ಪಾವನ ಪರಂಪರೆ''ಯ ದರ್ಶನವನ್ನು ಮೂಡಿಸಿದ್ದು ಹೀಗೆ-

''ತೆಂಕಣಕೆ ಕೇರಳವು, ದ್ರಾವಿಡವು ಮೂಡಲಕೆ
ಆಂಧ್ರ ಬಡಗಣಕೆ, ಮಾರಾಷ್ಟ್ರ ನಾಡು
ಈ ಚತುರ್ದಳ ಮಧ್ಯಬೀಜ ಕರ್ನಾಟಕವು
ಧರ್ಮಗುಂಜಾರವದ ಕವಿಯ ಬೀಡು.''

- ಕನ್ನಡದ ಪಾವನ ಪರಂಪರೆ

ಇನ್ನು ''ಪಾರ್ವತಿ ನೀನೆ ಸಲಹು'' ಕವನದಲ್ಲಿ ಬೇಂದ್ರೆಯವರು ನೀಡಿದ ದರ್ಶನ ಹೀಗಿತ್ತು-

''ಜೈನರ ಕಾವ್ಯದ ಶರಣರ ವಚನದ
ದಾಸರ ಹಾಡಿನದೀ ನಾಡು.
ವಿಶ್ವದ ಕಬ್ಬದ ಹಬ್ಬಹುಣ್ಣಿವೆಗೆ
ಕನ್ನಡ ಹೃದಯವ ಹದ ಮಾಡು.''

- ಪಾರ್ವತಿ ನೀನೆ ಸಲುಹು

ಕೇರಳ, ದ್ರಾವಿಡ, ಆಂಧ್ರ, ಮಾರಾಷ್ಟ್ರ ಚತುರ್ದಳಗಳ ಮಧ್ಯ ಬೀಜವಾಗಿ ಅಂಕುರಿಸಿರುವ ಕರ್ನಾಟಕವು ಜೈನ, ಶರಣ, ದಾಸರ ಕಾವ್ಯ ಪರಂಪರೆಯ ಬೇರಿನಿಂದ ''ವಿಶ್ವದ ಕಬ್ಬದ ಹಬ್ಬ ಹುಣ್ಣಿವೆಗೆ ಕನ್ನಡ ಹೃದಯವನ್ನು ಹದಮಾಡುವಂತೆ ಹೆಮ್ಮರವಾಗಿ ಭವ್ಯತೆಯನ್ನು ಹೊಂದುವಂತಾಗಲಿ ಎಂದು ಶುಭ ನುಡಿದರು. ಇದು ಕರ್ನಾಟಕದ ವಿಶ್ವರೂಪದರ್ಶನ.

ಮುಂದೆ ಬೇಂದ್ರೆ ನೀಡಿದ್ದು ''ದಿವ್ಯಧ್ವನಿದರ್ಶನ''. ಕರ್ನಾಟಕದ ಸುರತ್ನ ಸಿಂಹಾಸನದ ಸ್ಥಾಪನೆಯ ದಿವ್ಯತೆಯೇ ಈ ದಿವ್ಯಧ್ವನಿ-

"ಕುಡಗರು ತುಳುವರು ತೊಡವರು ಬಡಗರು
ತೆಂಕಣ ಕೊಂಕಣ ಕಡಲವರ
ಭೂತಳ ಕುಂತಳ ಭಾಗಾಮಂಡಲ
ಪಶ್ಚಿಮ ವಾಹಿನಿ ಪುರಃಸರ.
ಪುಂಡರೀಕದಲಿ ವಿಠ್ಠಲನೆದ್ದ
ಕಣ್ ನಡೆಯಲಿ ಕನ್ನಡ ಗೆದ್ದ."

"ಅಶೋಕಚಕ್ರದ ತ್ರೈವರ್ಣ
ಹಂಪೆಯ ಕೊಂಪೆಯ ನೋಂಪಿಯು ಫಲಿಸಲಿ
ಗುಡಿಗಟ್ಟಲಿ ಕನ್ನಡ ಹರಣ
ತಪ್ಪಲಿ ದೈನಂದಿನ ಮರಣ
ಕೂಡಲಿ ಜಿನ ಹರಿ ಹರ ಶರಣ
ನವಧರ್ಮದ ಐಕ್ಯಾವರಣ."

ಜಿನ, ಹರಿ, ಹರ, ಶರಣರ ಏಕೀಕರಣದಿಂದ, ನವಧರ್ಮದ ಐಕ್ಯಾವರಣವಾದಾಗ ದೈನಂದಿನ ಮರಣ ತಪ್ಪುತ್ತದೆ; ಆಗ ಕನ್ನಡ ಹರಣದ ಗುಡಿಕಟ್ಟಿದಂತಾಗುತ್ತದೆ ಎಂಬುದು "ದಿವ್ಯ-ಧ್ವನಿ". "ಎಲ್ಲೆ ಎಲ್ಲ ಆದಾತನಿಗೆ" ಕವನದಲ್ಲಿ "ವಿಶ್ವಂಭರ ಶ್ರುತಿ ಹಿಡಿ" ಎಂಬ ಕರೆಯನ್ನು ಬೇಂದ್ರೆ ಕೊಟ್ಟಿದ್ದಾರೆ-

"ವಿಶ್ವಂಭರಶ್ರುತಿ ಹಿಡಿ, ಮಾರುತಿಯಲು ವಿರಾಟ್ ಮೂರುತಿ ಮೆರೆಯುತಿರೆ
ಸೊಲಗನು, ಕೊಡಗನು, ತುಳುವನು, ಕೊಂಕಣ
ಮೂಡಲ ಪಡುವಲ ಬಡಗಣ ತೆಂಕಣ
ಕಳನೂ ಕುಳನೂ ಕನ್ನಡ ಕೊಂಕಣ
ಕಟ್ಟಲು ನೆರೆಯುತಿರೆ
ಅನಂತ ಸ್ವರಗಳು ಬೆರೆಯುತಿರೆ
ದಿವ್ಯ ಕರ್ಮ ರೂಪಿಸು
ದಿವ್ಯವ ಆಲಾಪಿಸು."

"ಮಾನವತೆಯ, ನವನರತೆಯ
ಈ ಕವಿತೆಯ ಆರತಿ
ಸಿರಿಗನ್ನಡ ಭಾರತಿ."

---

xxviii ಅಂಬಿಕಾತನಯದತ್ತರ "ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು"-ಸಂ :ಡಾ॥ ವಾಮನ ಬೇಂದ್ರೆ

ಎಂಬ ಧ್ವನಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ಕರ್ನಾಟಕದ ಭವ್ಯತೆ ಅಡಗಿರುವದೇ ಮಾನವತೆಯ ನವನರತೆಯ ಆವಿರ್ಭಾವದಿಂದ ಎಂಬ ದಿವ್ಯ ಸಂದೇಶ ಇಲ್ಲಿದೆ. ಇದುವೇ ನಿಜವಾದ ಕರ್ನಾಟಕದ ಏಕೀಕರಣಕ್ಕೆ ಅಂಬಿಕಾತನಯದತ್ತರು ಇತ್ತ ಸುವರ್ಣ ಸಂದೇಶ.

ಬೇಂದ್ರೆಯವರ ''ನಾಡಿದಿನಾ ಕನ್ನಡನಾಡು'' ಇದುವೇ ಅಂಬಿಕಾತನಯದತ್ತರ ''ನವಕರ್ನಾಟಕದ ದರ್ಶನ''.

''ದಕ್ಷಿಣಕೆ ಬಂದು, ಬೆಳಗೊಳಕೆ ನಿಂದು
ಶ್ರವಣಕ್ಕೆ ಎಂದು ಸಂದೇಶಾ ಅಟ್ಟಿತೋ
ಅದು ಆಗ ತನ್ನ ತಾನರಿದು, ಹೃದಯ ಕಣ್ತೆರೆದು
ಪೂರ್ವಭವ ಹರಿದು, ಕನ್ನಡꣳವೂ ಹುಟ್ಟಿತೋ
ಇಂತಹದೀ ಕನ್ನಡನಾಡುꣳ
ನನ್ನದು.''

''ಕಲ್ಯಾಣಕಟ್ಟಿ ಉಳವಿಯನು ಮುಟ್ಟಿ
ದಿಗ್ದೇಶ ಮೆಟ್ಟಿ ಲಿಂಗಾಂಗꣳ ಅಪ್ಪಿದಾ
ಮಾತೆಲ್ಲ ಜ್ಯೋತಿ, ಸರ್ವಜ್ಞ ರೀತಿ
ಬರಿದೇಕೆ 'ನೇತಿ' ಭವಿಸಂಗꣳ ತಪ್ಪಿದಾ
ಆ ಕನ್ನಡ ನಾಡು
ನನ್ನದು.''

''ಮಾಸತಿಯ ಬೀಡು, ಮುಡುಪಾದ ನಾಡು
ಇದಕಾರು ಜೋಡು ಎತ್ತೂ ಸುತ್ತಲೂ
ಮಲೆಯಾಳ ಮಂದ್ರ, ದ್ರಾವಿಡವು ಸಾಂದ್ರ
ಮಾರಾಷ್ಟ್ರ ಆಂಧ್ರ ಸುತ್ತೂꣳಮುತ್ತಲೂ
ಇಗೊ ನಡುವಿನ ಕನ್ನಡ ನಾಡುꣳꣳ
ನನ್ನದು''

''ಭೌತಿಕದ ತೇರು, ಆತ್ಮಿಕದನೇರು
ದೈವಿಕದ ಮೇರು ಮೂರೂ ಕೂಡಿರೇ
ಅವ್ಯಯನಿಗಾಗಿ ಉತ್ತಮನೆ ಮಾಗಿ
ಹೃದಯಜ್ಞನಾಗಿ ಯಜ್ಞ ಹೂಡಿರೇ''

ಹಳೆಯ ವೈರದ ಇತಿಹಾಸದ ಸಂಹಾರವಾಗಿ, ಭಾವೈಕ್ಯ ಸಾಮರಸ್ಯ-ಸಂಜ್ಞಾನ ಪ್ರಜ್ಞೆ ಬೆಳೆದಾಗ, ನಾಡಿದಿನಾ ಕನ್ನಡನಾಡು ಸೃಷ್ಟಿಯಾದೀತು.

''ರಸವೇ ಜನನ
ವಿರಸ ಮರಣ
ಸಮರಸವೇ ಜೀವನ''

ಈ ಸಂದೇಶವನ್ನು ಮೈಗೂಡಿಸಿಕೊಂಡ ''ನಾಡಿದಿನಾ ನಾಡು'' ಬೇಂದ್ರೆಯವರ ಕನ್ನಡನಾಡು, ಅಂಬಿಕಾತನಯದತ್ತರ ಕನಸಿನ ಕರ್ನಾಟಕದ ನನಸಿನ ನಾಡು.

ಅಂಬಿಕಾತನಯದತ್ತರ ನವನವೋನ್ಮೇಷ ಶಾಲಿನಿ ಪ್ರಜ್ಞೆ, ಅವರ ನವಕರ್ನಾಟಕದ ನವದರ್ಶನದಲ್ಲಿ ಅಭಿವ್ಯಕ್ತಗೊಂಡಿದೆ. ಬೇಂದ್ರೆಯವರು ತಮ್ಮ ಸಾಹಿತ್ಯ ವಿರಾಟ್ ಸ್ವರೂಪದಲ್ಲಿ ''ಕರ್ನಾಟಕ ನವದರ್ಶನ ಪ್ರಬಂಧದಲ್ಲಿ ಹೇಳುತ್ತಾರೆ- ''ಭೂಮಂಡಲದ ಪರಿಧಿ ಏನಿದ್ದರೂ ಹಳೆಯ ಕಾರು-ನಾರುಗಳ, ಕರಣ-ನಟರ, ಕರ್ಣಾಟಕದ ಭೂಮಿ ನವ ಕರ್ನಾಟಕ. ಇಂಥ ಕರ್ನಾಟಕ ತನ್ನ ಮತಗಳನ್ನು ನಿರ್ಮಲಗೊಳಿಸಕೊಳ್ಳಬೇಕು'' ಎಂದು. ಬೇಂದ್ರೆ ಕಂಡ ಈ ನವದರ್ಶನಗಳು ಮೂರ್ತಸ್ವರೂಪ ಹೊಂದಿ, ಪರಿಪೂರ್ಣ ಕರ್ನಾಟಕ ಅರಳಿದಾಗ, ಬೇಂದ್ರೆ ದರ್ಶನದ ''ಬೆಳಗು'' ಮೂಡುತ್ತದೆ.

''ಶಾಂತಿ ರಸವೇ ಪ್ರೀತಿಯಿಂದ
ಮೈದೋರಿದೆ ತಣ್ಣ
ಇದು ಬರಿ ಬೆಳಗಲ್ಲೋ ಅಣ್ಣ''

ಎಂಬ ಕವಿವಾಣಿ ಧನ್ಯತೆಯನ್ನು ಪಡೆಯುತ್ತದೆ.

''ಬೇಂದ್ರೆ ಕುಟೀರ'', ಹುಬ್ಬಳ್ಳಿ.
ವರಕವಿ ಡಾ|| ದ. ರಾ. ಬೇಂದ್ರೆ ೧೧೪ನೇ ವಾರ್ಷಿಕ ಜನ್ಮ ದಿನ
ದಿನಾಂಕ : ೧೦-೨-೨೦೦೯

ಡಾ|| ಕೆ. ಎಸ್. ಶರ್ಮಾ
ನಿರ್ದೇಶಕರು
ವರಕವಿ ಡಾ|| ದ. ರಾ. ಬೇಂದ್ರೆ
ಸಂಶೋಧನ ಸಂಸ್ಥೆ ಹಾಗೂ ಬೇಂದ್ರೆ ಸಂಗೀತ ಅಕಾಡಮಿ.

ಕಾರ್ಯಸ್ಥಳ : ''ಬೇಂದ್ರೆ ಕುಟೀರ'', ವಿಶ್ವಶ್ರಮ ಚೇತನ, ಗೋಕುಲ ರಸ್ತೆ, ಹುಬ್ಬಳ್ಳಿ-೫೮೦ ೦೩೦. ದೂರವಾಣಿ : ೨೩೩೦೪೬೬

ಭಾಗ - ೧

ಅಂಬಿಕಾತನಯದತ್ತರ
“ಇಂದಂದಿನದಲ್ಲೀ ಹಾಡು; ನಾಡಿದಿನಾ ಕನ್ನಡನಾಡು”

ಕವನಗಳು

ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು'' ಎಂಬ ಈ ಸಂಕಲನದಲ್ಲಿಯ ೨೫ ಕವನಗಳು, ವರಕವಿ ದ. ರಾ. ಬೇಂದ್ರೆಯವರು ೧೯೧೭ ರಿಂದ ೧೯೭೮ರ ವರೆಗೆ ಆರು ದಶಕಗಳಿಗೂ ಹೆಚ್ಚು ಕಾಲ ಕನ್ನಡನುಡಿ, ಕನ್ನಡನಾಡು ಹಾಗೂ ಕನ್ನಡನಾಡಿಗರ ಬಗ್ಗೆ ನಡೆಸಿದ ಚಿಂತನೆಯ ಬಿಂಬವಾಗಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗೌರವ ಸಂದ ಸಂದರ್ಭದಲ್ಲಿ ಇದನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಲಾಗುತ್ತಿದೆ.

ಈ ಕವನಗಳೆಲ್ಲ ಹಾಡಾಗಿ, ಹೃದಯಸ್ಥವಾಗಿ, ಪ್ರತಿ ಕನ್ನಡಿಗನ ಹೃದಯದ ಧ್ವನಿಯಾಗಿ, ತನು-ಮನದಲ್ಲಿ ಮಾಗಿ, ನವನಾಡ ನಿರ್ಮಾಣಕ್ಕೆ ಪ್ರೇರಕಶಕ್ತಿಯಾಗಲಿ ಎಂಬ ಆಶಯ ನಮ್ಮದು.

— ಸಂ.

೧ 'ಕರ್ನಾಟಕ ಗತವೈಭವ'ವು ಪ್ರಸಿದ್ಧವಾದದ್ದನ್ನು ಕೇಳಿ

೧

ಇತಿಹಾಸವೇ ನಮ್ಮ ಅತಿಗೂಢ ತತ್ತ್ವಗಳ
ಕತೆಯನ್ನು ಹೇಳುತ್ತ ಮತಿಯನ್ನು ತಿಳಿಮಾಡಿ
ಹತರಾದ ಜನರೊಳುತ್ಸಾಹವನ್ನೇರಿಸುತ ಮಾಡಿದೈ ಪುರುಷರನ್ನು
ಮೃತರಿಗಮೃತವೆ, ವಿಶ್ವರೂಪವೇ ಪೊಡವಿಯೊಳು
ಪತಿತರಿಗೆ ನಿನ್ನಿಂದ ಕಾಣಲಾರದದೇನು ?
ಗತಕಾಲವೇ ನೀನು ನಮ್ಮಯಿದಿರಿನೊಳಿಂತು ಬಾಯ್ದೆರೆದು ನಿಂತಮೇಲೆ.

೨

ಏಳಹತ್ತಿದ ಚಿತ್ರ ನೋಡಹತ್ತಿದೆ ನಾನು
ಹಾಳಾದ ರಾಷ್ಟ್ರಗಳ ತೊಳಲಾಟವನು ಕಂಡೆ
ಗೋಳಿಡುವ ಕವಿಗಳರಸಿಯು ತನ್ನ ಸಡಿಲಾದ ವೀಣೆ ಸರಿಮಾಳ್ಪುದನ್ನು.
ಸೂಳಹತ್ತಿತು ಹಾಡು, ಕೇಳಹತ್ತಿದೆ ನಾನು
ಮೇಳದೊಳು ಬರುತಿಹುದು ಹಾಡುಗಾರರ ದಂಡು
ಹೇಳುವರ ಕೇಳುವರ ಕಣ್ಣೀರು ತುಳುಕುವದು ಸಾಗಿರುವ ನೋಟನೋಡಿ.

೩

ಸ್ಥಿರವಾಗು ಸ್ಥಿರವಾಗು ಮೋಹನದ ನೋಟವೇ,
ಎರಗಿ ನಿನ್ನಯ ಮುಂದೆ ಮರುಗಲೆನಗೊಂದಿಷ್ಟು
ತರಲತನವೇಕಿಂತು ಒರವಿನೊಳು ಬಿದ್ದಂಥ ಚಂದ್ರಮನ ಬಿಂಬದಂತೆ.
ನೆರೆಗಣ್ಣುಗಳಿಗೆ ನೀ ಕಾಣದಿದ್ದರು ನನಗೆ
ಹರುಷವನ್ನೀಯುವಿಯೆ ಹೃದಯ ಪರಿಸರದಲ್ಲಿ
ಹುರಿದುಂಬಿಸುವದಕ್ಕೆ ನಿಲ್ಲಿನ್ನು ಪ್ರಾಣವೇ ! ಹರಿದಾಡು ನೂರುಮಡಿಯೆ.

೪

ಸ್ವರ್ಗಸಾಮ್ರಾಜ್ಯದೊಳಗಲೆದಾಡುವೆನು ಮನದ
ಅರ್ಗಲೆಯು ಸರಿಯಿತ್ತೈ, ಬಂತು ಕಲ್ಲಿಗೆ ಬಾಯಿ
ವೀರ್ಗಲ್ಲುಗಳು ತಮ್ಮ ಬೋರ್ಗಲ್ಲ ಭಾವವನು ಬಿಟ್ಟು ಮಾತಾಡುತಿಹವು.
ಯಾರ್ ಕಲ್ಲಿನಂತೆ ನಿಂತಾರು ಕಲ್ಲುಗಳೊಳಗು
ಸ್ವರ್ಗವುದಯಿಸೆ ಎಲ್ಲಿ ಕಲ್ಲಿಹವು ಸುಡು ಸುಳ್ಳು
ಬೋರ್ಗಲ್ಲುಗಳು ಕೂಡ ವೀರ್ಗಲ್ಲುಗಳ ಹಾಗೆ ನಿಂತಿಹವು ದಿಮ್ಮಿನಿಂದ.

- ಸಂಚಯ : ೧೬/ರಚನೆ : ೧೯೧೭/ಪ್ರ : ೧೯೫೮

ಭಾವ : ಶ್ರೀ ಆಲೂರರವರ ಪ್ರಬೋಧಕ ಕೃತಿ-ಕರ್ನಾಟಕ ಗತವೈಭವ-ಪ್ರಕಟವಾದ ಸುದ್ದಿಯನ್ನು ಪುಣೆಯಲ್ಲಿ ಕೇಳಿ ಉಲ್ಲಾಸದಿಂದ ಬರೆದದ್ದು.

ಶಬ್ದಾರ್ಥ : ಒರವಿ-ಒರತೆ=ಜಿನುಗುನೀರು. ಅರ್ಗತಿ-ಅರ್ಗಳ=ಬಾಧೆ.

೨ ತುತೂರಿ - ಎಚ್ಚರ

೧
ಕಾಳಿಕೊಂಬುಗಳ ದಿವಸಗಳಾದವು
ಕೊಳಲು ಶಂಖ ರಣಭೇರಿಗಳಳಿದವು
ಕಾಲವು ಹೊಸದೇ ಹೊಸದೇ ವಾದ್ಯವು
ಏಳಿ ಕೇಳಿರೈ, ಕೂಗು ಕೇಳಿರೈ - ತೂತೂ ತೂತೂ ತೂತೂ ತೂತೂ !
೨
ಮೋಡದಿ ಮುಸುಕಿದ ರಾತ್ರಿ ತೀರಿತು
ನೋಡಿರಿ ಮುಗಿಲಿನ ಕೆಂಪು ಏರಿತು
ದೂಡಿರಿ ಹಡಗವ, ಕಡಲಕ್ಕೇರಿತು
ನೋಡಿ ಕಡಿಯಿರೈ, ಮೇಲೆ ನಡಿಯಿರೈ - ತೂತೂ ತೂತೂ ತೂತೂ ತೂತೂ !
೩
ನಮ್ಮ ನಾಡು, ನುಡಿ ನಮ್ಮದೆನ್ನಿರಿ
ನಮ್ಮ ಜನರು ಎಂದೆನ್ನುತೇಳಿರಿ
ನಮ್ಮದೆಂಬುದಿರಲೀ ಸುಸ್ವಾರ್ಥವು
ಹೆಮ್ಮೆ ಬಿಡಿರಿ, ಕಿವಿಗೊಡಿರಿ ಕೂಡಿಗೆ - ತೂತೂ ತೂತೂ ತೂತೂ ತೂತೂ !
೪
ಕರ್ಣಾಟಕ ಭಾಷೆಯು ಮತ್ತೊಮ್ಮೆ
ಕರ್ಣಾಟನ ಮಾಡಲಿ ಮೂಲೋಕದ
ಕರ್ಣಾಟಕ ಕರ್ಣಾಟಕವೆಂಬೀ
ಕರ್ಣಕರ್ಣದೊಳು ಕೂಗು ಹೋಗಲಿ - ತೂತೂ ತೂತೂ ತೂತೂ ತೂತೂ !
೫
ಹಿಂದಿನದೆಲ್ಲವು ಕಥೆಯೊಳಗುಳಿಯಲಿ
ಇಂದಿನದಷ್ಟೇ ಕೈಯಲ್ಲುಳಿದಿದೆ
ಮುಂದಿನ ಭಾಗ್ಯದ ಒಡೆಯರು ನಾವೇ
ಅಂದಮೇಲೆ ಹಿಂಜರಿವುದೇತಕೆ - ತೂತೂ ತೂತೂ ತೂತೂ ತೂತೂ !

೬
ಸಹ್ಯವಾಯಿತು ಬಾಳ್ವೆ-ನಿನ್ನ ಚಿಂತಾಮಣಿಯು ತುಂಬಿತುಡಿ-
ಯನ್ನು ಜೋ ಜೋ
ಸಹ್ಯಾದ್ರಿ ಶೃಂಗದೆಡೆ ನನ್ನ ತುಂಗಸ್ತನದ ಹಾಲು ಕುಡಿ-
ದಿನ್ನು ಜೋ ಜೋ ॥
೭
ನಾಳೆ ಬೆಳಗಿನವರೆಗೆ ಮಲಗು ಸಂಪಿಂಪಾಗಿ ಆತ್ಮ-ತನು-
ಜಾತೆ ಜೋ ಜೋ
ನಾಳೆ ಬೆಳಗಿನವರೆಗೆ ಅಂಬಿಕಾತನಯದತ್ತನ ತೊದಲು
ಮಾತೆ ಜೋ ಜೋ ॥
೮
ಲಾಲಿಪರೆ ಲೀಲೆಯಲ್ಲುಲಿದ ಲಾಲಿಯನೀಗ ಲಾಲಿಸಿರಿ,
ಲಾಲಿ, ಜೋ ಜೋ
ಮಾಲಿಪರೆ ಆಲಿಪರೆ, ತಾಯಿ-ಮಗಳನ್ನೀಗ ಮಾಲಿಸಿರಿ,
ಲಾಲಿ ಜೋ ಜೋ

- ನಾದಲೀಲೆ : ೪೯/ರಚನೆ : ೧೯೧೯/ಪ್ರ : ೧೯೩೮

ಭಾವ : ಭಾರತಮಾತೆಯ ಪೂರ್ವ ಪಶ್ಚಿಮ ಘಟ್ಟಗಳ ತೊಟ್ಟಿಲಲ್ಲಿ ಮಲಗಿದ ಕನ್ನಡ ಕಂದವ್ವನನ್ನು ತೂಗುವಾಗ ಹೇಳಿದ ಪದ್ಯ.

ಶಬ್ದಾರ್ಥ : ಲಾಲಿ= ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು, ಜೋಗುಳ. ಮಾಲಿಸು-ಮಾಲೀಸು=ಉಜ್ಜು ತಿಕ್ಕು, ಕಾಂತಿಯುಕ್ತ ಮಾಡು.

---

೪ ಭುವನೇಶ್ವರಿ

೧

ಸೇವಕರಿಷ್ಟವನೀವಾ ಶಕ್ತಿ!
ಭಾವಿಸೆ ತನ್ನೊಳು ಸಂವಿತ್ ಶಕ್ತಿ॥

೨

ವಾಣಿಯೆನಿಸಿ ವಾಕ್ ಸಿದ್ಧಿಯನಿತ್ತು
ಮಾಣದೆ ಲಕ್ಷ್ಮಿಯೆನಿಸಿ ಶುಭವಿತ್ತು॥

೩

ಗಿರಿಜೆಯೆನಿಸಿ ಸೌಭಾಗ್ಯವನಿತ್ತು
ವರವಂಬಿಕೆಯೆನಿಸುತೊತ್ತೊಲಿದಿತ್ತು॥

೪

ಯೋಗವನಿತ್ತು ಮನೋನ್ಮನಿಯೆನಿಸಿ
ಭೋಗವನಿತ್ತಾ ಕುಂಡಲಿಯೆನಿಸಿ॥

೫

ಮತ್ತೆಯು ಬಹುನಾಮಂಗಳವೆರಸಿ
ತತ್ತದಖಿಳ ರೂಪಿಂದವತರಿಸಿ॥

೬

ತಾನೇ ಭುವನೇಶ್ವರಿಯಾಗಿಹಳು
ನಾನಾಭಕ್ತಸುಖಪ್ರದೆಯಹಳು॥

- ಶತಮಾನ/ರಚನೆ : ೧೯೨೦/ಪ್ರ : ೨೦೦೪

ಭಾವ : ೧೯೨೬ರಲ್ಲಿ 'ಗೆಳೆಯರ ಗುಂಪು' ನಾಡಹಬ್ಬದ ಆಚರಣೆಗೆ ಒಂದು ವಿಶಿಷ್ಟರೂಪಕೊಟ್ಟಿತು. ಅದರ ಪೂರ್ವದ ಚಿಂತನೆಯ ಪ್ರಾರ್ಥನೆ. ನಾಡಹಬ್ಬದ ಆಚರಣೆ ಕರ್ನಾಟಕದಲ್ಲಿ ಒಂದು ಸಂಪ್ರದಾಯವಾಗಿ ಪ್ರಚಾರಪಡೆಯುವಲ್ಲಿ ಗೆಳೆಯರ ಗುಂಪಿನ ಗೆಳೆಯರ ಪಾತ್ರ ಪ್ರಮುಖವಾಗಿದೆ. ಶಕ್ತಿ ವಾಣಿ, ಲಕ್ಷ್ಮಿ ಗಿರಿಜೆ, ಅಂಬಿಕೆ, ಕುಂಡಲಿನಿ ಮೊದಲಾದ ಅನೇಕ ನಾಮಗಳಿಂದ ತಾಯಿ ಭುವನೇಶ್ವರಿ, ಭಕ್ತರಿಗೆ ಸುಖಗಳನ್ನು ಈಯಲಿ ಎಂಬ ಬೇಡಿಕೆ ಇಲ್ಲಿದೆ.

ಶಬ್ದಾರ್ಥ : ಸಂವಿತ್‌ಶಕ್ತಿ=ಜ್ಞಾನಶಕ್ತಿ, ಸಾಮರಸ್ಯದ ಶಕ್ತಿ, ಮಾಣದೆ=ಬಿಡದೆ, ಮನೋನ್ಮನಿ=ಮನಸ್ಸಿನ ಉನ್ನತ ಅವಸ್ಥೆ, ತತ್ತದಖಿಳರೂಪ=ಸಂಪೂರ್ಣ ರೂಪ.

೫ ಹಂಪೀ-ವಿಜಯನಗರ ದರ್ಶನ

೧

ತಾಳವಿಲ್ಲದಲೆ ಬೇತಾಳನಂದದಿ ಕುಣಿವ
ಕಾಳ ನರ್ತಕನ ಕಾಲ್ಕೆಳಗೆ ತೊತ್ತುಳಿಗೊಂಡು
ಹಾಳಾಗಿ ಹುಡಿಗೂಡಿ ಹೋದ ಕನ್ನಡ ನಾಡಿಗಿದಿರಾಗಿ ಬಂದು ನಿಂದು
ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು
ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು
ಕಾಳ ರಕ್ಕಸನ ಕಡೆಕೂಳು-ಬಾಳಕವಾದ ನಾಡ ನಡುಮನೆಯ ಕಂಡೆ.

೨

ಕನಸೆನಲೊ, ಕಾಡು ಪಾಲಾದ ಭೂಪಾಲಕನ
ಮನಸೆನಲೊ, ಮೋಡದೊಳು ಮೂಡಿ ಮಸುಳುವ ಚಿತ್ರ-
ವೆನಲೊ, ಕಂಪಡಗಿ ಪೆಂಪುಡುಗಿ ಬಣ್ಣವು ಕೆಟ್ಟ ನಿರ್ಮಾಲ್ಯ ಮಾಲೆಯೆನಲೊ?
ನೆನಸಿ ಕೃತಕರ್ಮ ಪಶ್ಚಾತ್ತಾಪದಿಂ ಬೆಂದು
ಜನಿಸಿ ಸುಜ್ಞಾನ, "ಉದ್ಧಾರ ಮಾಡಿರಿ" ಎಂದು
ಮನಸಿನಿಂದೆರಗಿರುವನೆನಲೊ-ಪಾತಕಿ ಬಂದು ಪಾವನನ ಚರಣಗಳಿಗೆ.

೩

ಬಿದ್ದ ರಾಜ್ಯವಿದಲ್ಲ ಉದ್ಬುದ್ಧವಾಗಿದ್ದು
ಎದ್ದ ರಾಜ್ಯದ ಮೊಳಕೆಯಿದು, ಇದರ ಬಳಿಯಲ್ಲಿ
ಇದ್ದು ಸಂಜೀವನವ ಜಪಿಸುವಂತಹ ಯೋಗಿ ಕೊಂಪೆ ಹಂಪೆಯು ಇದಲ್ಲ.
ಬುದ್ಧಿಯೆಣಿಸಿತು, ಅಂತರಂಗದಧಿನಾಯಕನು
ಸುದ್ದಿಯನು ಸೂರುವೊಲು ಬುದ್ಧಿಯನು ಮೀರುವೊಲು
ಎದ್ದು ಹೇಳಿದನೊ ತಾ ಕನಕನೊಡೆಯನು ಪೇಳ್ದ ಶುದ್ಧ ಮುಂಡಿಗೆಯಿದೆಂದು.

೪

ಕರ್ಮಯೋಗಿಯ ಬಳಿಗೆ ಯೋಗೀಶ್ವರನು ನಿಂದು
ಕರ್ಮದ ಅಕರ್ಮದೊಳ ಮರ್ಮಮಂ ತಿಳಿಸಿ ಸದ್-
ಧರ್ಮಮಂ ಸತತ ನಡೆಸಿದರೆ, ಧ್ರುವವಿಜಯವೆಂದಂದು ತೋರಿಸಿದ ತೆರದಿ.
ಧರ್ಮ-ಕರ್ಮದ ಪುರಾತನ ಪುರಗಳಿವು ಪೂರ್ವ
ಧರ್ಮಬಲದಿಂದೇರಿ ಕರ್ಮಬಲದಿಂದಿಳಿದು
ಮರ್ಮದೊಳು ನೆಡುವಂತೆ ಸಪ್ರಯೋಗಿಕವಾಗಿ ಕಲಿಸುವವು ತತ್ತ್ವವೆಂದು.

- ಗರಿ : ೭/ರಚನೆ : ೧೯೨೧-ಧಾರವಾಡ/ಪ್ರ : ೧೯೩೨

ಶಬ್ದಾರ್ಥ : ಮುಂಡಿಗೆ=ಒಗಟು, ಸಮಸ್ಯೆಗರ್ಭಿತ.
ವಿಶೇಷ : ಈ ಕವನದ ಛಂದಸ್ಸು ವಾರ್ಧಕ ಷಟ್ಪದಿ.

೬ ಏಳು ಶೂರರ ರಾಣಿ!

೧

ಏಳು ಶೂರರ ಖಣೀ! ಏಳು ಶೂರರ ರಾಣಿ!
ಏಳು ತೀರದ ವೀರರಸದ ವಾಣಿ!
ಏಳು ಮೀರಿದ ಜಾನಿ! ಏಳು ಈ ಸ್ಥಿತಿಗಾಣಿ!
ಏಳು ವರ ವರದ ಪಾಣಿ!

೨

ಶೂರ ಪುರುಷರ ಕೊನೆಯು, ವೀರ ಕವಿಗಳ ಗೊನೆಯು
ಭೀರುತನವೆಂಬ ಶಲ್ಯಕ್ಕೆ ಮೊನೆಯು
ಧೀರ ಸತಿಯರ ತೆನೆಯು, ವೀರರಸಗಳ ಸೊನೆಯು
ಈ ರೀತಿ ನಿನ್ನ ಮನೆಯು.

೩

ಭರದೆ ಬೆಳೆಯುವ ಬೆಳೆಯು, ತ್ವರದೆ ಹರಿಯುವ ಹೊಳೆಯು
ಇರದೆ ಪ್ರತಿಕಾಲಕ್ಕೆ ಬರುವ ಮಳೆಯು
ವರಲಕ್ಷಣದ ಕಳೆಯು, ಸುರರ ಸೀಮೆಯ ಬೆಳೆಯು
ಇರುವಂಥ ನಿನ್ನ ಇಳೆಯು.

೪

ಸತ್ತಿರುವುವವರೆದೆಸೇರು, ಸುತ್ತಿರುವ ವಿಷ ಹೀರು
ಬತ್ತಿರುವುದಮೃತ ಝುರಿ, ಮತ್ತೆ ತೋರು
ಸತ್ತ್ವುಳ್ಳ ನೂರಾರು ಬಿತ್ತುಗಳ ನೀನೂರು
ಕಿತ್ತು ಭಯಬಿಟ್ಟ ಬೇರು.

೫

ಅಂದಿನಂತಹ ಧನವು, ಅಂದಿನಂತಹ ತನುವು
ಅಂದಿನಂತವರ ಹಿರಿದಾದ ಮನವು
ಅಂದೆ ಅಂದಿನತನವು, ಚಂದದಾಟಕೆ ಅನುವು
ಎಂದು ತಂದೀತು ದಿನವು?

೬

ನೀನು ನೆಲಸಿದ ಕಾಡು, ಮಾನಿಸುವರೌ ನಾಡು
ಧ್ಯಾನಿಸುವರೌ ನಿನ್ನ, ಹಾಡಿ ಹಾಡು
ಈ ನಾಡಿನೊಳು ಮಾಡು, ಪ್ರಾಣಪುತ್ರರ ಬೀಡು-
ಅದುವೆ ಸಂತಸದ ಹಾಡು !

- ರಚನೆ : ೧೯೨೫

ಭಾವ : ೧೯೨೫ರಲ್ಲಿ ಎಳೆಯ ಗೆಳೆಯರಲ್ಲಿ ಕರ್ನಾಟಕ ಏಕೀಕರಣದ ಭಾವ ಜಾಗೃತಿಗಾಗಿ ಬೇಂದ್ರೆ ಸಲ್ಲಿಸಿದ ಪ್ರಾರ್ಥನೆ.

ಶಬ್ದಾರ್ಥ : ಖಣಿ=ಖನಿ, ಸಂಪತ್ತು; ಜಾನಿ=ಜ್ಞಾನಿ, ಬಲ್ಲವಳು ; ಭೀರುತನ=ಅಂಜುಬುರುಕುತನ ; ಸೊನೆ=ತುಂಬಿದ ಪ್ರವಾಹ ;

೭ ಕನಸಿನೊಳಗೊಂದು ಕಣಸು

(ತಾಯಿ ಮಕ್ಕಳ ಸಂವಾದ)

೧

"ಯಾರು ನಿಂದವರಲ್ಲಿ ತಾಯಿ" ಎಂದೆ.
ಯಾರು ಕೇಳುವರೆನಗೆ, ಯಾಕೆ ತಂದೆ?"

೨

"ಬೇಸರದ ದನಿಯೇಕೆ ಹೆಸರ ಹೇಳಲ್ಲ."
"ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲ."

೩

"ನೀನಾರ ಮನೆಯವಳೊ ಮುತ್ತೈದೆ ಹೇಳು"
"ನಾನಾರ ಮನೆಯವಳೊ ಬಯಲನ್ನೆ ಕೇಳು ."

೪

"ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೇ ?"
"ಗುಪ್ತರಾದರೊ ಏನೊ ಇಷ್ಟರಲ್ಲೇ."

೫

"ಇರುವರೇ, ಇದ್ದರೇ, ಮಕ್ಕಳೆಂಬವರು ?"
"ಇರುವರೆಂದರು ಕೂಡ ; ಯಾರು ನಂಬುವರು ?"

೬

"ಮನೆಯಿಲ್ಲವೇ ಇರಲು, ಪರದೇಶಿಯೇನು ?"
"ಮನೆಯೆ ಮುನಿದೆದ್ದಿರಲು, ಯಾ ದೇಶವೇನು ?"

೭

"ನಿನ್ನ ಮಾತಿನಲಿಹುದು ಒಡಪಿನಂದ !"
"ನನ್ನ ಹತ್ತಿರದೊಂದೆ ಉಳಿದಿಹುದು ಕಂದ."

೮

"ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು !"
"ಸಾಜಮಾದರು ಪಕ್ಷವಿದು ವದ್ಯವಹುದು !"

೯

"ಯಾವುದಾದರು ನಾಡದೇವಿಯೇ ನೀನು?"
"ಭಾವುಕರ ಕಂಗಳಿಗೆ ದೇವಿಯೇ ನಾನು."

೧೦

"ಈಗ ಬಂದಿಹುದೇಕೆ ಏನು ಬೆಸನ?"
"ಯೋಗವಿಲ್ಲದೆ ತಿಳಿಯದೆನ್ನ ವ್ಯಸನ!"

೧೧
''ಹಾದಿ ಯಾವುದು ಹೇಳು, ಯಾವ ಯೋಗ?''
''ಆದಿ ಅಂತವು ಇಲ್ಲದಂಥ ತ್ಯಾಗ!''

೧೨
''ಬೇಡಬಂದಿಹೆ ಏನು ಏನಾದರೊಂದು?''
''ಬೇಡಿದರೆ ಬೇಡಿದುದ ಕೊಡುವೆಯಾ ಇಂದು?''

೧೩
''ಅಹುದು ಕೊಡುವೆನು ಎಂದು ನಾನೆನ್ನಬಹುದೇ?''
''ಬಹುದು-ಗಿಹುದಿನ ಶಂಕಿ, ವೀರನಹುದೇ?''

೧೪
''ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ.''
''ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ!''

೧೫
''ಇಲ್ಲೆನ್ನಲಾರೆ ನಾನಹುದೆನ್ನಲಮ್ಮೆ.''
''ಬಲ್ಲವರು ದೈವವನು ಪರಿಕಿಸುವರೊಮ್ಮೆ!''

೧೬
''ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?''
''ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು?''

೧೭
ಮನವು ನಡುಗಿತು, ತನುವು ನವಿರಿಗೊಳಗಾಯ್ತು;
ನೆನವು ನುಗ್ಗಿತು--ಹೊರಗೆ ಕಂಡೆ--ಬೆಳಗಾಯ್ತು.

- ಗರಿ : ೨೦/ರಚನೆ : ೧೯೨೫-ಧಾರವಾಡ/ಪ್ರ : ೧೯೩೨

ಭಾವ : ಕನಸಿನಲ್ಲಿ ಕಂಡ ಕಣಸಿನ ಕನ್ನಡ ತಾಯಿಯೊಡನೆ ಕನ್ನಡಿಗನ ವಾದ-ಸಂವಾದ.

ಶಬ್ದಾರ್ಥ : ಕಣಸು=ನೋಟ, ಕಾಣ್ಕೆ. ಒಡಪು=ಒಗಟು, ಸಮಸ್ಯೆ. ಸಾಜ=ಸಹಜ, ಸ್ವಾಭಾವಿಕ. ಶಂಕಿ=ಸಂಶಯ ಉಳ್ಳವ.

ವಿಶೇಷ : (೧) ೧೯೨೫ರ ಜಯಕರ್ನಾಟಕ ಹಾಗೂ ೧೯೨೬ರ ಜೀವನ-ಜನೇವರಿ ಸಂಚಿಕೆಯಲ್ಲಿ ಈ ಕವನ ಪ್ರಕಟವಾಗಿತ್ತು. ಕನ್ನಡನಾಡಿನ ಮತ್ತು ಕನ್ನಡಿಗರ ಸ್ಥಿತಿ-ಗತಿಯ ಚಿತ್ರ.

(೨) ೧೯೮೨, ಜನವರಿ, ೩೧ರಂದು ಧಾರವಾಡದ 'ಕವಿ ನಿವಾಸ'ದಲ್ಲಿ 'ಅಂಬಿಕಾತನಯದತ್ತ ವೇದಿಕೆ'ಯ ಆಶ್ರಯದಲ್ಲಿ ಶ್ರೀ ಪಿ. ಆರ್. ಭಾಗವತ್‌ರವರು ಕರ್ನಾಟಕ ಪ್ರೌಢಶಾಲೆಯ ವಿದ್ಯಾರ್ಥಿನಿಯರ ಕಡೆಯಿಂದ ಈ ಕವನದ 'ದೃಶ್ಯರೂಪಕ'ವನ್ನು ಪ್ರದರ್ಶಿಸಿದ್ದರು.

೮ ಸೀಮೋಲ್ಲಂಘನ

ಹೋಗೋಣ ಬಾ ! ಇನ್ನು ಸೀಮೆಯನು ದಾಟಿ ॥ ಪಲ್ಲವಿ ॥

೧

ಪಂಗಡವ ಪಂಗಡವ ಏಂಗಡಿಸಿ ಕಿಟ್ಟು
ಸಂಗಡಿಸಿ ಕೂಡಿರುವ ಬಾಳುವೆಯ ಗುಟ್ಟು
ಕಂಗೊಳಿಸೆ ಹಾಗಿರುವ ಬಿರುದನ್ನು ತೊಟ್ಟು
ಹೋಗೋಣ ಬಾ ಇನ್ನು ಸೀಮೆಯನು ದಾಟಿ

೨

ಇಲ್ಲಸಲ್ಲದ ಕಾಲತೊಡರುಗಳ ಕಡಿದು
ಬಲ್ಲವರು ತೋರಿರುವ ಹಾದಿಯನು ಹಿಡಿದು
ಎಲ್ಲರೂ ಒಂದಾಗಿ ಒಂದಾಗಿ ನಡೆದು
ಹೋಗೋಣ ನಾವೆಲ್ಲ ಸೀಮೆಯನು ದಾಟಿ

೩

ಅಕ್ಕತಂಗೆಂದಿರಿಗೆ ವಿದ್ಯೆಯನು ಕಲಿಸಿ
ಚಿಕ್ಕಮಕ್ಕಳ ಬುದ್ಧಿ ಮುದ್ದಾಡಿ ಬಲಿಸಿ
ನಕ್ಕು ನಲಿದಾಡಿ ಹಿರಿಕಿರಿಯರನು ಒಲಿಸಿ
ಅಡಿಗಡಿಗೆ ಹೋಗೋಣ ಸೀಮೆಯನು ದಾಟಿ.

೪

ಮಾಡಿದರೆ ನನ್ನಿ ತಾ ಮಾಡುವರು ನನ್ನಿ
ನೋಡಿ ನೋಡಿದವರ್ಗೆ ಬನ್ನಿ ಬನ್ನೆನ್ನಿ
ಕೊಡಬನ್ನಿ- ಕೊಳಬನ್ನಿ-ಕೊಡುವೆನೀ ಬನ್ನಿ
ಹೀಗೆಂದು ಸಾಗೋಣ ಸೀಮೆಯನು ದಾಟಿ.

೫

ಹಿಂದಿರುವ ಹಗೆಯೀಗ ಅಂಗಾರವಾಯ್ತು
ಮುಂದಿರುವ ಗೆಳೆತನದ ಸಿಂಗಾರವಾಯ್ತು
ಇಂದು ಮುಟ್ಟದ ಪತ್ರಿ ಬಂಗಾರವಾಯ್ತು!
ಹೋಗೋಣ ಬಾ ಇನ್ನು ಸೀಮೆಯನು ದಾಟಿ

೬

ಒಂದೆ ತಾಯಿಯ ಮಕ್ಕಳಂತೆ ಒಂದಾಗಿ
ಅಂದಗೇಡನು ಕೆಡಿಸಿ ಚೆಲುವು ಚೆಂದಾಗಿ
ಮುಂದಿರುವ ಜನರ ಸರಿಮೇಲು ಮುಂದಾಗಿ
ಸಾಗೋಣ ಹೋಗೋಣ ಸೀಮೆಯನು ದಾಟಿ

೭
ಹೋಗಲಾಡಿಸಿಕೊಂಡು ತಿರುಕತನವನ್ನು
ನೀಗಲಾಡಿಸುತ ಮನೆಮುರುಕುತನವನ್ನು
ಬೇಗದಿಂ ಕರುನಾಡ ಹರಕುತನವನ್ನು
ಕಳೆದು ಹಿರಿದಾಗೋಣ ಸೀಮೆಯನು ದಾಟಿ
೮
ಪಡುವಣದ ಶಕ್ತಿಯಲಿ ಮೂಡಣದ ಭಕ್ತಿ
ಬಡಗಣದ ಭುಕ್ತಿಯಲಿ ತೆಂಕಣದ ಮುಕ್ತಿ
ಒಡನೊಡನೆ ನೆರೆಬೆರೆತು ಹೊಸತಾಯ್ತು ಯುಕ್ತಿ
ಹೀಗೆ ಇಡಿಯಾಗೋಣ ಸೀಮೆಯನು ದಾಟಿ
೯
ದೇವಿಯರ ನಾಡೆಂತು ಹಿಂದುಳಿಯಬಹುದು ?
ಭಾವಭಕ್ತಿಯವೆಂತು ಹಗೆಯಾಗಲಹುದು ?
ಹೇವದಿಂ ಗುರಿಯಿಟ್ಟು ಮೇಳ ಹೊರಟಿಹುದು
ಏರಿಕೆಯ ಕರಿನಾಡ ಸೀಮೆಯನು ದಾಟಿ

- ಗರಿ : ೨೨/ರಚನೆ : ೧೯೨೬/ಪ್ರ : ೧೯೩೨

ಭಾವ : ಕನ್ನಡ ನಾಡಹಬ್ಬದ ಉಗ್ಗಡಣೆಗಾಗಿ ಬರೆದದ್ದು. ೧೯೨೬ರಲ್ಲಿ ಗೆಳೆಯರ ಗುಂಪು ಇಟ್ಟುಕೊಂಡಿದ್ದ ಧ್ಯೇಯಗಳ ವಿವರಣೆ.

ಶಬ್ದಾರ್ಥ : ಹೇವ=ಛಲ, ಹಠ.

೯ ಮೈಸೂರು

೧

''ಮೈಸೂರ ಮೈಸಿರಿಯು ಸೂರೆಗೊಂಬುದು ಮನವ
ಮೈಚಿನ್ನ ನಗೆಮಿಂಚು ಬಾವನ್ನದುಸಿರು
ನಯದ ವಿನಯದ ನಡೆಯು ಮಾತು ಸಂಗೀತ;
ಏನು ಸೊಗಸಿದು ಎನಿತು ಸೊಬಗು ಗೆಳೆಯ.''

೨

''ಬಾಯ್ಮುಚ್ಚು ಸುರಿಸದಿರು ಜೊಲ್ಲನೀತೆರದಲ್ಲಿ
ಹೊನ್ನೆಲ್ಲ ಹೊರಮಿಂಚು, ಮಿಂಚೆಲ್ಲ ಸುಡುಬೆಂಕಿ,
ಉಸಿರು ಬರಿ ಹೆಸರು, ನಯ ಭಯದ ಕುರುಹು,
ಮಾತುಕತೆ ಸಂಗೀತ ಸೊಗಸು ಸೊಬಗುಗಳೆಲ್ಲ
ಬೇರೆ ತಾಳಕೆ ಕುಣಿವ ಸೂಳೆ ಬೆಡಗು.''

೩

''ಕೆರಳದಿರು ಎಲೆ ತರಳ, ಕಂಡುದನೆ ಕಂಡು
ಕೆಂಡಂದಂತಾಗದಿರು,
ಕಂಡುದರ ಕಿಂಡಿಯೊಳಗಿಂದಲಾಚೆಗೆ ನೋಡು
ನೋಟ ಬೇರೊಂದ''

೪

''ಅಳಿದುದೊಡಲೊಳಗಿಟ್ಟು ಉಳಿದುದಕೆ ಎಡೆಗೊಟ್ಟು
ಬೆಳೆದುದಕೆ ಇಂಬಾಗಿ
ಹಿಗ್ಗುತಿದೆ ಬಯಲು''

೫

''ತರಗನ್ನು ಮಣಿಸುತ್ತ ಚಿಗುರನ್ನು ಕುಣಿಸುತ್ತ
ಹಾದಿಹುಡಿಯೊಳಗಿದ್ದ ಹೊನ್ನ ಕಿಡಿಯನ್ನೆತ್ತಿ
ಚುಕ್ಕಿ ಚಿಕ್ಕಿಗಳೊಡನೆ ಪಟ್ಟಗಟ್ಟಿ
ಸ್ವೈರವಾಗುತ ಬೀಸಿ ಸ್ವಚ್ಛಂದದೊಳಗೀಸಿ,
ಕಾಣದಲೆ ಹುರಿಗೊಳಿಸುತಿಹನು ಮಾರುತನು.''

೬
''ಗಣಿತ ಗುಣಿತಕೆ ಸಿಗದ
ಪ್ರಾರ್ಥ ಪ್ರಾರ್ಥಪ್ರಾಯ
ತಾರೆಗಳ ಬಳಗದಲಿ ತನ್ನೊಂದ ಎಡಬಿಡದೆ
ಬೆಳಕ ಬಿಂಕವ ತೊರೆದು
ದಾರಿದೋರುವ ನೆಪದಿ ನಿಂತಿಹನು ಧ್ರುವನು.''
೭
''ಮೊರೆ ಮೊರೆದು ಮನೆ ತೊರೆದು
ಬೆಟ್ಟಗಳ ಸಾಲ್ದೊರೆದು
ಬಂಜೆತನವನು ಹರಿದು
ದಡದ ಹಸಿರಲಿ ಮೆರೆದು
ಬರುತಿಹುದು ಮಲೆನಾಡ ಹುಚ್ಚು ಹೊನಲು.''
೮
''ಜನರ ಕಡಲಲಿ ಹುಟ್ಟಿ ಬಂದ ನಂಜನು ನುಂಗಿ
ಭೈರವನ ತಾಂಡವಕೆ ತನ್ನ ಮುಂದಲೆ ನೀಡಿ
ತಾಳಿ ಬಾಳುವೆನೆಂಬ
ಪಂಥದಿಂದಲಿ ಚಲಿಸದಿಹುದು ನೆಲವು.''
೯
''ಪಂಚಭೂತಗಳಿಂತು ಹೊಂಚು ಹಾಕಿರಲಾಗಿ
ಸಂಚು ಕೂಡದಲಿರದೆ ಹೊಸದೊಂದು ಜಗಕೆ?
ಕಾಣದೇ? ಕಾಣದೇ?-ಈ ಕಣ್ಣ ಮುಚ್ಚಿ ತೆರೆ
ಆ ಕಣ್ಣನೊಂದ.''

- ಗರಿ : ೩೭/ರಚನೆ : ೧೯೩೦-ಚಿತ್ರದುರ್ಗ/ಪ್ರ : ೧೯೩೨

ಭಾವ : ಇರುವ ಮೈಸೂರನ್ನು, ಬೆಳೆವ ಮೈಸೂರನ್ನು ಎರಡು ಬಗೆಯಲ್ಲಿ ಕಂಡ ಕಾಣಿಕೆ ಇಲ್ಲಿದೆ.

ಶಬ್ದಾರ್ಥ : ತರಗ-ತರಗು=ಒಣಗಿದ್ದು. ಮಾರುತ=ಗಾಳಿ.

ವಿಶೇಷ : ಬಾವನ್ನ=ಗಂಧ, ಶ್ರೀಗಂಧ, ಚಂದನ. ಬಾವನ್ನ ಎಂಬುದು ಭಂಗಾರಕ್ಕೆ ಸಮಾನವಾದ ಶಬ್ದವಾಗಿ ರೂಢಿಯಲ್ಲಿತ್ತು. ಇದಕ್ಕೆ ಕಾರಣ ಆಗ ಭಂಗಾರದ ಒಂದು ತೊಲೆಯ ಬೆಲೆ ಐವತ್ತೆರಡು ರೂಪಾಯಿ ಇತ್ತು. ಬಾವನ್ನ=ಐವತ್ತೆರಡು (ಮರಾಠಿಯಲ್ಲಿ).

೧೦ ಒಡನುಡಿ

೧

ದುಃಸಾಧ್ಯ ಸಂಭಾವ್ಯವೆಂಬ ಸೊಲ್ಲಿನ ಗುಲ್ಲು
ಗುಡುಗಾಡುತಿದೆ. ಕನ್ನಡದ ಕನ್ನಡಿಯು ಒಡೆದು
ಬೆಸೆಯು ಬರದಂತೆ ದೆಸೆದೆಸೆಗೆ ಬಿದ್ದಿದೆ. ಹಿಡಿದು
ಕಟ್ಟಬಲ್ಲಾ ಕೈಯೆ ಕಾಣದಿದೆ. ಬಡಹುಲ್ಲು
ಬೆಳೆಯೆ, ಹೂದೋಟ ಹುದುಗಿದೆ ನೆಲದೊಳೆಲ್ಲೆಲ್ಲು.
ದನದ ಜಂಗುಳಿಯಂತೆ ಹಿಂಡಾಗಿ, ಮನ ತಡೆದು
ನಿಂತಿದೆ, ನಿರಾಯಾಸ ಮೆಲಕು ಹಾಕುತ. ಸಿಡಿದು
ಪೂರ್ವ ವೈಭವವು ಉಃಶಾಪ ಕೋರುವ ಕಲ್ಲು.

೨

"ಶ್ರೀ ಕನ್ನಡದ ಧೂಳಿ ಬಾಂದೊರೆಯೊಳೋಕುಳಿಯ-
ನಾಡೀತು. ಸೂರ್ಯಮಾಲೆಯ ರಾಸಲೀಲೆಯದು
ಕನ್ನಡದಿ ಬಣ್ಣನೆಯ ಪಡೆದೀತು, ಪರಿಶುದ್ಧ
ಕನ್ನಡರ ಕೀರ್ತಿ ನಾಡಿಗೆ ಪ್ರಭಾವಳಿಯ ಕುಡಿ-
ಯೊಡೆಸೀತು. ಓಂ ಸ್ವಸ್ತಿ" - ಯೋಗನಿದ್ರೆಯೊಳಿದ್ದ
ರತ್ನ ಸಿಂಹಾಸನವು ಎದೆಯೊಳೊಡನುಡಿಯುವದು.

- ಉಯ್ಯಾಲೆ : ೨೫/ಪ್ರ ೧೯೩೮

ಭಾವ : ಕರ್ನಾಟಕದ ಏಕೀಕರಣದ ಚಿಂತನೆ ಈ ಕವನಕ್ಕೆ ಪ್ರೇರಣೆ.

ಶಬ್ದಾರ್ಥ : ಒಡನುಡಿ=ಅಂತರಂಗದ ಮಾತು.

೧೧ ಒಂದೇ ಕರ್ನಾಟಕ

ಒಂದೇ ಒಂದೇ ಒಂದೇ ಕರ್ನಾಟಕ ಒಂದೇ! ॥ ಪಲ್ಲವಿ ॥

೧

ಇಂದೇ ಮುಂದೇ ಎಂದೇ ಕರ್ನಾಟಕ ಒಂದೇ
ಜಗದೇಳಿಗೆಯಾಗುವದಿದೆ ಕರ್ನಾಟಕದಿಂದೆ
ಇಲ್ಲಿಯ ಜನ-ಮನ-ಭಾಷೆಯು ಕನ್ನಡವದು ಒಂದೇ
ಒಂದೇ ಜನವೂ ಒಂದೇ ಮನವೂ ಕನ್ನಡಿಗರು ಎಂದೇ
ಕುಲವೊಂದೇ ಸ್ಥಲವೊಂದೇ ನೀತಿಯ ನೆಲೆಯೊಂದೇ
ಹೀಗೆನ್ನದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಕನ್ನಡವೆಂದೂ ಒಪ್ಪದು ಕರ್ನಾಟಕ ನಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

೨

ಕನ್ನಡ ಮಾತೇ ಮಾತೆಯು, ಕರ್ನಾಟಕ ಒಂದೇ
ಅದು ದೈವತ ಅದು ಜೀವಿತ ಒಪ್ಪಿಹೆವದುವೆಂದೇ
ನಮ್ಮದು ನಿಮ್ಮದು ಅವರದು ಈ ಆಸ್ತೀಪಾಸ್ತೀ.
ನಾಡಿನ ತಾಯಿಗೆ ಸೇರಿದೆ, ಬೇರೆಯ ಮನೆ ನಾಸ್ತೀ
ಕನ್ನಡ ಕಾಯಕದಲ್ಲಿಲ್ಲವು ಕಮ್ಮೀಜಾಸ್ತೀ ॥
ಇದನೊಪ್ಪದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಕರ್ನಾಟಕ ಹಿತ-ವಿಹಿತವು ಕನ್ನಡ-ಕುಲದಿಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ

೩

ಕನ್ನಡವೂ ಭಾರತವೂ ಜಗವೆಲ್ಲವು ಒಂದೇ
ತುಂಬಿದೆ ಕನ್ನಡ ಕುಲವನ್ನೊಪ್ಪುವ ಕುಲದಿಂದೇ
ಕನ್ನಡ ದೀಕ್ಷೆಯ ಹೊಂದಿದ ಪ್ರತಿಯೊಬ್ಬನು ಆರ್ಯ
ಕನ್ನಡ ತೇಜವು ಸಾರಲಿ ಕನ್ನಡಿಗರ ಕಾರ್ಯ
ಕನ್ನಡ ನಡೆ ಇರದವರೇ ಶೂದ್ರರು ಅನಿವಾರ್ಯ
ಇಂತರಿಯದ ಹೆರವರು ಅವರಿದ್ದರು ಒಂದೇ
ಇರದಿದ್ದರು ಒಂದೇ !
ಉಗ್ಗಡಿಸಿರಿ ನಾಸ್ತಿಗೆ ಜಯ ಜಯ ಜಯ ಜಯವೆಂದೇ
ಒಂದೇ ಒಂದೇ ಒಂದೇ ಕರ್ನಾಟಕ ಒಂದೇ !

- ಗಂಗಾವತರಣ : ೧೮/ಪ್ರ : ೧೯೫೧

ಭಾವ : ಪರಿಹಾಸ ವಿನೋದ ಎಂಬಂತೆ ಬರೆದರೂ ಇಂದು ಅದು ಪರಮಾರ್ಥವಾಗಿ ನಿಂತಿದೆ.

ಶಬ್ದಾರ್ಥ : ನಾಸ್ತಿ=ಇಲ್ಲದಿರುವಿಕೆ, ಇರದೆ ಇರುವಿಕೆ.

ವಿಶೇಷ : ಕನ್ನಡದ ಅಭಿಮಾನ ಇಲ್ಲದವರು ಇಲ್ಲದಂತೆ ಆಗುವುದಕ್ಕೆ ಜಯಜಯಕಾರ ಘೋಷಣೆ ಮಾಡಲಾಗಿದೆ. ಕನ್ನಡ ಅಭಿಮಾನ ಇಲ್ಲದವರ ಸಂಖ್ಯೆ ಒಂದು ಮಹಾ ಆತಂಕ ಎಂಬ ಭಾವ ಇಲ್ಲಿದೆ. ಅಭಿಮಾನ ಇದ್ದವರು-ಆಸ್ತಿಕರು, ಅಭಿಮಾನ ಇಲ್ಲದವರು ನಾಸ್ತಿಕರು ಎಂಬ ಸೂತ್ರ ಸಾರಲಾಗಿದೆ. ಇದು ಈ ಕವನದ ಪರಮ+ಅರ್ಥ.

ಸ್ವಂತ ಆಸ್ತಿ ಯಾರದೂ ಇರಬಾರದು. ಎಲ್ಲರ ಆಸ್ತಿ ಕರ್ನಾಟಕದ್ದೇ ಎಂಬ ಭಾವ ಉದಯವಾಗಬೇಕು ಎಂಬುದು ಕವಿಯ ಆಶಯ. ೧೯೮೧ರಲ್ಲಿ ಬೇಂದ್ರೆಯವರು ಹೇಳಿದ್ದರು -"Property Law=ಆಸ್ತಿ ಸಂಪತ್ತಿಯ ಕಾಯದೆ ಅನೈಕ್ಯ-ಒಡಕು-ಸ್ವಾರ್ಥ ಉದ್ದೀಪಿಸುತ್ತದೆ. ಆದ್ದರಿಂದ ಆಸ್ತಿ ಸಂಪತ್ತಿಯ ಕಾಯದೆಯ ರದ್ದತಿ ಆದಾಗ ದೇಶದ ಕಲ್ಯಾಣವಾದೀತು".

೧೨ ಕನ್ನಡದಪ್ಪನ ಕೋಲು

೧
ಕೋಲುಕೋಲಿನ ಆಟ, ಕೂಡಿ ಕೊಳಲಿನ ಕೂಟ
ರಾಸಲೀಲೆಯ ಕೋಲ।
ಬಾಲಬಾಲೆಯರಾಟ, ಸೂತ್ರ ತಾಯಿಯ ನೋಟ,
ಹಾಸಶೀಲೆಯ ಕೋಲ॥

೨
ನವ್ಯನಂದನ ಮಾಟ, ದಿವ್ಯ ಹೃದಯದ ತೋಟ,
ಕರುಳವಳ್ಳಿಯ ಕೋಲ।
ಕಾವ್ಯರಸದ ಕೂಟ, ನೇಹದುಸುರಿನ ತೀಟ,
ತಿರುಳು ಮಲ್ಲಿಗೆಯ ಕೋಲ॥

೩
ಕೂಟರಾಜನ ಗಾಡಿ, ನಟರಾಜನ ನೋಡಿ,
ಚಿದಂಬರದಿ ಕೋಲ।
ಬೇಟದಾಟವನಾಡಿ, ಬೆಳ್ಳಿದಿಂಗಳು ಮೂಡಿ
ಹೃದಂಬರದಿ ಕೋಲ॥

೪
ತಂತ್ರಯುಕ್ತಿಯ ಕೋಲ, ರಾಗದುಕ್ತಿಯ ಕೋಲ,
ಪ್ರೇಮಭಕ್ತಿಯ ಕೋಲ॥
ಯಂತ್ರಶಕ್ತಿಯ ಕೋಲ, ತ್ಯಾಗಭುಕ್ತಿಯ ಕೋಲ,
ಲೀಲಾಮುಕ್ತಿಯ ಕೋಲ॥

- ಸೂರ್ಯಪಾನ : ೪೧/ಪ್ರ : ೧೯೫೬

ಭಾವ : ಕನ್ನಡ ರಾಷ್ಟ್ರಗೀತೆ ಜಾನಪದದ ಛಂದದಲ್ಲಿ.

ಶಬ್ದಾರ್ಥ : ಹಾಸಶೀಲ=ಹಾಸ್ಯದ ನಡತೆಯುಳ್ಳ. ತೀಟ=ಬೀಸುವಿಕೆ.

೧೩ ಕನ್ನಡದ ಕಮಳ

೧

ಕನ್ನಡದ ಕಮಳವದೊ ಅಷ್ಟದಳವಾಗಿಹುದು
ಕ್ಷೇತ್ರದಳ ಕ್ಷೇತ್ರಿದಳ ಜೀವದಳವು.

೨

ಬ್ರಹ್ಮದಳ ಶೇಷದಳದಲಿ ದಳವನರಳಿಸುತ
ವಾಯುದಳವಾದ ಕರ್ನಾಟ ದಳವು.

೩

ದಾಸದಳ, ವತ್ಸದಳ, ಮಿತ್ರದಳದೊಂದಿಗೇ
ಮಾಧುರ್ಯ ದಳವೊಂದು ಬಿಡಿಸುತಿರಲು.

೪

ಕರ್ಣಿಕಾಮಧ್ಯದಲಿ ಹಂಸವೆಚ್ಚತ್ತಿಹುದು,
ನವಚತುರ್ದಳಗಳನು ಮೀರುತಿಹುದು.

೫

ಬಾನ್ಮೈಯೆ ಕದಿರ ಗರಿಗರಿ ಬಿಚ್ಚಿ ನಿಮಿರಿರಲು
ಚೈತ್ಯದಾಕಾಶದಲಿ ಏರುತಿಹುದು.

- ಮುಕ್ತ ಕಂಠ : ೧೪/ಪ್ರ ೧೯೫೭

ಭಾವ : ಕನ್ನಡದ ಅಷ್ಟಾಂಗಗಳಲ್ಲಿ ಒಂದೊಂದು ಶಕ್ತಿಯ ಕುರುಹು, ದರ್ಶನ ಮಿಂಚಿದಾಗ ಕಂಡ ಕವನ.

ಶಬ್ದಾರ್ಥ : ಕ್ಷೇತ್ರ=ದೇಹ. ಕ್ಷೇತ್ರಿ=ಜೀವ. ಕರ್ಣಿಕಾಮಧ್ಯ=ಕಮಲದ ನಡುವಿನ ಭಾಗ, ಬೀಜಕೋಶ. ನವಚತುರ್ದಳ=ನಾಲ್ಕು ಪಕಳೆಗಳುಳ್ಳ ಹೊಸದಳ, ದಾಸ, ವತ್ಸ ಮಿತ್ರ ಹಾಗೂ ಮಾಧುರ್ಯ ಎಂಬ ಇವು ಹೊಚ್ಚ ಹೊಸ ನಾಕು ದಳಗಳು. ಕದಿರ=ಮಿಂಚು, ಪ್ರಕಾಶಿಸು, ಕಾಂತಿ.

೧೪ ಪಾರ್ವತಿ ನೀನೇ ಸಲಹು

೧
ಈಶ್ವರ ನಿರ್ಮಿಸಿದೀ ಸೃಷ್ಟಿಯನು
ಪಾರ್ವತಿ! ನೀನೇ ಸಲಹು
ನಿನ್ನದೆ ಈ ನೆಲ, ನಿನ್ನದೆ ಈ ಜಲ
ನಿನ್ನದೆ ಕನ್ನಡ ಗೆಲಹು.
೨
ಒಲಿವ ಲಿಂಗವೇ ಚೆಲುವ ಲಿಂಗವೇ
ನಲಿವ ಲಿಂಗವೇ ನೀ ತಾಯಿ.
ಕನ್ನಡ ಬೀಜವ ಹೂವಾಗಿಸಿದೆ
ಹಣ್ಣಾಗುವವರ ನೀ ಕಾಯಿ.
೩
ಪಾರ್ವರ ಪಾರಿಕೆ ತ್ರೀನೇತ್ರ ಶಿಖೆಯೊಲು
ಉತ್ತರೋತ್ತರವು ಮೇಲು ಮುಖ.
ಪ್ರತಾಪವಿಲ್ಲದ ತಾಪ ಬೆಳೆಸುವಾ
ಹುಸಿ ತಪಸ್ಸಿನಲಿ ಏನು ಸುಖ?
೪
ಬಡಗಣ ತೆಂಕಣ ಪಡುವಣ ಮೂಡಣ
ನಡುವಣ ಕನ್ನಡ ಪಂಚಶಿಖ.
ಪರಮೇಶ್ವರನೊಲು ಪ್ರಪಂಚ ಪ್ರಕಟಿಸಿ
ವೈದೋರಿತು ಇಗೊ ಪಂಚಮುಖ.
೫
ಜೈನರ ಕಾವ್ಯದ ಶರಣರ ವಚನದ
ದಾಸರ ಹಾಡಿನದೀ ನಾಡು.
ವಿಶ್ವದ ಕಬ್ಬದ ಹಬ್ಬಹುಣ್ಣಿವೆಗೆ
ಕನ್ನಡ ಹೃದಯವ ಹದ ಮಾಡು.
೬
ಹಾಡಿಗೆ ತಕ್ಕಾ ರಾಗವು ಬೇಕು
ರಾಗಕೆ ತಕ್ಕಾ ಅನುರಾಗ.
ಹೇಳುವವರಲೂ ಕೇಳುವವರಲೂ
ರಸಪರಿಣಾಮದ ಸಮಯೋಗ.

 ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು; ನಾಡಿದಿನಾ ಕನ್ನಡನಾಡು''-ಸಂ:ಡಾ।। ವಾಮನ ಬೇಂದ್ರೆ

೭
ಕರ್ನಾಟಕವನು ಕಡೆದರು, ಹೊರಟಿತು
ಕನ್ನಡವೆನ್ನುವ ನವನೀತ.
ಹೃದಯದ ಮರ್ಮವ ಮಿಡಿದರೆ ಬರುವೊಲು
ನಾದದಿಂದ ಅನುಭವಗೀತ.
೮
ಕನ್ನಡ ನುಡಿದಿತು ಕನ್ನಡ ಹಕ್ಕಿ
ಕನ್ನಡವೆಂದಿತು ಆ ಗೋದೆ.
ಕಾವೇರಿಯು ತಂಪಾಯಿತು, ಕನ್ನಡ
ಗಾಳಿಯು ಉಸಿರಿತು ಈ ಬೋಧೆ;
೯
ಜಿನ ಹರಿ ಅಲ್ಲಾ ಶಿವನೇ ಬಲ್ಲಾ
ಒಬ್ಬನಲ್ಲದೇ ಎರಡಿಲ್ಲಾ!
ಜೀವದೇವನೊಂದಾವಣೆ ಇಲ್ಲದ
ನೀರಿಲ್ಲದ ನೆಲ ಬರಡಲ್ಲಾ.
೧೦
ಅರ್ಪಣವಿಲ್ಲದೆ ಪ್ರಸಾದವಿಲ್ಲಾ,
ತರ್ಪಣವಿಲ್ಲದೆ ಶ್ರಾದ್ಧ ಗಡಾ?
ದರ್ಪಣವಿಲ್ಲದೆ ದರ್ಶನವಿಲ್ಲಾ
ಯೋಗದ ತೇರಿಗೆ ಶ್ರದ್ಧೆ ಬುಡ!
೧೧
ಈಶ್ವರನೊಲುಮೆಗೆ ಶ್ರದ್ಧೆಯೆ ಮೂಲ.
ಅವನೊಡಗೂಡಲು ಶಕ್ತಿ ಬಲ.
ಆತ್ಮದಿ ಶ್ರದ್ಧೆಯು ಪ್ರಸಾದ ಪಡೆಯಲು
ಬೇಕಾಗಿರುವದು ವೀರಛಲ.
೧೨
ಅಶಿವವು ಎಂಬುದು ಬಾಳುವೆ ಅಲ್ಲ.
ಅಶಕ್ತವೆಂಬುದು ಬದುಕಲ್ಲ.
ಅನೀಶವೆಂಬುದು ರಾಜ್ಯವೆ ಅಲ್ಲ.
ಅಭಕ್ತವಾದರೆ ಇರಸಲ್ಲ.

೧೩
ಅನೇಕಾಂಗವಿದೆ ಐಕ್ಯದ ಕೀಲ
ಅನೈಕ್ಯವಾದರೆ ಒಂದಲ್ಲ
'ನಾ' 'ನಾ' ಎನ್ನುತ ನಾನಾ ತೆರದಲಿ
ವಿಭಕ್ತವಾದರೆ ಚೆಂದಲ್ಲ.

೧೪
ಬಾಂಧವ್ಯವು ಇದು ಬಂಧನವಾದರೆ
ಮುಕ್ತ ಜೀವನಕೆ ತೆರವಿಲ್ಲ.
ಸ್ವಭಾವ ಪರಿಪಾಕಕ್ಕಿಂಬಿದ್ದರೆ
ಸಾಮರಸ್ಯಕದು ಎರವಲ್ಲ.

೧೫
ನಡೆದಷ್ಟಿದೆ ನೆಲ, ಹರಿದಷ್ಟಿದೆ ಜಲ,
ಏರಿದಷ್ಟು ಇದೆ ಹಿರಿಬಯಲು
ದುಡಿದಷ್ಟಿದೆ ಬಲ, ಪಡೆದಷ್ಟಿದೆ ಫಲ.
ಪಯರಿಗೆ ತಕ್ಕಷ್ಟಿದೆ ಕುಯಿಲು.

೧೬
ಶಾಂತಿಯಿಂದ ಪರಿಪುಷ್ಟಿಗೊಂಡು ಸಂ-
ತುಷ್ಟವಾಗಲೀ ನಾಡ ಜನ.
ವಿಜಯ ಹೊಂದಿ, ಕಲ್ಯಾಣ ಪಡೆದು, ಸ್ವ-
ಸ್ವ-ಧರ್ಮ ಕಾಯಲಿ ಚಿರಂತನ.

- ಸೂರ್ಯಪಾನ : ೫೮/ಪ್ರ : ೧೯೫೬

ಭಾವ : ಕರ್ನಾಟಕ ಪಂಚಾಂಗಯುಕ್ತ. ಕರ್ನಾಟಕದ ನಿರ್ಮಿತಿಯು ಪಂಚಾಂಗ ಯುಕ್ತವಾಗಬೇಕು ಎಂಬ ಹಾರೈಕೆಯ ಭಾವಗೀತವಾಗಿದೆ.

ಶಬ್ದಾರ್ಥ : ಇರಸಲ್ಲ=ಇರಿಸು+ಅಲ್ಲ=ಯುಕ್ತವಲ್ಲ. ಇಂಬು=ಸುಖಾಶ್ರಯ. ಎರವು=ಹೊರತು, ಬೇರೆ. ಕುಯಿಲು-ಕೊಯ್ಲು=ಬೆಳೆಯನ್ನು ಕೊಯ್ಯುವಿಕೆ.

ವಿಶೇಷ : ಈ ಕವನ 'ದರ್ಶನ' ಎಂಬ ಹೆಸರಿನಿಂದ ೧೯೫೬ರಲ್ಲಿ ಎಸ್. ಡಿ. ಇಂಚಲ ಸಂಪಾದಿಸಿದ 'ಕರ್ನಾಟಕ ದರ್ಶನ' ಎಂಬ ಗ್ರಂಥದಲ್ಲಿ ಪುಟ ೧-೪ ರಲ್ಲಿ ಪ್ರಕಟವಾಗಿದೆ. ನುಡಿ-೧ ಸಾಲು ೩, ೪ ಹೀಗಿವೆ : "ನಿನ್ನದೆ ಶಿಲೆಯು, ನಿನ್ನದೆ ಕಲೆಯು ಶಿವಶಕ್ತಿಗೆ ಇದೆ ಗೆಲವು."

೧೫ ಕನ್ನಡದ ಪಾವನಪರಂಪರೆ

೧

ಕಥಕ:

ಕಡಲ ಮೇಲೆದ್ದಿತ್ತು ಕೂರ್ಮದಂತೀ ನೆಲವು
ಗೊಂಡವನ ಪ್ರಾಚೀನ ಭೂಮಿಭಾಗ.
ಧಾರ್ವಾಡ ಕಟಕುಬಂಡೆಯ ಮೇಲೆ ಹಬ್ಬಿತ್ತು
ವನವಾಸಿ ಕುಂತಳದ ಭವ್ಯ ಜಾಗ.

೨

ಪಿಂಮಲೆ ಹಿಮಾಲಯವು ನೆಲೆಯೆತ್ತಿನಿಂತಾಗ
ಅತ್ತ ಹರಿದವು ಪುಣ್ಯ ಯಮುನೆ ಗಂಗೆ;
ವಿಂಧ್ಯಕ್ಕೆ ತೆಂಕಲಲಿ ಘಟ್ಟಗಳ ತೊಟ್ಟಲಲಿ
ಉರುಳಿದವು ಕಾವೇರಿ ಗೋದೆ ತುಂಗೆ.

೩

ಹೆದ್ದೊರೆಯು ಕೃಷ್ಣೆ, ಅವಳಾ ಎದೆಯ ಹರವಿನಲಿ
ಎಡಬಲಕೆ ತೆರೆದಿತ್ತು ಬಯಲುಸೀಮೆ.
ಮಲೆನಾಡು ಮುಂದೆ ಸಾಗರಬಿದ್ದು ಅಪ್ಪುವದು,
ತುಳು ಕೊಂಕ ಮತ್ತೆ ಗೋಕರ್ಣ ಗೋವೆ.

೪

ತೆಂಕಣಕೆ ಕೇರಳವು, ದ್ರಾವಿಡವು ಮೂಡಲಕೆ
ಆಂಧ್ರ, ಬಡಗಣಕೆ, ಮಾರಾಷ್ಟ್ರ ನಾಡು
ಈ ಚತುರ್ದಳ ಮಧ್ಯಬೀಜ ಕರ್ನಾಟಕವು
ಧರ್ಮಗುಂಜಾರವದ ಕವಿಯ ಬೀಡು.

೫

ಕಾವೇರಿ ತೀರದಲಿ ಪ್ರಳಯವೆರಗಿರಲಾಗಿ
ಸತ್ಯವ್ರತನಾದ ಮನು ಬದುಕಿಕೊಂಡ.
ಈ ಸ್ವಯಂಭುವಿನಲ್ಲಿ ಧರ್ಮಾವತಾರಗಳು
ಉದಿಸಿರಲು ಕಟ್ಟಿತ್ತು ಭಕ್ತಿಪಿಂಡ.

೬

"ಣಮೋ ಸಿದ್ಧಾಣಂ, ಣಮೋ ಅರಿಹಂತಾಣಂ
ಣಮೋ ಆಚಾರ್ಯಾಣಂ, ಣಮೋ ಉಪಯಾಣಂ
ಣಮೋ ಸಬ್ಬ ಸಾಧೂಣಾಂ."

೭
ಕೇಳಿದಿರೊ ದಿವ್ಯಧ್ವನಿ ಜೀವದ ಣವೋಂಕಾರ
ಕನ್ನಡದ ಟಂಕಾರ: ಧರ್ಮಸಾರ.
ತ್ಯಾಗಭೋಗದ ಯೋಗ ಸಾಕಾರ ಪಡೆಯುತಿರೆ
ಗುರಿಯತ್ತ ನಡೆದ ಕರ್ಣಾಟವೀರ!
೮
ಹಾಡು :
"ಏಳು ಕನ್ನಡ ಕಂದಾ, ನೀನಾಡಿದ್ದೇ ಚೆಂದ,
ಮಾಡಿದ್ದಲ್ಲಾ ಮಾಟಾ, ಇನ್ನೇನು?
ಕಟ್ಟಿದ್ದಲ್ಲಾ ಕವನಾ, ಇನ್ನೇನು?
೯
ಬಯಲೆಲ್ಲಾ ಬಾಯಾಗಿ ತಾಯ್ನುಡೀ ನುಡಿದಾಗ
ರಸಬಾಳಿ ರಸಗಬ್ಬು ತೆಂಗೇನು?
ಸಾವಿರದ ಹೂರಸ ಸವಿಜೇನು."
೧೦
ಎಕ್ಕಲದೇವಿ! ಜೋಗಮಾಯಿ!
"ಉಧೋ! ಉಧೋ! ಉಧೋ!"
"ಏಳ್‌ಕೋಟಿ ಏಳ್‌ಕೋಟಿ ಏಳ್‌ಕೋಟಿ"
ಜಗದಂಬ ನಿನ್ನಾದಕ್ಕs ಉಧೋ! ಉಧೋ! ಉಧೋ!
ಎಲ್ಲಮ್ಮ ನಿನ್ನಾದಕ್ಕ ಉಧೋ! ಉಧೋ!
೧೧
ಏಳು ಮಕ್ಕಳ ತಾಯಿ! ಏಳ್ಮಲೆಯ ನೆಲೆ ಮಾಡಿ
ಎಬ್ಬಿಸಿದಳೆಲ್ಲಮ್ಮ ಎಲ್ಲರನ್ನು.
ಜೀವನದ ದ್ವಂದ್ವಕ್ಕೆ ಹುರಿದುಂಬಿಸಿದಳು ತಾನು
ಗೆಲ್ಲಲಣಿ ಮಾಡಿದಳು ಎಲ್ಲರನ್ನು.
೧೨
ಮೈಸೂರು ಚಾಮುಂಡಿ, ಕೊಲ್ಲೂರು ಮೂಕಾಂಬೆ,
ಬನವಾಸಿ ಗೋಕರ್ಣ ಭದ್ರಕಾಳಿ.
ಬಾದಾಮಿ ಬನಶಂಕ್ರಿ ಗುಡ್ಡದಾ ಎಲ್ಲಮ್ಮ
ಎಲ್ಲರೂ ಹರಸುವರು 'ತಾಳಿ ಬಾಳಿ.'

---

೨೬ ಅಂಬಿಕಾತನಯದತ್ತರ "ಇಂದಂದಿನದಲ್ಲೀ ಹಾಡು ; ನಾಡಿಪಿನಾ ಕನ್ನಡನಾಡು"-ಸಂ:ಡಾ।। ವಾಮನ ಬೇಂದ್ರೆ

೧೩

ಬಾಳು ಗೊಂದಣ ನೃತ್ಯ, ಉಸಿರುಸಿರು ಕೃತಕೃತ್ಯ
ಕನ್ನಡದ ಮಗು ಮಾಣೆ ಮಾತೃಭೃತ್ಯ.
ಗುಡ್ಡ ಮಲೆತಲೆಗಳಲಿ ಗುಡಿಗಟ್ಟಿ ನಿಂತಿಹುದು
ಅವತಾರದುದ್ಧಾರದೇಕಕೃತ್ಯ.

- ಜೀವಲಹರಿ : ೩೧/ಪ್ರ : ೧೯೫೭

ಭಾವ : ಬೆಂಗಳೂರ ಬಾನುಲಿಯ ಪ್ರಾರಂಭೋತ್ಸವದ ನಿಮಿತ್ತದಿಂದ ಬರೆದ ಈ ಕವನ, ಧಾರವಾಡ ಆಕಾಶವಾಣಿ ಪ್ರಾರಂಭೋತ್ಸವದಂದೂ ಬಿತ್ತರಿಸಲಾಯಿತು.

ಶಬ್ದಾರ್ಥ : ಗೊಂದಣ-ಗೊಂದಣಿ=ಸಮೂಹ.

ವಿಶೇಷ : ಕರ್ನಾಟಕದ ಸಾಮರಸ್ಯ ಸಾಧಿಸುವ ಬಗೆಯನ್ನು ಇಲ್ಲಿ ವರ್ಣಿಸಲಾಗಿದೆ. ಬನವಾಸಿ-ಕೇರಳದ ರಾಜಧಾನಿ ಆಗಿತ್ತು. ಕುಂತಳನಗರ ಧಾರವಾಡ ಜಿಲ್ಲೆ. ಅದು ಅಂದು ಹಾನಗಲ್ಲೇ ಆಗಿತ್ತು

೧೬ ಕನ್ನಡ ಜೀವನಲಹರಿ

೧

ಇದು ವೈಷ್ಣವ ಇದು ಜೈನವು ಇದು ಶಾಕ್ತವು ಶೈವ
ಇದು ಜೀವನು ಇದು ಜೀವನ-ಪುರುಷಾರ್ಥವು ದೈವ
ಒಮ್ಮುಖವಿದು ಹಲಮೊಗದೊಲು ತೋರುವ ತರತಮತೆ
ಇದು ನಿಮ್ಮದು ಇದು ನಮ್ಮದು ಇದು ಎಲ್ಲರ ಮಮತೆ.

೨

ಇದು ಮಣ್ಣಿನ ನರುಮಲ್ಲಿಗೆ, ಇದು ನೆಲದ ನಿಧಾನ
ಇದು ರಸವನೆ ಹೊರದೋರುವ ನಾಟಕದ ವಿಧಾನ
ನಶ್ವರದಲಿ ಮೂಡಿಹುದಿದು ಶಾಶ್ವತತೆಯ ಚಿತ್ರ
ಇದೆ ಇಲ್ಲೆಂಬುವ ವಾದವ ಇಂಗಿಸುವ ವಿಚಿತ್ರ.

- ಜೀವಲಹರಿ : ೧/ಪ್ರ : ೧೯೩೭
("ಜೀವ-ಲಹರಿ" ಎಂಬ ಶೀರ್ಷಿಕೆ ಇತ್ತು)

ಭಾವ : ಜನಜೀವನದಲ್ಲಿ ಅನೇಕ ಜೀವಪ್ರವಾಹಗಳಿವೆ. ಪ್ರವಾಹ ಪ್ರವಾಹದಲ್ಲಿಯೂ ಕಾಲಕಾಲದ ಲಹರಿಗಳು ಬೇರೆ ಬೇರೆ. ಕನ್ನಡ ಜೀವನಲಹರಿ ಸಂತಾನಗಳಲ್ಲಿಯೂ ತನ್ನ ನಿಲುವನ್ನು ಬೆಳೆಸುತ್ತಿದೆ.

ಶಬ್ದಾರ್ಥ : ನರು ಮಲ್ಲಿಗೆ=ಒಳ್ಳೆಯ ಸುಗಂಧದ ಮಲ್ಲಿಗೆ.

೧೭ ದಿವ್ಯ-ಧ್ವನಿ

ಸುರತ್ನ ಸಿಂಹಾಸನದ ದಿವ್ಯಧ್ವನಿ
ಕೂಗಿತು ಕಹಳೆಯ ನಿರರ್ಗಳ:-

೧

ಕನ್ನಡ ವೈವೆುಗೆ ವೈ ವೈಸೂರು
ವುಹಾವುನಸ್ಸಿನ ವುಹಿವೆು ಗಡ.
ಈ ತುಂಬಿನಲೇ ಕೂಡಲುಬಹುದು
ಉಳಿದ ಕನ್ನಡದ ಚತುರ್ದಳ.

೨

ಕುಡಗರು ತುಳುವರು ತೊಡವರು ಬಡಗರು
ತೆಂಕಣ ಕೊಂಕಣ ಕಡಲವರ
ಭೂತಳ ಕುಂತಳ ಭಾಗಾಮಂಡಲ
ಪಶ್ಚಿಮ ವಾಹಿನಿ ಪುರಃಸರ.
ಪುಂಡರೀಕದಲಿ ವಿಠ್ಠಲನೆದ್ದ
ಕಣ್ ನಡೆಯಲಿ ಕನ್ನಡ ಗೆದ್ದ.

೩

ತಿರುಪತಿ ಕರೆವುದು ಶ್ರೀಶೈಲವನಗೊ
ಉಡುಪಿಗೆ ಕಿವಿಗೊಡೆ ಗೋಕರ್ಣ.
ಶೃಂಗೇರಿಯ ಅದ್ವೈತ ಶೃಂಗದಲಿ
ಧನಿಗೊಡುತಿದೆ ಪಂಚೀಕರಣ.

೪

ಅಶೋಕಚಕ್ರದ ತ್ರೈವರ್ಣ
ಹಂಪೆಯ ಕೊಂಪೆಯ ನೋಂಪಿಯು ಫಲಿಸಲಿ
ಗುಡಿಗಟ್ಟಲಿ ಕನ್ನಡ ಹರಣ
ತಪ್ಪಲಿ ದೈನಂದಿನ ವುರಣ
ಕೂಡಲಿ ಜಿನ ಹರಿ ಹರ ಶರಣ
ನವಧರ್ವುದ ಐಕ್ಯಾವರಣ.

- ಜೀವಲಹರಿ : ೩೦/ಪ್ರ : ೧೯೫೭

ಭಾವ : ಸ್ಥೂಲ ಏಕೀಕರಣದ ಹಿಂದೆ ಒಂದು ಸೂಕ್ಷ್ಮ ಕಾರಣವಿರುತ್ತದೆ. ಇದರ ಏಕೀಕರಣವೂ ಆಗಬೇಕಾಗಿದೆ.
ಶಬ್ದಾರ್ಥ : ತುಂಬು=ತೊಟ್ಟು ನಾಳ. ಪಂಚೀಕರಣ=ತಿರುಪತಿ, ಶ್ರೀಶೈಲ, ಉಡುಪಿ, ಗೋಕರ್ಣ, ಶೃಂಗೇರಿ ಇವುಗಳ ಐಕ್ಯಭಾವ ಮಿಲನ. ನೋಂಪಿ=ವ್ರತ.
ವಿಶೇಷ : ಜಿನ, ಹರಿ, ಹರ, ಶರಣ ಐಕ್ಯಾವರಣಗೊಂಡಾಗ ನವಧರ್ಮದ ಉದಯ ಸಾಧ್ಯ.

೧೮ ಇದೆ-ಇದೆ

ಇದೆ ಇದೆ ಇದೆ, ನೋಡುವುದಿದೆ ಇದೆ,
ಜಲವಿದೆ ನೆಲವಿದೆ ಬಲವಿದೆ ಫಲವಿದೆ. ॥ ಪಲ್ಲವಿ ॥

೧

ಬೆಳೆವುದು ಇದೆ ಇದೆ, ಬಾಳುವುದಿದೆ ಇದೆ,
ಅಳಿದರು ತನು ತಾನುಳಿವುದು ಇದೆ ಇದೆ.
ನೋಡುವುದಿದೆ ಇದೆ; ಮಾಡುವುದೂ ಇದೆ.

೨

ಆವರಣವು ಇದೆ, ನಿರಾವರಣವು ಇದೆ,
ಹೊಗೆ ನುಂಗುವುದಿದೆ, ಧಗೆಯ ಕಳೆವುದಿದೆ.
ಅಡಿಯಿಂ ಮುಡಿವರೆಗೆ ಬೆಳಗುವುದಿದೆ ಇದೆ.
ಕಾಂಬುದ ಕಂಡರೆ ಕಡೆವರ ಉಳಿವಿದೆ.

೩

ಕೊಡುವವಗೂ ಇದೆ, ಕೊಳುವವಗೂ ಇದೆ,
ನೋಡುವುದೊಂದಿದೆ, ಕಾಣುವ ಹಲವಿದೆ.
ತೋರುವ ತೆರೆಯನು ತೆರೆಯುವ ಕಲೆ ಇದೆ.

೪

ಬಂಧನವೂ ಇದೆ, ಬಿಡುಗಡೆಯೂ ಇದೆ,
ಸಿದ್ಧಿಯ ಮುಟ್ಟಲು ಸಾಧನವು ಇದೆ.
ಹಲವು ಜನುಮಗಳ ಬಟ್ಟೆ ಕಳೆವುದಿದೆ,
ಕೆಲವಂ-ಕಳೆದರು ಉಳಿವುದೊಂದು ಇದೆ.

೫

ಭುಜಬಲವೂ ಇದೆ, ಎದೆಯೊಲವೂ ಇದೆ,
ಭೇದ ಅಭೇದವ ಅರಿಯುವ ಛಲವಿದೆ.
ಹತ್ತಿರ ಹೊಲವಿದೆ, ಎತ್ತರ ನಿಲುವಿದೆ,
ಸುತ್ತ ನೋಡಿದೆಡೆ ಬಿತ್ತಿದ ಬಯಲಿದೆ.

೬

ಶರಣು ಬಂದವರಿಗೆ ಶರಣೆಂಬುದಿಲ್ಲಿದೆ
ಕರುಣವುಳ್ಳವರಿಗೆ ಕಾಯಕದೆಡೆ ಇದೆ.
ಹರಣ ಉಳ್ಳನಕ ಆಚರಣ ಮಾರ್ಗವಿದೆ
ಆಮರರಾದವರಿಗೆ ಮರಣವು ಎಲ್ಲಿದೆ?

೭

ಭುಜಬಲ ತಪಿಸುತ ಹುಟ್ಟಿದ ಸ್ಥಲವಿದೆ
ಶಾಂತಿಸಾಗರವು ಕಟ್ಟಿದ ನೆಲೆಯಿದೆ
ಸಮಂತ ಭದ್ರವು ಆಶ್ರಮವಿದೆ ಇದೆ
ಇದೆ ಎಂದರು ಇದೆ, ಇಲ್ಲವೆಂದರಿದೆ

೮

ಹೇಳಲು ಬರದಿದೆ, ಹೇಳದೆ ಇರದಿದೆ,
ತಿಳಿವಗೆ ತಿಳಿದಿದೆ, ಇನ್ನು ತಿಳಿವುದಿದೆ.
ಅರಿವವಗೂ ಇದೆ, ಮರೆವವಗೂ ಇದೆ,
ಎಲ್ಲಕು ಒಳಗಿದೆ, ಎಲ್ಲರ ಹೊರಗಿದೆ.
ಒಳ ಹೊರಗೂ ತಾನಿದೇಽ ಇದೆ, ಇದೆ, ಇದೆ.

- ಜೀವಲಹರಿ : ೯/ಪ್ರ : ೧೯೫೭

ಭಾವ : ಕರ್ನಾಟಕದ ಉತ್ತರ ಸೀಮೆಯ ಬಾಹುಬಲಿ ವಿದ್ಯಾಲಯ ಮತ್ತು ಕ್ಷೇತ್ರವನ್ನು ಕಂಡಾಗ ಎದ್ದ ಲಹರಿ.

ಶಬ್ದಾರ್ಥ : ಕಡೆವರ=ಕೊನೆತನಕ.

೧೯ ಎಲ್ಲೆ ಎಲ್ಲ ಆದಾತನಿಗೆ

೧
ಮೈಸೂರಿನ ರಥ ಹೂಡಿದೆ ಸಾರಥಿ
ಕನ್ನಡದಾರತಿ ಇಗೊ ನಿನಗೆ
ಕಾರ್ತಿಕ ಬರಲಿದೆ ಮನೆಮನೆಗೆ
ಕನ್ನಡರಥಿ ತಾ ಮುನ್ನಡೆ ಧಿಟ್ಟನು
ವೈಶ್ವಾನರನಾ ಕರೆಗೋಗೊಟ್ಟನು
ತೇಜಃಪುಂಜವ ಅರ್ಪಣವಿಟ್ಟನು.

೨
ನಾಡಿನ ವಿಶ್ವಭ್ರಾತನಿಗೆ
ಜೀವನಾಡಿ ಮಿಡಿದಾತನಿಗೆ
ನಾಳಿನ ನಾಳಿನ ತ್ರಾತನಿಗೆ
ಆತನು ಈತನು ಸೋತೆನು ಎನದೇ
ಎಲ್ಲೆ ಎಲ್ಲ ಆದಾತನಿಗೆ

೩
ಸತ್ ಚಿತ್ ಆನಂದದ ಇಗೊ ಕುಂದದ
ಒಳಹೊರ ಹೊಂದಿದ ಆರತಿಯು
ಇವಳೇ ಕನ್ನಡ ಭಾರತಿಯು

೪
ವಿಶ್ವರತಿಯ ಶೃಂಗಾರವಲ್ಲಿ
ಆಗೊ, ದೇವದೇವಿಯರ ಪ್ರಣಯವಲ್ಲಿ
ನುಡಿನುಡಿದು ನುಡಿಸುತಿದೆ ಪ್ರಣವದಲ್ಲಿ
ಆ ಹೊಸ ಹೊಸ ಕನ್ನಡದಾರತಿಯು
ನವೋ ನವ ಶ್ರೀ ಭಾರತಿಯು.

೫
ಸಂದೇಹದ ಶೃಂಖಲೆಗಳ ಕಡಿದು
ವಿದೇಹಿಯೆನುವೊಲು ದೇಹವ ಹಿಡಿದು
ದೇಹಿ ಎನದೆ ದಾಸೋಹಂ ನುಡಿದು
ಋತಚಿತ್ತದ, ದಿನನಿತ್ಯದ, ಗುರುಸತ್ಯದ ಬಾಳುವೆ
ಪ್ರತಿಕ್ಷಣದಲಿ ರಕ್ಷಣೆಯಲಿ, ಈ ಕ್ಷಣಕೂ-ಆಳುವೆ.
ಜಗದ್ವಾರ ಆತ್ಮವೀರ ಧೀರನಂತೆ ತಾಳುವೆ.

---

೩೨ ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು''-ಸಂ:ಡಾ|| ವಾಮನ ಬೇಂದ್ರೆ

೬

ಕೇಳಿಕೆಯಲಿ ನುಡಿಯುತಿರು
ಕಾಣಿಕೆಯಲಿ ನಡಿಯುತಿರು
ಪಡೆದದ್ದಕೆ ದುಡಿಯುತಿರು
ಪೂರ್ಣಬ್ರಹ್ಮ ಯುಕ್ತಿಯಲ್ಲಿ
ಸತ್‌ಪ್ರಪಂಚ ಶುಕ್ತಿಯಲ್ಲಿ
ಜಿನಮುಕ್ತಿಯ, ಶಿವಶಕ್ತಿಯ, ಹರಿಭಕ್ತಿಯ ಆರತಿ
ಈ ಕನ್ನಡ ಭಾರತಿ.

೭

ವಿಶ್ವಂಭರಶ್ರುತಿ ಹಿಡಿ, ಮಾರುತಿಯಲು ವಿರಾಟ ಮೂರುತಿ ಮೆರೆಯುತಿರೆ
ಸೊಲಗನು, ಕೊಡಗನು, ತುಳುವನು, ಕೊಂಕಣ
ಮೂಡಲ ಪಡುವಲ ಬಡಗಣ ತೆಂಕಣ
ಕಳನೂ ಕುಳನೂ ಕನ್ನಡ ಕೊಂಕಣ
ಕಟ್ಟಲು ನೆರೆಯುತಿರೆ
ಅನಂತ ಸ್ವರಗಳು ಬೆರೆಯುತಿರೆ
ದಿವ್ಯ ಕರ್ಮ ರೂಪಿಸು
ದಿವ್ಯವ ಆಲಾಪಿಸು.

೮

ಮಾನವತೆಯ, ನವನರತೆಯ
ಈ ಕವಿತೆಯ ಆರತಿ
ಸಿರಿಗನ್ನಡ ಭಾರತಿ.

- ಜೀವಲಹರಿ : ೩೩/ಪ್ರ : ೧೯೫೭

ಭಾವ : ಕರ್ನಾಟಕ ರಾಜ್ಯೋದಯದ ದಿನ ಧಾರವಾಡದಲ್ಲಿ ಓದಿ ಹೇಳಿದ ಆರತಿಯ ಹಾಡು.

ಶಬ್ದಾರ್ಥ : ಕಳ=ಹೊಲದಲ್ಲಿ ಧಾನ್ಯ ಒಕ್ಕುವ ಸ್ಥಳ. ಕುಳ=ಹೊಲದಲ್ಲಿ ದುಡಿಯುವ ಆಳಿನ ಗುಂಪು. ವೈಶ್ವಾನರ=ಅಗ್ನಿ ಬೆಂಕಿ. ತ್ರಾತ=ರಕ್ಷಿಸಲ್ಪಟ್ಟ ಋತ=ಸತ್ಯ. ಶುಕ್ತಿ=ಮುತ್ತು

೨೦ ಹೊಸ ಹಾರೈಕೆ

೧

ಊರ್ಧ್ವ ಗತಿಯಲೇ ಮನೋರಥವು ಸಹ ಅಪಾರ್ಥವೆನಿಸದೆ ನೂಗಲಿ
ಹಿರಣ್ಯಗರ್ಭನ ತೇಜಃಪುಂಜವು ಹುಂಜವು ತಾನೆನೆ ಕೂಗಲಿ
ನವಿರುಗಣ್ಣಿನಲಿ ನವಿಲು ಬಣ್ಣದಲಿ ಹೆಣ್ಣಿನ ನಯ ತಲೆದೂಗಲಿ
ಪೂತು ಕಾತು ಪೊಸ ಪಾಡಿಗಾಗಿ ಬಾಳ್ ತೊಂಗಲು ಬಿಂಕದಿ ಬಾಗಲಿ
ಕಾಡಿನಲ್ಲಿ ನಡುನಾಡು ನೆಲೆತು ಕೋಲ್ ಹಾಡು ಹಳ್ಳಿಗೂ ಸಾಗಲಿ
ಶೃಂಗೇರಿಯ ಶಾರದೆಯ ಕರುಣೆಯಲಿ ಕನ್ನಡಕ್ಕೆ ಜಯವಾಗಲಿ.

೨

ತಂಬೆಳಕಾಗಲಿ ನಂಬೆಳಕೆನುವೊಲು ಹೊಂಬೆಳಕೇ ಹೊರಸೂಸಲಿ
ಸ್ವಪ್ನತರಂಗದ ಸಪ್ತರಂಗದಲಿ ಬಾಳಿನ ಹೊಸಬಗೆ ಹಾಸಲಿ
ಕೃಪಾಕಟಾಕ್ಷದ ಅಪಾಂಗವೀಕ್ಷಣ ಕ್ಷಣ-ಕ್ಷಣ-ಗಣಗಳ ಮೀಸಲಿ
ಗಾಳಿಯಲ್ಲಿ ನವಕಾಳಿಯಾಗಿ ಜಲ ಕೇಳಿಯೆ ಎನೆ ತಾನೀಸಲಿ.
ಸೋಮಧೂತರಸ ವಾಯುದೂತನಲೆ ವೈಶ್ವಾನರನಲಿ ಬೀಸಲಿ.

೩

ನಂಬೆಳಕೊಳುಂ ನಿಂಬೆಳಕೇ ಕೂಡಲಿ ಈಶಪ್ರಜ್ಞೆಯು ಮೂಡಲಿ
ಎದೆಯು ಒಲೆಯು ಉರಿ, ಹೊಂಗೇದಿಗೆಯೊಲು, ಹೊಗೆಹಾವನು ಹೊರದೂಡಲಿ.
ಸುಪ್ತ ಸರಸ್ವತಿ, ಯುಕ್ತಿ ಹೈಮವತಿ, ಲಕ್ಷ್ಯ ಲಕ್ಷ್ಮಿ ಒಳಗೂಡಲಿ.
ವಸುಂಧರೆಯು ಸುತ ವಾಸುದೇವ ತನ್ನಾಟಕೆ ಅಟ್ಟವ ಹೂಡಲಿ.
ಕಾಂಬ ಇರವು, ಓ ಸಾಂಬ ಸದಾಶಿವ, ಕಾಣ್ಕೆಯು ಅರಿವನು ಊಡಲಿ.

- ಜೀವಲಹರಿ-೨೮/ಪ್ರ : ೧೯೫೭
("ಹಾರೈಕೆ" ಎಂಬ ಶೀರ್ಷಿಕೆ ಇತ್ತು)

ಭಾವ : ಹೊಸಕಾಲಕ್ಕೆ ತಕ್ಕ ಹೊಸ ಹಾರೈಕೆಬೇಕು. ಅದಾಗದೆ ಹೊಸಕಾಲಕ್ಕೆ ಅರ್ಥ ಬರದು.

ಶಬ್ದಾರ್ಥ : ಹೈಮವಂತಿ=ಪಾರ್ವತಿ, ಗಂಗೆ. ಊಡಲಿ=ತಿನ್ನಿಸಲಿ, ಕುಡಿಸಲಿ.

೨೧ ನನ್ನದು ಈ ಕನ್ನಡ ನಾಡು

ನನ್ನದು ಈ ಕನ್ನಡ ನಾಡು ನನ್ನದೋ!
ಅವರಿವರದೆಂದು ಎಂದೂ ಎನ್ನದೋ!
ಅದು ನನ್ನದೆಂತು ಹಾಗೇಽ ನಿನ್ನದೋ!
ನನ್ನದು ಈ ಕನ್ನಡ ನಾಽಡು
ಈ ಕನ್ನಡ ನಾಡು ನನ್ನದು ॥ ಪಲ್ಲವಿ ॥

ಒಂದು

೧
ಕನಸಿಟ್ಟ ತತ್ತಿಗಳ ಗೂಽಡು ನೋಡದೋ!
ಮೈಗೊಂಡು ಬಂತು ಕಣ್ಣೂಽಡಿ
ಕುಣಿ ಕುಣಿವ ರೆಕ್ಕೆಯೊಡಗೂಽಡಿ
ಬೆರಗಾಗಿ ನೋಡುತಿದೆ ರೂಢೀಽಽಽ.
೨
ಸರ್ವಾರ್ಥ ಸಿದ್ಧಿ, ಕೇವಲದ ಬುದ್ಧಿ
ಆಂತರ್ಯ ಶುದ್ಧಿ ಮೈಗೂ ಮುಟ್ಟಿದೆ
ದಿಟವಾದ ನಿಖರ ತಪವಾಗಿ ಪ್ರಖರ-
ಕೈಲಾಸ ಶಿಖರವನ್ನೂ ಮೆಟ್ಟಿದೆ
೩
ಅಹ ಏನು ಚೆಂದ, ಹಲ ಜನ್ಮ ಬಂಧ
ಸೋಪಾನದಂದವಾಗಿ ಕಟ್ಟಿದೆ
ಪರಹಂಸಯೋಗಿ, ಪರಿಶುದ್ಧ ಭೋಗಿ
ಭರತನ್ನಾ ಸಲಿಸಿದೆ.
೪
ಭುಜ ಬಲವ ಮೆರೆಸಿ, ವೈರಾಗ್ಯವಿರಿಸಿ
ಗೊಮ್ಮಟನಾ ನಿಲಿಸಿದೆ
ಸಂಸಾರದಲ್ಲೆ ಭವಭಾರದಲ್ಲೆ
ಸ್ತ್ರೀಹೃದಯಾ ಒಲಿಸಿದೆ.

೫

ದಕ್ಷಿಣಕೆ ಬಂದು, ಬೆಳಗೊಳಕೆ ನಿಂದು
ಶ್ರವಣಕ್ಕೆ ಎಂದು ಸಂದೇಶಾ ಆಟ್ಟಿತೋ
ಅದು ಆಗ ತನ್ನ ತಾನರಿದು, ಹೃದಯ ಕಣ್ದೆರೆದು
ಪೂರ್ವಭವ ಹರಿದು, ಕನ್ನಡಽವೂ ಹುಟ್ಟಿತೋ
ಇಂತಹದೀ ಕನ್ನಡನಾಡುಽ
ನನ್ನದು.

ಪಠಣ

೧

ಕಣಸೆಂದ ಕಾಣ್ಕೆಗಳ ಕೂಟಽ ಕಂಡೆಯೋ
ಒಂದೊಂದು ಮೂರ್ತಿ ಒಡಮೂಽಡಿ
ಆವರಣವನ್ನೆ ಒಡಗೂಽಡಿ-
ಸಾಕ್ಷಾತ್ತು ಆಯ್ತು ಶಿವಮೋಡಿಽಽಽ

೨

ಹಿಮಗಿರಿಯ ಬಾಲೆ, ಹೊತ್ತಿಸಿದ ಜ್ವಾಲೆ
ಅಹ ಶಿವನ ಲೀಲೆ ಮತ್ತೂ ಮರಳಿಸಿ
ಅತ್ತತ್ತ ಏಕೆ; ಇತ್ತತ್ತ ಬರಲಿ
ಜಗದತ್ತ ಎಂದು ಇಳೆಗೂ ಹೊರಳಿಸಿ.

೩

ಪಿಂಡಾಂಡದಲ್ಲಿ ಬ್ರಹ್ಮಾಂಡವನ್ನೆ
ಉದ್ದಂಡವಾಗಿ ಹೂ ಹೂ ಅರಳಿಸಿ
ಆ ನಂದಿಯಲ್ಲಿ ಹಲ ಮಂದಿಯಲ್ಲಿ
ಯುಗ ಸಂಧಿಯಲ್ಲಿ ಬಸವನ್ನಾ ಬೆಳಗಿಸಿ.

೪

ಅನುಭಾವ ಮೋಡ, ಘನದಾಚೆ ನೋಡ
ಸಿಡಿಲ್ ಮಿಂಚು ಕೂಡ ಪ್ರಭುವಾಗಿ ಮೊಳಗಿಸಿ
ಇಹದೇವಿಯಾಗಿ, ಮಹದೇವಿಯಾಗಿ
ಬಹತಾಯಿಯಾಗಿ ಶ್ರೀಶೈಲಾ ತೊಳಗಿಸಿ

೫

ಕಲ್ಯಾಣಕಟ್ಟಿ ಉಳವಿಯನು ಮುಟ್ಟಿ
ದಿಗ್ದೇಶ ಮೆಟ್ಟಿ ಲಿಂಗಾಂಗಽ ಅಪ್ಪಿದಾ
ಮಾತೆಲ್ಲ ಜ್ಯೋತಿ, ಸರ್ವಜ್ಞ ರೀತಿ
ಬರಿದೇಕೆ 'ನೇತಿ' ಭವಿಸಂಗಽ ತಪ್ಪಿದಾ
ಆ ಕನ್ನಡ ನಾಡು
ನನ್ನದು.

ಮೂರು

೧

ಕೈಲಾಸ ಮತ್ತು ವೈಕುಂಠಽ ಎನ್ನದೋ
ಹರಿಹರರ ಒಲವೆ ಒಂದಾಗಿಽ
ಅಘಟಿತದ ಘಟನೆ ಮುಂದಾಗಿಽ
ಉದ್ಭವದ ಲಿಂಗ ಚೆಂದಾಗಿಽಽಽ

೨

ಶೃಂಗೇರಿ ತುದಿಗೆ, ಶಾರದೆಯ ಎದೆಗೆ
ಆ ಜ್ಞಾನ ನದಿಗೆ ಪೂರಾ ಬಂದಿರೆ
ಮೇಲ್ಕೋಟೆ ಅಂದ, ಅದು ಪ್ರಣಯ ಬಂಧ
ಇಲ್ಲದರ ಮುಂದ ಶ್ರೀಯೇ ಒಂದಿರೆ.

೩

ಪಡುಗಡಲ ತಡೆಗೆ, ಕನ್ನಡದ ಕಡೆಗೆ
ಮುಕ್ತಾತ್ಮರೆಡೆಗೆ ಕೃಷ್ಣನಿಂದಿರೆ
ದುಷ್ಟರನು ಒತ್ತಿ ಶಿಷ್ಟರನು ಎತ್ತಿ
ಧರ್ಮವನೆ ಹತ್ತಿ ಶುಕರೂಪಾ ಬೇಡಿದಾ

೪

ಎಲ್ಲದರ ಹಿಂದೆ ಆ ಸೂತ್ರ ಒಂದೆ
ಭೂಭುವನ ತಂದೆ ಕವಿಚೈತ್ರಾ ನೋಡಿದಾ
ಬಹುರಾಗವಾಗಿ ಅನುರಾಗ ವಾಗಿ
ಮಧು ಭಕ್ತಿಗಾಗಿ ದಾಸಾರ್ಯ ಹಾಡಿದಾ.

೫

ಮಾಸತಿಯ ಬೀಡು, ಮುಡುಪಾದ ನಾಡು
ಇದಕಾರು ಜೋಡು ಎತ್ತೂ ಸುತ್ತಲೂ
ಮಲೆಯಾಳ ಮಂದ್ರ, ದ್ರಾವಿಡವು ಸಾಂದ್ರ
ಮಾರಾಷ್ಟ್ರ ಆಂಧ್ರ ಸುತ್ತೂಽಮುತ್ತಲೂ
ಇಗೊ ನಡುವಿನ ಕನ್ನಡ ನಾಡುಽಽ
ನನ್ನದು

ನಾಕು

೧

ಇತಿಹಾಸ ವೇದ, ಸಂಜ್ಞಾನಽ ಕಲ್ಪನೆ
ದುರ್ಭೇಧ್ಯ ದುರ್ಗ ವೈಚಿತ್ರ್ಯ
ನವ ನವ ವಿಸರ್ಗ ಚಾರಿತ್ರ್ಯ
ಕೃತಯುಗದ ಮಾರ್ಗ-ಪಾವಿತ್ರ್ಯ

೨

ಭೌತಿಕದ ತೇರು, ಆತ್ಮಿಕದನೇರು
ದೈವಿಕದ ಮೇರು ಮೂರರೂ ಕೂಡಿರೇ
ಅವ್ಯಯನಿಗಾಗಿ ಉತ್ತಮನೆ ಮಾಗಿ
ಹೃದಯಜ್ಞನಾಗಿ ಯಜ್ಞ ಹೂಡಿರೇ

೩

ಕ್ಷೇತ್ರಜ್ಞ ಮೂರ್ತಿ, ಪ್ರಾಚೀನ ಕೀರ್ತಿ
ಋಷಿಗೋತ್ರಸ್ಫೂರ್ತಿ ಮಂತ್ರ ಮೂಡಿರೆ
ಭಾರತಿಯ ಜೋಡಿ, ಕನ್ನಡದ ಮೋಡಿ
ಭೂದೇವಿ ಮಾಡಿ ಎರಕವನೆ ಹೊಯ್ದಿರೆ

೪

ರಸದೊಳಗೆ ರಸವು ಹಲ ಬಣ್ಣ ಹೊಸವು
ಬೀಜವನೆ ತುಷವು ತಾಯಾಗಿ ಕಾಯ್ದಿರೆ
ಆತ್ರೇಯ ನೇತ್ರ ಚಾತುರ್ಯ ಸೂತ್ರ
ಘಟಪಟದ ಗಾತ್ರ ಹೊಳೆ ಸುಳಿಯ ನೆಯ್ದಿರೆ

೩೮ ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು''-ಸಂ:ಡಾ॥ ವಾಮನ ಬೇಂದ್ರೆ

೫

ಅಂಬಿಕೆಯ ಕೊಂಬಿ, ತುಂಬುರನ ತುಂಬಿ
ಗೊಂಬಿಯಾ ರಂಭಿ ತಾನೇ ಕುಣಿದಿದೆ
ಓಹೋ ಪರಾಕು! ಹಾರೈಕೆ ಬೇಕು
ಶಿವಜೀವ ನಾಕು ಹೆಣಿಗೆSಹೆಣೆದಿದೆ

೬

ಇಂದಂದಿನದಲ್ಲೀ ಹಾಡು
ನಾಡಿದಿನಾ ಕನ್ನಡ ನಾಡು
ಆ ಕನ್ನಡ ನಾಡು ನನ್ನದು
ನನ್ನದು ಈ ಕನ್ನಡ ನಾಡು.

- ನವುನ : ೪೯/ಭಾಗ ೧ ರಿಂದ ೩. ಪ್ರ : ೧೯೫೮,
ಭಾಗ-೪ ಸಾಹಿತ್ಯದ ವಿರಾಟ್ ಸ್ವರೂಪ ಪು.೧೪೮-೧೪೯.

ಶಬ್ದಾರ್ಥ : ಸಂಜ್ಞಾನ=ಸಂಪೂರ್ಣ ಜ್ಞಾನ, ಸಾಮರಸ್ಯದ ಜ್ಞಾನ. ತುಷ=ಭತ್ತದ ಕಾಳಿನ ಮೇಲಿನ ಕವಚ, ಹೊಟ್ಟು

ವಿಶೇಷ : ಬೇಂದ್ರೆ ಕಂಡ ಕನ್ನಡ ನಾಡಿನ ಉದಯ ಆಗಬೇಕಾಗಿದೆ. ಆದುದರಿಂದ ನಾಡಿದಿನಾ ಕನ್ನಡ ನಾಡು ನನ್ನದು ಎಂದಿದ್ದಾರೆ 'ಮಾನವ ಜಾತಿ ತಾನೊಂದೆ ಒಲಂ' ಎಂದು ಆದಿ ಮಹಾಕವಿ ಪಂಪನು ಕಂಡಂತೆ, ಬೇಂದ್ರೆಯವರು ಸರ್ವ ಜಾತಿ, ಮತ, ಪಂಥ ಸಮನ್ವಿತ-ಸಾಮರಸ್ಯದ ಕನ್ನಡ ನಾಡನ್ನು ಕಾಣುವ ಅಪೇಕ್ಷೆ ಉಳ್ಳವರಾಗಿದ್ದರಿಂದ ಅಂಬಿಕಾತನಯದತ್ತರು ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು'' ಎಂದಿದ್ದಾರೆ.

೫೫೭ ಕನ್ನಡ-ಕವನ

೧
ಮಾನವನಾತ್ಮವ ಪಾವನ ಮಾಡುವ
ಕವನವಾಗದೇ ಕನ್ನಡವು ?
ಯಾವನ ಭಾವನೆ ಏನಿದೆ ಏನೋ
ಅವನಿಗೆ ಅವನದು ಇದೆ ತೊಡವು !

೨
ಭೂಮಂಡಲವಿದು ಅಖಂಡವಿದ್ದೂ
ಖಂಡ ಮಂಡಲದ ಪುಂಡಾಟ
ತೊಡವುಗಳನ್ನೇ ತೊಡಕು ಮಾಡುತಿದೆ
ಮಿಡುಕುವುದೇ ಆಗಿದೆ ಮಾಟ.

೩
ಸಾಯಲಿ ದಾನವ, ಕಾಯಲಿ ಮಾನವ
ನೋವೇ ದೇವನ ನೆಕ್ಕುವದು ;
ರಸದಲ್ಲಿಯೆ ಇದೆ ಬೆಂಕಿಯ ಚುರುಕು
ಬೆಳಕೇ ಕಣ್ಣನು ಕುಕ್ಕುವದು.

೪
ಮತಕ್ಕೆ ಮತಗಳ ನೆನವೇ ವೈರಿ
ಸೋಲು ಗೆಲವುಗಳ ನೆನೆಗುದಿಯು
ಮೊಳಕೆ ಒಡೆದರೂ ಯಾವುದೊ ಬೆಳಕಿಗೆ
ಕುರುಕ್ಷೇತ್ರ ರಚಿಸಿದೆ ವಿಧಿಯು.

೫
ವಾಯುದೇವರಿಗೆ ಕಲಿ ಇದಿರಾಗಿ
ಜೀವಜೀವಗಳ ಮುಸುಕುವದು
ಚಿತ್ತಕೆ ಜಾಡ್ಯದ ರಾಹುಗ್ರಾಸ
ಜೀವನವೇ ತಪವೆಸಗುವದು.

೬
ಲಿಂಗಭಂಗಿಯಲಿ ಅಭಂಗವಾಗಿದೆ
ಶಿವ-ರುದ್ರದ ನವ ಅವತಾರ
ರಾಧೆಯ ಬಾಧೆಯ ವೇಧವು ಹತ್ತಲು
ಪ್ರೇಮಿಯು ತಾ ಸೋಗಿನ ಜಾರ.

೭
ಸ್ವರ್ಗ ನರಕಗಳು ಉಸಿರಾಟದ ಹೊಲ ;
ಯುಗಯುಗ ದೀರ್ಘವು ಹೊಸಜನ್ಮ ;
ಕರ್ಮವೆ ಭೂತ, ಕರ್ಮವೆ ಭಾವ
ಉದ್ಭವ ನೈಸರ್ಗಿಕ ಮರ್ಮ

೮
ದೇವನ ಆಟವೆ ಪಾವನ ಧರ್ಮ
ಮಾತಿನ ಲಿಂಗವು ಜ್ಯೋತಿಯದು
ಜಾತಿಗೆ ಜಾತಿಯ ಮಥನವು ನಿಂತರೆ
ಭಾವವು ತಾ ಧ್ವನಿ ರೀತಿಯದು !

೯
ಭಾವವೆ ದೇವ, ಭಾವವೆ ದೆವ್ವ
ದುರ್ಗಿಗು ದೇಮವ್ವಗು ನಂಟು
ಬೆಳಕು ಬಿಟ್ಟು ನೆರಳೆಲ್ಲಿದೆ ತಮ್ಮಾ ?
ನಮ್ಮಾ ನಿಮ್ಮಾ ಇದೆ ಗಂಟು !

೧೦
ರೂಪ ಕಾಂತಿಯಲೆ ರೂಪದ ಭ್ರಾಂತಿ
ಹೆಜ್ಜೆ-ಹೆಜ್ಜೆಗಳ ಸುಳಿವೆಲ್ಲೋ ?
ಓಂ ರಾಗದ ಕವಿಗಾರನೆ ಹೇಳು
ಪ್ರತಿಮೆ ಪ್ರತೀಕವು ಯಾಕಲ್ಲೋ ?

- ಮುಗಿಲ ಮಲ್ಲಿಗೆ : ೧೭/ಪ್ರ : ೧೯೬೧

ಭಾವ : ಆದ ಇತಿಹಾಸಕ್ಕಿಂತ ಆಗತಕ್ಕ ಇತಿಹಾಸಕ್ಕೆ ಹೆಚ್ಚಿನ ಸಿದ್ಧತೆ ಬೇಕು. ವೇದಾಂತಕ್ಕಿಂತ ತಿಳುವಳಿಕೆಯ ಬೆಳಕು ಬೇಕು.

ಶಬ್ದಾರ್ಥ : ತೊಡವು-ತೊಡಹು=ಆಭರಣ ಭೂಷಣ. ಮಿಡುಕು-ಮಿಡುಂಕು=ವ್ಯಥೆಪಡು, ಚಿಂತಿಸು. ನೆನೆಗುದಿ=ನಿರ್ಣಯಿಸಲಾರದ ಸ್ಥಿತಿ. ಬಾಧೆ=ನೋವು, ಕಷ್ಟ ವೇಧ=ಚಿಂತೆ. ಜಾರ=ವ್ಯಭಿಚಾರಿ.

ವಿಶೇಷ : ಪ್ರತಿಮೆ ಹಾಗೂ ಪ್ರತೀಕದಲ್ಲಿ ಭೇದ ಮಾಡುವುದು ಅವಶ್ಯವೆ ಎಂಬ ಪ್ರಶ್ನೆ ಇಲ್ಲಿ ಕೇಳಲಾಗಿದೆ. ಯಾವುದೇ ಮೂರ್ತಿಯ ಪ್ರತಿಮೆಯ ಪ್ರತಿಷ್ಠಾಪನೆ ಮಾಡುವುದು ಭಕ್ತಿಯ ಪ್ರತೀಕವಾಗುವುದು ಸಹಜ ಹಾಗೂ ಸಾಮಾನ್ಯ.

೨೩ ಕೇಳಿ ನುಡಿಯುವದುಂಟು

ಒಂದು

ಕೇಳಿ ನುಡಿಯುವದುಂಟು
ಈ ಕನ್ನಡಾ
ಕಂಡು ನಡೆಯುವದುಂಟು
ಈ ಕನ್ನಡಾ ॥ ಪಲ್ಲವಿ ॥

೧
ಕಿವುಡಾಗಿ ನುಡಿಯುವದು
ಕುರುಡಾಗಿ ನಡೆಯುವದು
ಮೊರೆಯೊ ಬೇಡೆನ್ನುವದು
ಈ ಕನ್ನಡಾ

೨
ಬಾಯ್ಮುಚ್ಚಿ ಬದುಕುವದು
ಕಾಲ್ಕಟ್ಟಿ ಕೂಡುವದು
ಯಾವ ಬಾಳೆಂಬುವದು
ಈ ಕನ್ನಡಾ

೩
ಬೈಯ್ಯುವದು ಕೃತ್ಯವೋ ?
ಗೊಂದಲವು ನೃತ್ಯವೋ ?
ತಲೆ ಹಾಕಿರೆನ್ನುವದು
ಈ ಕನ್ನಡಾ

೪
ನಾಲಿಗೆಯಲೆರಡೊಂದು
ಎದೆಯಲ್ಲಿ ಬೇರೊಂದು
ಶೂಲಿ ಸಾಕೆನ್ನುವದು
ಈ ಕನ್ನಡಾ

೫
ಯಾಕೇನೊ ಹುಟ್ಟಿದ್ದೆ
ಎಂದಾರೆ ಸಾವು ಇದೆ
ಅಳಿವುಳಿವು ಒಂದೆನದು
ಈ ಕನ್ನಡಾ

೬
ಭೂತವನು ಮೆಟ್ಟುವುದು
ಭಾವವನು ಕಟ್ಟುವುದು
ಕಂಗಳರ ಕಣವಲ್ಲ
ಈ ಕನ್ನಡಾ

೭
'ತಮ ವಿಷಮ ತಿತ್ತಿಮರು'
ಕೈಲಿ ಡಾಮರ ಡಮರು
ಬರಲಿ-ಬೆದರುವದೇನು
ಈ ಕನ್ನಡಾ ?

೮
ಚದುರುಸೊಲ್ ಗುಲ್ಲಲ್ಲ-
ಎಚ್ಚರಿರುವನು ಬಲ್ಲ
ಗಳಪುವಾ ಗಿಳಿಯಲ್ಲ
ಈ ಕನ್ನಡಾ

೯
ಎಣ್ಟೈಯ ಗುರುವಿಗೋ
ಅವನ ಕಣ್ತೆರವಿಗೋ
ನಮೋನಮೋ ನಮಿಸುವದು
ಈ ಕನ್ನಡಾ

ಎರಡು

ಕಣ್ತೆರೆಯದ ಜನ ಕನ್ನಡವೆಂತು ?
ಒಂದಾಗದೆ ತಾ ಮುನ್ನಡೆ ಎಂತು ? ॥ ಪಲ್ಲವಿ ॥

೧
ಭೇದದ ಮೂಲಕೆ ಅಭೇದ ಉಂಟು
ವಿಶೇಷ ಸಾಮಾನ್ಯಕೆ ಇದೆ ಗಂಟು
ಹೆಣಿಗೆಯ ಕುಸುರಿಗೆ ಹೆಸರೇನುಂಟು
ಮೊಳಕೆ ಒಡೆಯುವದೆ ಮಲ್ಲಿಗೆಯಂಟು

೨
ಮಾಮರದಲಿ ಕೋಗಿಲ ಕೂಗುವದು
ಸುಗ್ಗಿಯ ತೊಟ್ಟಿಲವನು ತೂಗುವದು
ದೇವಮುಹೂರ್ತವು ಬಂದಿದೆ ತಮ್ಮಾ
ಹೃತ್ ಸಂಬಂಧವು ನಮ್ಮಾ ನಿಮ್ಮಾ.

೩
ಸತ್ಯೋದ್ಧಾರಕ ನಿತ್ಯಪ್ರತಿಷ್ಠ
ವಿಜ್ಞಾನಿಯೆ ಉತ್ತಿಷ್ಠೋತ್ತಿಷ್ಠ

೪
ನರಸಿಂಹಾಸನ ಒಡೆನುಡಿಯುವದು
ನವರತ್ನವು ಕಾಂತಿಯ ಕುಡಿಯುವದು
ಅನೇಕಾಂತ ಏಕಾಂತದ ಶೀಲ
ಕೀಲ ಕೀಲದಲಿ ನೀರದ ನೀಲ

೫
ರಾಜ್ಯೋದಯ ದಿನ ಉದಿಸಿದೆ ಮತ್ತೆ
ನಿದ್ರಿಸುವೀ ಜನ ಕಣ್ಮುಚ್ಚುತ್ತೆ
ಕಾಣದ ಕನ್ನಡ ಕನವರಿಸುವದು
ಮಹಿಶೂರರ ಕಂಡೂ ಮರೆಸುವುದು

೬
ಇಲ್ಲದ ಮೇರೆಯನೇ ಮೆರೆಸುವದು
ಇದ್ದ ಗದ್ದಲಕೆ ಕಲೆ ಬೆರೆಸುವುದು
ಕರ್ಣದ ನಾಟಕ ಕೇಳದ ಪಾತ್ರ
ಕಣ್ಣಿನ ಆಟವ ನೋಡಲಪಾತ್ರ.

೭
ರವಿಗೂ ಸೋಮಗು ಜಗಳವ ಹಚ್ಚಿ
ಮಹಿತಲೆ ತಿರುಗುವವೊಲು ಕಣ್ಮುಚ್ಚಿ
ಕತ್ತಲೆ ಬೆತ್ತಲೆ ಎನುವಳು ಹುಚ್ಚಿ
ಬೆಳಕನು ಕಾಣಳು ತಾ ಎವೆ ಬಿಚ್ಚಿ

೮
ಬೆಳಕಿನ ಮಾತಿಗೆ ಬೆಡಗೆನ್ನುವರೇ ?
ಬಿನ್ನಾಣಕ್ಕೆ ಮೈ ಮಡಗೆನ್ನುವರೇ ?
ತನ್ನರಿವಿನ ಗುರುವಿನ ಮಾಲಿಂಗ
ಜಂಗಮವವನೆ ಎರೆದಿದೆ ಸರ್ವಾಂಗ

೯
ಜ್ಯೋತಿ ಜ್ಯೋತಿಗೂ ತನ್ನದೆ ಜಾತಿ
ಕೂಜಿಸುತಿದೆ ಪೂರ್ಣದ ಅಕೂತಿ.

೧೦
ಶರತ್ಸಮಯದಲಿ ಶಾರದೆ ಬಂದು
ಕವಿಮಂಡಲವನು ಗೋಷ್ಠಿಗೆ ತಂದು
ಧಾರವಾಡ ಹೂಬಳ್ಳಿಯ ಬೆಳೆಸಿ
ನವಕಾಲಕೆ ಆಮಂತ್ರಣ ಕಳಿಸಿ
'ಸಹನಾವವತುಽ' ಪಠಿಸುವಳಣ್ಣಾ
ಬೆಳಕಿಗೆ ಕಂಡಿವೆ ಹೊಸಹೊಸ ಬಣ್ಣಾ.

- ಮರ್ಯಾದೆ : ೧೧/ಪ್ರ : ೧೯೬೬
("ಕೇಳಿ ನುಡಿ ಕಂಡು ನಡೆ ಓ ಕನ್ನಡ ಕಂದಾ" ಎಂಬ ಶೀರ್ಷಿಕೆ ಇತ್ತು)

ಭಾವ : ೧೯೬೬ ರ ಕರ್ನಾಟಕ ರಾಜ್ಯೋತ್ಸವದ ನಿಮಿತ್ತವಾಗಿ ಹುಬ್ಬಳ್ಳಿ-ಧಾರವಾಡ ಸಂಯುಕ್ತವಾಗಿ ಹಮ್ಮಿಕೊಂಡ ಕವಿಗೋಷ್ಠಿಯಲ್ಲಿ ಓದಿದ ಕವನ.

ಶಬ್ದಾರ್ಥ : ಕಂಗಳ=ಕುರುಡ. ಕಣ=ರಣಾಂಗಣ. ಡಾಮರ=ಭಯಂಕರವಾದ. ಡಮರು=ಒಂದು ಬಗೆಯ ಚರ್ಮ ವಾದ್ಯ. ಸೋಲ್=ಮಾಡು. ಗುಲ್ಲು=ಗಲಾಟೆ. ಗಳಪು=ಮತ್ತೆಮತ್ತೆ ಅದನ್ನೇ ಮಾತನಾಡು. ಎಣ್ಮೈ=ಅಷ್ಟತನುಧಾರಿ, ಆತ್ಮಪ್ರಜ್ಞೆ ಉಳ್ಳ. ಕೀಲ=ಪರ್ವತ. ನೀರದ=ಮೋಡ. ಮಹಿ=ಭೂಮಿ. ಆಕೂತಿ=ಭಾವನೆ.

೨೪ ಇದು ನಭೋವಾಣಿ

೧

ಓ! ಶ್ರೋತ್ರಿಯನೆ, ಶ್ರೋತಾರಾ, ಕೇಳು
ಇದು ನಭೋವಾಣಿ.
ನಾನು ಬಾಯಿ; ನೀನು ಕಿವಿ
ಬಾನ ಕಡಲಲಿ ತೇಲಿಬಿಟ್ಟ ಈ ನುಡಿ ಡೋಣಿ
ನಿನ್ನ ಹೃದಯದ ಬಂದರವ ಮುಟ್ಟೀತು
ನಿನ್ನ ಬುದ್ಧಿಯ ಮನೆಯ ಕಟ್ಟೀತು
ನೀನೆಲ್ಲೇ ಇರು. ಕೇಳುವ ಸೂತ್ರ ಸರಿ ಇರಲಿ
ಹೃದಯ ತೆರೆದಿರಲಿ.

೨

ಕನ್ನಡದ ಹಾಗೆ ಕೇಳಿಸಬಹುದು ಈ ಮಾತು
ಆದರೂ ಇದು ಮಾನವ್ಯ ಜೀವದಿಂ ಜೀವಕ್ಕೆ
ಕಟ್ಟಿದ ಸೇತು. ಬಾಂಧವ್ಯಜಾತ ಜೀವಾತು.
ದಾಯಾದಿ ಕದನಕೌತೂಹಲದ ವ್ಯಥೆಯ ಕಥೆಯಲ್ಲ
ಹೊನ್ನೆಂಬ, ಹೆಣ್ಣೆಂಬ, ಮಣ್ಣೆಂಬ ಬೆದೆಯ ದಬದಬೆಯಲ್ಲ.
ಭಾವವೇ ಹೂತು, ಭಾವವೇ ನೂತು, ಮಾಲೆಯಾತು
ಬಂದಿಹುದು ತೆಕ್ಕೆಬೀಳಲು ಕೊರಳು ಕೊರಳಿಗೆ ಜೋತು
ಮನಸೋತು. ತೆರೆ ಎದೆಯನೆದೆಗೆ ವಾಸನಾಜಾಲಗಳ
ಮುಸುಕನೋಸರಿಸಿ, ಹಸುಗೂಸು ಹಡೆದ ತೊಡೆಗೆ
ತೋಳಿಗೆ ಬಂದು, ಎದೆಯ ತೊರೆಹರಿಸುವಂತೆ, ತಟ್ಟೀತು
ಓ ಹೃದಯವಂತ, ಓ ಬುದ್ಧಿವಂತ, ಜೀವಂತ!
ಮೂಡಲವ ಪಡುವಲವ ಸುತ್ತುಹಾಕಿ ಬರುತಿದೆ
ನಭೋವಾಣಿ, ಸಾರ್ವಭೌಮ ಮಧುರಾಣಿ, ಜೇನಹುಟ್ಟು
ಕಟ್ಟಲಿಂಬುಗೊಡು ನಿನ್ನ ಹೃದಯದ ಗೂಡು.

೩

ರುಚಿ ನೋಡು-ವೈಷಮ್ಯ ಹರಿಸಿ
ಸಮರಸ ಬೆರಿಸಬಂದೀತು; ಕತ್ತಲೆ ಹರೆದು
ಬೆಳಕು ತೆರೆತೆರೆದು ಬಂದೀತು; ಮೃತ್ಯುವನು ಕತ್ತರಿಸಿ
ಬಾಳಿನಲೆಯಲೆಯಾಗಿ ಅಮೃತ ತಂದೀತು.
ಸವಿದು ನೋಡು ರಸಕೆ ರಸ ಬೆರಿಸಿ ನುರಿಸಿ
ಹರಿಸಿ ನೋಡು, ಹಿಗ್ಗಿ ನೋಡು. ಶಿವಸಂಕಲ್ಪ
ರೂಪಿಸುವ ಶಕ್ತಿವಾಣಿ, ತುಸಲೀ ಗಂಧ
ಪಸರಿಸುವ ಭಕ್ತಿವಾಣಿ, ಯೇಸುವಿನ
ಪರ್ವತವಾಣಿ, ರಸೂಲರ ಗುಹಾವಾಣಿ
ದೇವ ಹೃದಯದ ನಾಡಿ ನಡೆಯಿಸುವ ಚುಕ್ಕಾಣಿ
ನರನಾರಿವೃಂದ ಸಿಂಘನಿ ಮುತ್ತು ಮಣಿ ಜೇನುಹನಿ
ಆನಂದದಾನಿ.

೪

ನವ ಬಂಧದ ಈ ತಂತ್ರಾ
ಈ ವಿದ್ಯುತ್ ಯಂತ್ರಾ
ಬಿತ್ತರಿಸುವದೆತ್ತೆತ್ತೂ
ಮಾನವತೆಯ ಮಂತ್ರಾ.

೫

ದುರ್ವಾಸನೆಗಳ ಹೊಲಿಗೆಯ, ಆ ಭೀತಿಯ ಈ ಭೀತಿಯ
ಭಿತ್ತಿಯ ಚುಚ್ಚಿ ऽऽ
ಗುರು-ಲಗು-ಬಿಗು ಬಿಚ್ಚಿ
ಭೂಮಾತೆಯ ವಾತ್ಸಲ್ಯದ ಹೊಸ ಸೆರಗನು ಹೊಚ್ಚಿ
ಒಂದರ ಮುಂದೊಂದಾಗದೇ, ಚೆಂದಾದೀತೆ ಪಾಡು ?
ಒಂದಾಗಿದೆ ನಾಡು.

೬

ದಶಮಾನದ ಶಕ್ತಿಯಾಗಿ
ಶತಮಾನದ ಹಾಡು
ಸಾವಿರದೀ ಪಾಡು
ಎಲ್ಲರ ಲಕ್ಷ್ಯವ ಸೆಳೆಯುವ ಈ ದೇವಕೋಟಿ
ಅಬ್ಜದ ಮಾನ ದಾಟ
ಬರುತಿದೆ ಹೊಸ ಹಾಡು, ಕೇಳಣ್ಣಾ ಕಿವಿಗೊಟ್ಟು
ಇದು ಅಲ್ಲವೊ ಹಾರಸುದ್ದಿ, ಹೊಂದಿಕೊಂಡು ನೋಡು
ಎಲ್ಲಿದ್ದೀ? ಅಲ್ಲಿಂದಲೆ ಕೇಳು.

---

೪೪ ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು''-ಸಂ:ಡಾ॥ ವಾಮನ ಬೇಂದ್ರೆ

೭
ಇಲ್ಲೇ ಇರು, ಎಲ್ಲೇ ಇರು ಬರುತಿದೆ ಕಿವಿಮುಟ್ಟಾ
ಶ್ರೀಽಽಗುರುದತ್ತನ ಸಂಚಾರಾ, ಸ್ಮೃತಿಗೋಚರಾ
ಸ್ವಯಂಗೋಚರಾ, ಆ ಭೌಮಾ ಸಂವಿತ್ತಿಗೆ
ಹೃದಯ ತೆರೆದಳು ಸರಸ್ವತಿ ಈ ಸತ್ತಿಗೆ.
ಸರ್ವರ ಸುಖದುಃಖಾ ಜೀವನದಾ, ದಿನದಿನದಾ
ಹೊಸ, ಹೊಸ, ಹೊಸ ಲೆಕ್ಕಾ
ಅಕ್ಕಾ, ಕೇಳವ್ವಾ; ಕೇಳೋ ತಮ್ಮಾ
ಬಾನುಲಿ ಸ್ಪಂದಿಸುತಿದೆ ಆಕಾಶವಾಣಿ
ದೈವದ ಚುಕ್ಕಾಣಿ-ಈ ಹಾಡಿನ ಡೋಣಿ.
೮
ಯಾಕೋ ಬಿಗುವಿನ ಮೂರ್ಛೆ?
ಆ ಚರ್ಚೆ, ಈ ಚರ್ಚೆ ಎಲ್ಲಾ ಹೃದಯದ ದೇವನ ಅರ್ಚೆ.
ಬಾಬಾ ಬುಡ್ಡನಗಿರಿ ಮಲೆ ಹತ್ತಿರಕಿರು
ತಿರುಪತಿ ಶ್ರೀಶೈಲದ ಎತ್ತರಕಿರು
ಹಿಮಾಲಯದ ಉತ್ತರಕಿರು
ಗೋಕರ್ಣದ, ಆ ಉಡುಪಿಯ ಪಡುಗಡಲಿನ ಹತ್ತಿರಕಿರು
ನೀನಿರು ಎಲ್ಲೆಲ್ಲೂ; ಏರೀತೀ ಹಾಡು
ಈ ಘಟ್ಟದ ಹಾಡು.
೯
ಎಲ್ಲೇ ಇರು ಅಲ್ಲಲ್ಲೇ ಅಲೆ ಅಲೆಯಾಗಿ
ಸಾರ್ವಭೌಮ: ಮಾನವತೆಯ ನೆಲೆನೆಲೆಯಾಗಿ
ಬರುತಿದೇಽಽ ಬರುತಿದೇಽಽಽ ಎಲ್ಲಿದ್ದೀ?
೧೦
ಕ್ಷಣಕೆ ಭೂಽಪ್ರದಕ್ಷಿಣೆ
ಕ್ಷಣಕ್ಷಣಕೂ ರಕ್ಷಣೆ
ಇಲ್ಲಿಂದಲೆ ನಾ ಹಾಡುವೆ, ಎಲ್ಲಿಂದಲು ಕೇಳು
ನಿದ್ದೆಯ ತೊರೆದೇಳು.
ಘಟ್ಟ ಘಟ್ಟ ಇಳಿದು ಹತ್ತಿ
ಬರಲೇಕೋ ಸುತ್ತಿಸುತ್ತಿ ?
ಹೃದಯದ ಬಯಕೆಯ ಹಿಂಗಿಸಿ,
ಭೂಮಿಯನ್ನು ಈ ಮಾತೇ ಆಲಿಂಗಿಸಿ
ಬರುತಿದೇಽಽ ಬರುತಿದೇಽಽ ಬರುತಲಿದೆ.

೧೧
ಬಗೆ ಹರಿದೂ, ಎದೆ ತೆರೆದೂ,
ಬೇರೆ ಬೇರೆ ಬೇರೆ ಎಂಬ
ಮೇರೆಯ ತೊರೆದೂ, ಬರುತಿದೆ ಈ ಹಾಡು.
ಎರಡಲ್ಲವೊ ನಾ, ನೀನೂ
ಒಂದಾಗಿದೆ ನಾಡು.
೧೨
ಇದೋ ನಾನು, ಅದು ನೀನು
seen ಉ, unseen ಉ
ಇಗೋ ನೀನು, ಅಗೋ ನಾನು
ಯೋಗಧಾರಿ, ಕ್ಷೇಮಕಾರಿ
ಈ ಎರಡೂ ಸೀನು.
ನಾನಾರೋ? ನೀನಾರೋ?
ಎನಬೇಡವೊ ಮೂರ್ತಿ
೧೨
ನಾ ನೀನು; ನೀ ನಾನು
ಇದು ಕನ್ನಡ ಕೀರ್ತಿ
ಇದು ಆಶಾಪೂರ್ತಿ
ಈ ಬಾಯಿಗೆ ಕಿವಿಯಾಗು
ದೈವಕ್ಕೆ ಹವಿಯಾಗು
ಎದೆ ಎದೆಗೂ ಸವಿಯಾಗು.
೧೩
ಆ ಮೀರಾ ಹಾಡಿದಳೋ ?
ಜನಾಬಾಯಿ ತೋಡಿದಳೋ ?
ಮಹಾದೇವಿಯು ಬೇಡಿದಳೋ ?
ನೀಲಾಂಬಿಕೆ ಮಾಡುವಳೋ?
ಗಂಗಾಂಬಿಕೆ ನೀಡುವಳೋ?
ಹೊಸ ಹೊಸ ಹೊಸ ಹಾಡು
ಒಂದಾಗಿದೆ ನಾಡು; ಹೊಂದಿಕೊಂಡು ನೋಡು.

೧೪

ಯಾರೋ ಮಣ, ತೊಲೆ
ಯಾರೋ ಗುಂಜಿ
ಅಂವ ಕುಡಿಯಲಿ ಅಮೃತಾ
ನಾ ಕುಡಿಯುವೆ ಗಂಜಿ
ಅವರವರಿಗೆ ಅವರೂಟಾ
ಹಿಡಿ ಅಮೃತಾ, ಕುಡಿ ಗಂಜಿ.
ವೃಂದಾವನ ಕಾರಂಜಿ
ನೋಡುವದೇತಕೆ ಅಂಜಿ ?
ಕೇಳಿಸದೇ ಕೃಷ್ಣನ ಕೊಳಲೂ ಗೆಜ್ಜ ?
ಎಂದಿನ ಆಶೆಗೆ ಬಂದಿದೆ ಇಂದಿನ ಈ ಹೆಜ್ಜೆ.

- ಇದು ನಭೋವಾಣಿ : ೨/ಪ್ರ : ೧೯೭೦

ಭಾವ : ಧಾರವಾಡ ಆಕಾಶವಾಣಿಯ ಪ್ರಸಾರಶಕ್ತಿ ಬೆಳವಣಿಗೆಯಾದ ನಿಮಿತ್ತದಿಂದ ಬರೆದ ಕವನ.

ಶಬ್ದಾರ್ಥ : ಜೀವಾತು=ಪ್ರಾಣವನ್ನು ಉಳಿಸುವ ಔಷಧ, ಸಂಜೀವನ ಜೀವ ಸತ್ತ್ವ, ಸಿಂಫನಿ=ಸ್ವರಮೇಳ ಸಾಮರಸ್ಯ. ಹವಿ=ಹೋಮಕ್ಕೆ ಹಾಕುವ ವಸ್ತು.

ವಿಶೇಷ : ಈ ಕವನವು ವರಕವಿ ಬೇಂದ್ರೆಯವರ ಹೊಸ ಸಂದೇಶವನ್ನು ಹೊತ್ತು ತಂದಿದೆ. 'ಕನ್ನಡದ ಹಾಗೆ ಕೇಳಿಸಬಹುದು ಈ ಮಾತು, ಆದರೂ ಇದು ಮಾನವ್ಯ ಜೀವದಿಂದ ಜೀವಕ್ಕೆ ಕಟ್ಟಿದ ಸೇತು. ಬಾಂಧವ್ಯ ಜೀವಾತು'-ಇದು ಸಂದೇಶ. ಭಾಷೆಗಿಂತಲೂ ಭಾವ ಮುಖ್ಯ, ಜೀವದಿಂ ಜೀವಕ್ಕೆ ಕಟ್ಟಿದ ಭಾವ ಸೇತುವೆಯು ಬಾಂಧವ್ಯದಲ್ಲಿ ಪರ್ಯವಸಾನಗೊಂಡಾಗ ಅದು ಸಂಜೀವಿನಿಯಾಗುತ್ತದೆ ಎಂಬುದು ಈ ಕವನದ ಹೃದಯ. ಇದು ವೈಶ್ವಿಕ ಪ್ರಜ್ಞೆಯಾಗಬೇಕು ಎಂಬುದು ಕವಿಯ ಪ್ರಮುಖ ಆಶಯ.

೨೫ ಯಾವುದು ಸೀಮಾವಾದ

೧

ಹೆಜ್ಜೆ ಹೆಜ್ಜೆಗೆ ಸೀಮೆ !

೨

ಒಪ್ಪಬೇಕು ;
ಇಲ್ಲಾ-ತಪ್ಪಬೇಕು

೩

ಆಕ್ರಮಣಕೆ ಇಲ್ಲಾ ಅಂತ
ಒಬ್ಬ ಒತ್ತಪ್ಪ, ಇನ್ನೊಬ್ಬ ಮೆತ್ತಪ್ಪ,
ಆಟ ನೋಡುವರೆ ಸುತ್ತಪ್ಪ

೪


ಸೀಮೆ-ನಾಗನ ತಳಕು,
ಅಲ್ಲಿಪ್ಪ ಹುತ್ತಪ್ಪ
ಕುರುಡು-ಕತ್ತಲರಾತ್ರಿ
ದೇವರಿಗೆ ಪರಲೋಕಯಾತ್ರಿ

– ಚತುರೋಕ್ತಿ ಮತ್ತು ಇತರ ಕವನಗಳು : ೨೫/ಪ್ರ : ೧೯೭೮

ಭಾವ : ಸೀಮಾವಾದ ಬಗೆಹರಿಯದ ಭಯದ ಪ್ರಶ್ನೆ. ಆಕ್ರಮಣ ಮನೋಭಾವ ಇರುವವರೆಗೆ ಸೀಮಾವಾದ ತಪ್ಪಿದ್ದಲ್ಲ.

ಭಾಗ -೨

ಸ್ವರ ಸಂಯೋಜನೆ
ಹಿಂದೂಸ್ತಾನೀ ಸಂಗೀತ ಪದ್ಧತಿಯಂತೆ



ಅಂಬಿಕಾತನಯದತ್ತರ "ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು" ಎಂಬ ಈ ಕೃತಿಯಲ್ಲಿಯ ಗೀತಗಳಿಗೆ ಹಿಂದೂಸ್ತಾನೀ ಸಂಗೀತ ಪದ್ಧತಿಗೆ ಅನುಸರಿಸಿ ಸ್ವರ ಸಂಯೋಜನೆ ಮಾಡಲಾಗಿದೆ. ಇಲ್ಲಿಯ ಎಲ್ಲ ಸೂಚನೆಗಳನ್ನು ಗ್ರಹಿಸಿ ಹಾಡುಗಾರರು ತಮ್ಮ ಗಾನ ಕೌಶಲ್ಯವನ್ನು ಅಭಿವ್ಯಕ್ತಪಡಿಸಬೇಕಾಗಿ ಬಿನ್ನಹ

- ಸಂ.

ಸ್ವರ ಸಂಯೋಜನೆ : ಅನುಕ್ರಮಣಿಕೆ

ಅ.ನಂ.	ಹಾಡಿನ ಹೆಸರು	ರಾಗ	ತಾಳ
೧.	'ಕರ್ನಾಟಕ ಗತವೈಭವ'ವು ಪ್ರಸಿದ್ಧವಾದದ್ದನ್ನು ಕೇಳಿ	ಜನಸಮ್ಮೋಹಿನಿ	ದ್ರುತ್ ಏಕತಾಲ್
೨.	ತುತೂರಿ - ಎಚ್ಚರ	ಶಂಕರಾ	ತ್ರಿತಾಲ್
೩.	ಕನ್ನಡದ ಕಂದವ್ವನ ಲಾಲಿ	ದೇಸ್	ಝಪ್‌ತಾಲ್
೪.	ಭುವನೇಶ್ವರಿ	ಹಮೀರ್	ತ್ರಿತಾಲ್
೫.	ಹಂಪೀ-ವಿಜಯನಗರ ದರ್ಶನ	ಗುರ್ಜರಿ ತೋಡಿ	ತ್ರಿತಾಲ್

೬.	ಏಳು ಶೂರರ ರಾಣಿ	ಹಂಸಧ್ವನಿ	ಝಪ್‌ತಾಲ್
೭.	ಕನಸಿನೊಳಗೊಂದು ಕಣಸು	ನಟ ಭೈರವ್	ತ್ರಿತಾಲ್
೮.	ಸೀಮೋಲ್ಲಂಘನ	ಅಡಾಣಾ	ತ್ರಿತಾಲ್
೯.	ಮೈಸೂರು	ನಟ ಭೈರವ್	ಝಪ್‌ತಾಲ್
೧೦.	ಒಡನುಡಿ	ಭೂಪಾಲಿ	ತ್ರಿತಾಲ್
೧೧.	ಒಂದೇ ಕರ್ನಾಟಕ	ದುರ್ಗಾ	ತ್ರಿತಾಲ್
೧೨.	ಕನ್ನಡದಪ್ಪನ ಕೋಲು	ಆರಭೀ	ತ್ರಿತಾಲ್
೧೩.	ಕನ್ನಡದ ಕಮಳ	ಕಾಫಿ	ಝಪ್‌ತಾಲ್

ಸ್ವರ ಸಂಯೋಜನೆ : ಅನುಕ್ರಮಣಿಕೆ........ಮುಂದುವರಿದಿದೆ

ಅ.ನಂ.	ಹಾಡಿನ ಹೆಸರು	ರಾಗ	ತಾಳ
೧೪.	ಪಾರ್ವತಿ ನೀನೇ ಸಲಹು	ದುರ್ಗಾ	ತ್ರಿತಾಲ್
೧೫.	ಕನ್ನಡದ ಪಾವನಪರಂಪರೆ	ಯಮನ್	ತ್ರಿತಾಲ್
೧೬.	ಕನ್ನಡ ಜೀವನಲಹರಿ	ಹಂಸಧ್ವನಿ	ದ್ರುತ್ ಏಕತಾಲ್
೧೭.	ದಿವ್ಯ ಧ್ವನಿ	ದೇಸಕಾರ್	ತ್ರಿತಾಲ್
೧೮.	ಇದೆ-ಇದೆ	ಅಲೈಯಾ ಬಿಲಾವಲ್	ತ್ರಿತಾಲ್
೧೯.	ಎಲ್ಲೆ ಎಲ್ಲ ಆದಾತನಿಗೆ	ಅಲೈಯಾ ಬಿಲಾವಲ್	ತ್ರಿತಾಲ್

೨೦.	ಹೊಸ ಹಾರೈಕೆ	ಜೌನಪುರಿ	ತ್ರಿತಾಲ್
೨೧.	ನನ್ನದು ಈ ಕನ್ನಡ ನಾಡು	ಹಮೀರ್	ತ್ರಿತಾಲ್
೨೨.	ಕನ್ನಡ ಕವನ	ಬೃಂದಾವನಿ ಸಾರಂಗ	ತ್ರಿತಾಲ್
೨೩.	ಕೇಳಿ ನುಡಿಯುವದುಂಟು	ಬಿಭಾಸ್	ತ್ರಿತಾಲ್
೨೪.	ಇದು ನಭೋವಾಣಿ	ಶಂಕರಾಭರಣ	ಕೇರವಾ
೨೫.	ಯಾವುದು ಸೀಮಾವಾದ	ಮಾಲಕೌಂಸ	ತ್ರಿತಾಲ್

ಈ ಪುಸ್ತಕದಲ್ಲಿ ಬಂದಿರುವ ರಾಗಗಳ ಶಾಸ್ತ್ರೀಯ ವಿವರಣೆಯ ಕೋಷ್ಟಕ

ಅ. ನಂ.	ರಾಗದ ಹೆಸರು	ಥಾಟ	ಜಾತಿ	ವಾದಿ ಸಂವಾದಿ	ಆರೋಹ - ಅವರೋಹ	ಗಾಯನ ಸಮಯ
೧.	ಅಡಾಣಾ	ಆಸಾವರೀ	ಷಾಡವ-ಸಂಪೂರ್ಣ	ಸಾ - ಪ	ಸಾರಿಮಪಧನಿಸಾ - ಸಾಧನಿಪಮಪಗಮರಿಸಾ	ರಾತ್ರಿ ೩ನೇ ಪ್ರಹರ
೨.	ದುರ್ಗಾ	ಬಿಲಾವಲ್	ಔಡವ	ಮ - ಸಾ	ಸಾರಿಮಪಧಸಾ - ಸಾಧಪಮರಿಧಸಾ	ರಾತ್ರಿ ೨ನೇ ಪ್ರಹರ
೩.	ಜನಸಮ್ಮೋಹಿನಿ	ಖಮಾಜ್	ಷಾಡವ	ಪ - ಸಾ	ಸಾರಿಗಪಧನಿಸಾ - ಸಾನಿಧಪಗರಿಸಾ	ರಾತ್ರಿ ೨ನೇ ಪ್ರಹರ
೪.	ಹಂಸಧ್ವನಿ	ಬಿಲಾವಲ್	ಔಡವ	ಸಾ - ಪ	ಸಾರಿಗಪನಿಸಾ - ಸಾನಿಪಗರಿಸಾ	ರಾತ್ರಿ ೧ನೇ ಪ್ರಹರ
೫.	ಶಂಕರಾ	ಬಾಲಾವಲ್	ಔಡವ-ಷಾಡವ	ಗ - ನಿ	ಸಾಗಪನಿಧಸಾ - ಸಾನಿಪನಿಧಗಪಗರಿಸಾ	ರಾತ್ರಿ ೨ನೇ ಪ್ರಹರ
೬.	ಬೃಂದಾವನೀ ಸಾರಂಗ್	ಕಾಫ಼ಿ	ಔಡವ	ರಿ - ಪ	ನಿಸಾರಿಮಪನಿಸಾ - ಸಾನಿಪಮರಿನಿಸಾ	ದಿನದ ೨ನೇ ಪ್ರಹರ
೭.	ಅಲ್ಹೈಯಾ ಬಿಲಾವಲ್	ಬಿಲಾವಲ್	ಸಂಪೂರ್ಣ	ಧ - ಗ	ಸಗರಿಗಪನಿಧನಿಸಾ - ಸಾನಿಧಪಧನಿಧಪಮಗಮರಿಸಾ	ದಿನದ ೧ನೇ ಪ್ರಹರ
೮.	ದೇಸ್	ಖಮಾಜ್	ಔಡವ-ಸಂಪೂರ್ಣ	ರಿ - ಪ	ಸರಿಮಪನಿಸಾ - ಸಾನಿಧಪಮಗರಿಗಸಾ	ರಾತ್ರಿ ೨ನೇ ಪ್ರಹರ


೯.	ಹಮೀರ್	ಕಲ್ಯಾಣ್	ಷಾಡವ-ಸಂಪೂರ್ಣ	ಧ - ಗ	ಸಾರಿಸಾಗಮಧನಿಧಸಾ - ಸಾನಿಧಪಮಪಧಪಗಮರಿಸಾ	ರಾತ್ರಿ ೧ನೇ ಪ್ರಹರ
೧೦.	ಗುರ್ಜರಿ ತೋಡಿ	ತೋಡೀ	ಷಾಡವ	ಧ - ರಿ	ಸಾರಿಗಮಧನಿಸಾ - ಸಾನಿಧಮಗರಿಸಾ	ದಿನದ ೨ನೇ ಪ್ರಹರ
೧೧.	ನಟ ಭೈರವ್	ಭೈರವ್	ಸಂಪೂರ್ಣ-ಸಂಪೂರ್ಣ	ಮ - ಸಾ	ಸಾರಿಗಮಪಧನಿಸಾ - ಸಾನಿಧಪಮಗರಿಸಾ	ದಿನದ ೧ನೇ ಪ್ರಹರ
೧೨.	ಭೂಪಾಲಿ	ಕಲ್ಯಾಣ್	ಔಡವ	ಗ - ಧ	ಸಾರಿಗಪಧಸಾ - ಸಾಧಪಗರಿಸಾ	ರಾತ್ರಿ ೧ನೇ ಪ್ರಹರ
೧೩.	ಆರಭೀ	ಬಿಲಾವಲ್	ಔಡವ-ಸಂಪೂರ್ಣ	ರಿ - ಧ	ಸಾರಿಮಪಧಸಾ - ಸಾನಿಧಪಮಗರಿಸಾ	ರಾತ್ರಿ ೨ನೇ ಪ್ರಹರ
೧೪.	ಕಾಫ಼ಿ	ಕಾಫ಼ಿ	ಸಂಪೂರ್ಣ	ಪ - ಸಾ	ಸಾರಿಗಮಪಧನಿಸಾ - ಸಾನಿಧಪಮಗರಿಸಾ	ಮಧ್ಯರಾತ್ರಿ
೧೫.	ಯಮನ್	ಕಲ್ಯಾಣ್	ಸಂಪೂರ್ಣ	ಗ - ನಿ	ನಿರಿಗಮಪಧನಿಸಾ - ಸಾನಿಧಪಮಗರಿಸಾ	ರಾತ್ರಿ ೧ನೇ ಪ್ರಹರ
೧೬.	ದೇಸಕಾರ್	ಕಲ್ಯಾಣ್	ಔಡವ	ಧ - ಗ	ಸರಿಗಪಧಸಾ - ಸಾಧಪಗರಿಸಾ	ಪ್ರಾತಃಕಾಲ ೧ನೇ ಪ್ರಹರ
೧೭.	ಜೌನಪುರಿ	ಆಸಾವರೀ	ಷಾಡವ-ಸಂಪೂರ್ಣ	ಧ - ಗ	ಸಾರಿಮಪಧನಿಸಾ - ಸಾನಿಧಪಮಗರಿಸಾ	ಹಗಲು ೨ನೇ ಪ್ರಹರ
೧೮.	ಬಿಭಾಸ್	ಭೈರವ್	ಔಡವ	ರಿ - ಧ	ಸಾರಿಗಪಧಸಾ - ಸಾಧಪಗರಿಸಾ	ಪ್ರಾತಃಕಾಲ ೧ನೇ ಪ್ರಹರ
೧೯.	ಶಂಕರಾಭರಣ	ಬಿಲಾವಲ್	ಸಂಪೂರ್ಣ-ಸಂಪೂರ್ಣ	ಸಾ - ಪ	ಸಾರಿಗಮಪಧನಿಸಾ - ಸಾನಿಧಪಮಗರಿಸಾ	ಪ್ರಾತಃಕಾಲ
೨೦.	ಮಾಲಕೌಂಸ	ಭೈರವೀ	ಔಡವ	ಮ - ಸಾ	ಸಾಗಮಧನಿಸಾ - ಸಾನಿಧಮಗಸಾ	ರಾತ್ರಿ ೩ನೇ ಪ್ರಹರ

೧ 'ಕರ್ನಾಟಕ ಗತವೈಭವ'ವು ಪ್ರಸಿದ್ಧವಾದದ್ದನ್ನು ಕೇಳಿ



ರಾಗ : ಜನ ಸಮ್ಮೋಹಿನೀ

ತಾಳ : ದ್ರುತ್ ಏಕತಾಲ್



೧ X	೨ O	೩ -	೪ O	೫ -	೬ -	೧ X	೨ O	೩ -	೪ O	೫ -	೬ -	೧ X	೨ O	೩ -	೪ O	೫ -	೬ -
								ಸ್ಥಾಯಿ									
ಗಸ ಇತಿ	ಧನಿಸಾ- ಹಾಽಽಽಽ	ನಿಧಽಪ ಸವೇಽ	ಗಪ ನಮ್ಮ	ನಿಧ ಅತಿ	ಪಗ ಗೂಢ	ಪ- ತಽ	ಪಧ ತ್ವಗ	ಪ- ಳಽ	ಗಗ ಽಽ	ಪ- ಽಽ	-- ಽಽ	ಧಪ ಕತೆ	ಗಗ ಯನ್ನು	ಪಗ ಹೇಽ	ರಿಸಾ ಳುತ್ತ	ನಿನಿ ಮತಿ	ಧಧ ಯನ್ನು
ಸಾಸಾ ತಿಳಿ	ಸಾಸಾ ಮಾಡಿ	ಸಾಸಾ ಹತ	ಪಪ ರಾದ	ಪಪ ಜನ	ಪಪ ರೊಳು	ಸಾ- ಉಽ	ಗಂ- ತ್ಸಾ	ರಿಂ- ಹಽ	ಸಾ- ವಽ	ಸಾನಿ ನ್ನೇರಿ	ಧಪ ಸುತ	ಗಪ ಮಾಽ	-ನಿ ಽಡಿ	ಧ- ದೈಽ	ಸಾನಿ ಪುರು	ಧನಿ ಷರ	ಸಾ- ನುಽ

								ಅಂತರಾ									
ಗಪ	ಧನಿ	ಸಾಸಾ	ಸಾಸಾ	ಗಗೆ	ಸಾಸಾ	ಧನಿ	ಸಾಸಾ	ಗಪ	ಧನಿ	ಸಾ-	--	ಸಾನಿ	ಧಪ	ನಿಧ	ಪಗ	ಧಪ	ಗರಿ
ಮೃತ	ರಿಗೆ	ಅಮ್ಮ	ತವೆ	ಏಽ	ಶ್ವರೂ	ಽಪ	ವೇಽ	ಪೊಡ	ಏಯೊ	ಳೂಽ	ಽಽ	ಪತಿ	ತರಿ	ಗೇಽ	ನಿನ್ನಿಂ	ಽದಾ	ಽಽ
ಗ-	ರಿಸಾ	-ನಿ	ರಿರಿ	ಸಾ-	--	ಗಗ	ಪಧ	ನಿಸಾ	ನಿಸಾ	ನಿ-	ನಿಸಾ	ಸಾಗ	ರಿರಿ	ನಿರಿ	ಸಾಽ	ಸಾನಿ	ಧಪ
ಕಾಽ	ಣಲಾ	ಽರ	ದದೇ	ಽಽ	ನೂಽ	ಗತ	ಕಾಽ	ಲವೆ	ನೀನು	ನಽ	ನಮ್ಮ	ಇದಿ	ರಿನೊ	ಳಿಂಽ	ತೂಽ	ಬಾಽ	ಽಽ
ಗಪ	ಧಪ	ಗಗ	ರಿಸಾ	ನಿರಿ	ಸಾ-	॥											
ನಿಂಽ	ಽತ	ಮೇಽ	ಽಽ	ಽಽ	ಲೆಽ	॥											

ಸೂಚನೆ : ಗಾಯಕರು ಈ ಹಾಡಿನ ಮುಂದಿನ ನುಡಿಗಳ ಸ್ವರಗಳನ್ನು ಮೇಲಿನ ನುಡಿಯಂತೆ ಹೊಂದಿಸಿಕೊಂಡು ಹಾಡಬೇಕು.

೨ ತುತೂರಿ - ಎಚ್ಚರ

ರಾಗ : ಶಂಕರಾ

ತಾಳ : ತ್ರಿತಾಲ್

೫ O	೬	೭ -	೮	೧ X	೨	೩ -	೪	೫ O	೬	೭ -	೮	೧ X	೨	೩ O	೪
							ಸ್ಥಾಯಿ								
ಸಾಸಾ ತುತೂ	ಗಗ ತುತು	ಪಪ ತೂತು	ನಿನಿ ತುತು	ಸಾ̇ಸಾ̇ ತುತು	ಗ̇ರಿ̇ ತುತು	ಸಾ̇ನಿ ತುತು	ಧಪ ತುತು	ಸಾ̇ ಕಾಽ	ನಿಪ ಳಿಕೊಂ	-ಪ ಽಬು	ಗಗ ಗಳ	ಪಧ ದಿವ	ಪಪ ಸಗ	ಗಗ ಳಾಽ	ರಿಸಾ ದವು
ಸಾಸಾ ಕೊಳ	ಸಾಗ ಲುಶಂ	-ಗ ಽಖ	ಪಪ ರಣ	ಪಧ ಭೇಽ	ಗಗ ರಿಗ	ಪ- ಳಿಳಿ	ಪಪ ದವು	ಗಪ ಕಾಽ	ನಿನಿ ಲವು	ಸಾ̇ನಿ ಹೊಸ	ಸಾ̇- ದೇಽ	ಸಾ̇ಗ̇ ಹೊಸ	ರಿ̇ಸಾ̇ ದೇಽ	ನಿಧ ವಾಽ	ಪಪ ದ್ಯವು
ಸಾ̇- ಏಽ	ನಿಪ ಳಿಕೇ	-ಗ ಽಳಿ	ಪ- ರೈಽ	ನಿಧ ಕೂಽ	ಪಪ ಗುಕೇ	ಗರಿ ಽಳಿ	ಸಾ- ರೈಽ	ಸಾ ತೂಽ	ಗ- ತೂಽ	ಪ- ತೂಽ	ನಿ- ತೂಽ	ಸಾ̇- ತೂಽ	ಗ̇- ತೂಽ	ರಿ̇- ತೂಽ	ಸಾ̇- ತೂಽ

ಗ- ಮೋಽ	ಪಪ ಡದಿ	ನಿನಿ ಮುಸು	ಸಾಂನಿ ಕಿದ	ಸಾಂಸಾಂ ರಾಽ	ನಿಪ ಽತ್ರಿ	ನಿರಿಂ ತೀಽ	ಸಾಂಸಾಂ ರಿತು	ನಿನಿ ನೋಽ	ಧಸಾಂ ಡಿರಿ	ನಿಧ ಮುಗಿ	ಪಗ ಲಿನ	ಪನಿ ಕೆಂಽ	ಧಸಾಂ ಪುವಿ	ನಿರಿಂ ಽರಿ	ಸಾಂ- ತುಽ
ಗಂ- ದೂಽ	ಗಂಪಂ ಡಿರಿ	ರಿಂಗಂ ಹಡ	ರಿಂಸಾಂ ಗವ	ನಿಸಾಂ ಕಡ	ನಿಪ ಲಽ	ನಿರಿಂ ಕ್ಕೇಽ	ಸಾಂಸಾಂ ರಿತು	ಸಾಂನಿ ನೋಽ	ಧಪ ಡಿಕ	ಗಗ ಡಿಯಿ	ಪ- ರೈಽ	ಪಧ ಮೇಽ	ಗಪ ಲೆನ	ರಿಗ ಡೆಯಿ	ಸಾ- ರೈಽ

ಸೂಚನೆ : ಗಾಯಕರು ಈ ಹಾಡಿನ ಮುಂದಿನ ನುಡಿಗಳ ಸ್ವರಗಳನ್ನು ಮೇಲಿನ ನುಡಿಯಂತೆ ಹೊಂದಿಸಿಕೊಂಡು ಹಾಡಬೇಕು.

೩ ಕನ್ನಡದ ಕಂದವ್ವನ ಲಾಲಿ

ರಾಗ : ದೇಸ್

ತಾಳ : ಝಪ್‌ತಾಲ್

೧ X	೨	೩	೪	೫	೬ O	೭	೮	೯	೧೦	೧ X	೨	೩	೪	೫	೬ O	೭	೮	೯	೧೦
									ಸ್ಥಾಯಿ										
ನಿ	ಸಾ̇	ನಿ̱	ಧ	ಪ	ಮ	ಪ	ಮ	ಮ	ರಿ	ರಿ	ಮ	ಪ	ನಿ̱	ಧ	ಮ	ಪ	ಮ	ರಿ	ಸಾ
ಓ	ಽ	ರ್ವ	ತಾ	ಽ	ಯಿ	ಯು	ತ	ಽ	ನ್ನ	ಕೂ	ಽ	ಸಿ	ರು	ವ	ತೊ	ಽ	ಟ್ಟಿ	ಲ	ವ
ರಿ	ಮ	ರಿ	ಮ	ಪ	ಪ	ನಿ	ಧ	ಪ	-	ರಿ	ಮ	ಪ	ನಿ̣	ನಿ	ಸಾ̇	ನಿ	ಸಾ̇	ಸಾ̇	ಸಾ̇
ಕೈ	ಯಿಂ	ದ	ತೂ	ಽ	ಗು	ತಿ	ಹ	ಳೋ	ಽ	ಪೂ	ರ್ವ	ಪ	ಶ್ಚಿ	ಮ	ಘ	ಟ್ಟ	ದ	ಽ	ಲ್ಲಿ
ನಿ	ನಿ	ಸಾ̇	ಸಾ̇	ರಿ̇	ನಿ̱	ಧ	ಪ	ನಿ̱	ಧ	ಮ	ರಿ	ಮ	ಮ	ಪ	ನಿ	ನಿ	ಸಾ̇	ಸಾ̇	ಸಾ̇
ಪ	ಽ	ಟ್ಟಿ	ರು	ವ	ನಾ	ಽ	ಡ	ಽ	ನ್ನೆ	ನ್ನೂ	ಽ	ಽ	ಽ	ಗು	ತಿ	ಹ	ಳೋ	ಽ	ಽ

									ಅಂತರಾ										
ಮ	ರಿ	ಮ	ಮ	ಪ	ಮ	ಪ	ನಿ	ನಿ	ಸಾ̇	ನಿ	ನಿ	ಸಾ̇	ಸಾ̇	ರಿ̇	ಮ	ಪ	ನಿ̱	ಧ	ಪ
ನಾ	ಽ	ಳೆ	ಬೆ	ಳ	ಗಿ	ನ	ವ	ರೆ	ಗೆ	ಮ	ಲ	ಗು	ಸಂ	ಽ	ಪಿಂ	ಽ	ಪಾ	ಽ	ಗಿ
ರಿ̇	ಸಾ̇	ರಿ̇	ರಿ̇	ಸಾ̇	ರಿ̇	ಮ̇	ಗ̇	ನಿ	ಸಾ̇	ಸಾ̇	ರಿ̇	ನಿ̱	ಧ	ಪ	ಸಾ̇	-	ನಿ̱	ಧ	ಪ
ಆ	ಽ	ಽ	ಽ	ತ್ಮ	ತ	ನು	ಜಾ	ಽ	ತೆ	ಜೋ	ಽ	ಽ	ಽ	ಽ	ಜೋ	ಽ	ಽ	ಽ	ಽ
ಮ	ರಿ	ಮ	ಮ	ಪ	ಮ	ಪ	ನಿ	ನಿ	ಸಾ̇	ನಿ	ಸಾ̇	ರಿ̇	ನಿ̱	ಧ	ಮ	ಪ	ನಿ̱	ಧ	ಪ
ನಾ	ಽ	ಳೆ	ಬೆ	ಳ	ಗಿ	ನ	ವ	ರೆ	ಗೆ	ಅಂ	ಽ	ಬಿ	ಕಾ	ಽ	ತ	ಽ	ನ	ಽ	ಯ
ನಿ	ಸಾ̇	ರಿ̇	ಮ̇	ಗ̇	ರಿ̇	ಗ̇	ನಿ	ನಿ	ಸಾ̇	ಸಾ̇	ರಿ̇	ನಿ̱	ಧ	ಪ	ಸಾ̇	-	ನಿ̱	ಧ	ಪ
ದ	ಽ	ತ್ತ	ಽ	ನ	ತೊ	ದ	ಲು	ನು	ಡಿ	ಜೋ	ಽ	ಽ	ಽ	ಽ	ಜೋ	ಽ	ಽ	ಽ	ಽ

ಸೂಚನೆ : ಗಾಯಕರು ಈ ಹಾಡಿನ ಮುಂದಿನ ನುಡಿಗಳ ಸ್ವರಗಳನ್ನು ಮೇಲಿನ ನುಡಿಯಂತೆ ಹೊಂದಿಸಿಕೊಂಡು ಹಾಡಬೇಕು.


ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು'' - ಸಂ : ವಾಮನ ಬೇಂದ್ರೆ/೬೧

೪ ಭುವನೇಶ್ವರಿ



ರಾಗ : ಹಮೀರ್

ತಾಳ : ತ್ರಿತಾಲ್



೫ ೦	೬	೭ –	೮	೧ X	೨	೩ –	೪	೫ ೦	೬	೭ –	೮	೧ X	೨	೩ ೦	೪
							ಸ್ಥಾಯಿ								
ನಿಧ ಸೇಽ	ನಿಸಾ ವಕ	ನಿಧ ರಿಽ	ಪಪ ಷ್ಟವ	ಮ̍ಪ ನೀಽ	ಗಮ ವಾಽ	ಧ- ಶಽ	ಧ- ಕ್ತಿ	ಗಗ ಭಾಽ	ಮರಿ ವಿಶೆ	ಗಮ ತಽ	ಧಪ ನ್ನೊಳು	ಮಗ ಸಂಽ	ಮರಿ ವಿತ್	ಸಾರಿ ಶಽ	ಸಾಸಾ ಕ್ತಿ
ಸಾಸಾ ವಾಽ	ಮಗ ಣೆಯೆ	ಪಮ̍ ನಿಸಿ	ಧಪ ವಾಽ	ನಿಧ ಕ್'ಸಿ	ಸ̇ಾರ̇ಿ ಽದ್ಧಿ	ಸ̇ಾನಿ ಯನಿ	ಧಪ ಽತ್ತು	ಗ̇ಗ ಮಾಽ	ಮ̇ರಿ ಣದೆ	ಸ̇ಾರಿ ಲಽ	ಸ̇ಾಸ̇ಾ ಕ್ಷಿಯೆ	ಧನಿ ನಿಸಿ	ಸ̇ಾರ̇ಿ ಶುಭ	ಸ̇ಾನಿ ವಿಽ	ಧಪ ತ್ತುಽ

							ಅಂತರಾ								
ಪಧ ಗಿರಿ	ಪಸಾ ಜೆಯೆ	ಸಾಸಾ ನಿಸಿ	ನಿಧ ಸೌಽ	ಸಾಸಾ ಭಾಽ	ನಿಧ ಗೃವ	ಸಾರಿ ನಿಽ	ಸಾ- ತ್ತುಽ	ಗಗ ವರ	ಮರಿ ವಂಽ	ಸಾರಿ ಬಿಕೆ	ಸಾಸಾ ಯೆನಿ	ಸಾರಿ ಸುಽ	ಸಾನಿ ತ್ತೊಲಿ	ಧಧ ದಿಽ	ಪಪ ತ್ತುಽ
ಮಮ ಯೋಽ	ಮಗ ಗವ	ಪಪ ನಿಽ	ಪಮ ತ್ತುಮ	ಧನಿ ನೋಽ	ಧಪ ನ್ಮನಿ	ಮಧ ಯೆನಿ	ಪಪ ಸಿಽ	ಸಾರಿ ಭೋಽ	ಸಾಸಾ ಗವ	ಪಧ ನಿಽ	ಪಪ ತ್ತಽ	ಗಗ ಕುಂಽ	ಮಪ ಡಲಿ	ಗಮ ಎನಿ	ರಿಸಾ ಸಿಽ

ಸೂಚನೆ : ಗಾಯಕರು ಈ ಹಾಡಿನ ಮುಂದಿನ ನುಡಿಗಳನ್ನು ಅಂತರಾ ಧಾಟಿಯಲ್ಲಿ ಹಾಡಬೇಕು

ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು'' - ಸಂ : ವಾಮನ ಬೇಂದ್ರೆ/ ೬೩

೫ ಹಂಪೀ ವಿಜಯನಗರ ದರ್ಶನ



ರಾಗ : ಗುರ್ಜರಿ ತೋಡಿ

ತಾಳ : ತ್ರಿತಾಲ್



೫ 0	೬	೭	೮	೧ X	೨	೩	೪	೫ 0	೬	೭	೮	೧ X	೨	೩	೪
							ಸ್ಥಾಯಿ								
ಸರಿ	ಗಮ	ಧಽ	ಧಮ	ಧಮ	ಧಮ	ಧಽ	ಧಸಾ	ಸಾರಿ	ಸಾ-	ನಿಧ	ಮಧ	ರಿಗ	ರಿಗ	ರಿರಿ	ಸಾಸಾ
ತಾನ	ಳವಿ	ಽಲ್ಲ	ದಲೆ	ಬೇಽ	ತಾಳ	ನಂಽ	ದದಿ	ಕುಣಿ	ವಾಽ	ಽಽ	ಽಽ	ಕಾಽ	ಳನ	ಽರ್ತ	ಕನ
ಸಾಸಾ	ರಿಗ	ರಿಗ	ರಿಸಾ	ಧಮ	ಗಮ	ಧಮ	ಧ-	ಧಗ	ರಿಸಾ	ನಿಸಾ	ನಿಧ	ಮಧ	ನಿಧ	ಗಮ	ಧಧ
ಕಾಽ	ಲ್ಕೆಳ	ಗೆಽ	ಽಽ	ತೊಽ	ತುಳಿ	ಗೊಂಽ	ಡುಽ	ಹಾಽ	ಳಾಗಿ	ಹುಡಿ	ಗೂಡಿ	ಕಽ	ನ್ನಡ	ನಾಽ	ಡಿಗೆ
ಗಧ	ಮಗ	ರಿಮ	ಗರಿ	ಸಾಗ	ರಿಸಾ	ನಿರಿ	ಸಾ-								
ಇದಿ	ರಾಗಿ	ಬಂಽ	ದೂಽ	ನಿಂಽ	ದೂಽ	ನಿಂಽ	ದೂಽ								

							ಅಂತರಾ - ೨								
ಸಾರಿ	ಗಮ	ಧಧ	ಮಗ	ಮಧ	ನಿಸಾ	ಧರಿ	ಸಾಸಾ	ರಿಗ	ರಿಸಾ	ನಿಸಾ	ನಿಧ	ಮಧ	ಮಗ	ಮಧ	ನಿಸಾ
ಹಾಳು	ಗಳ	ಹೊರ	ಒಳ್ಗಿ	ಹಾಳು	ಗಳ	ಸಾಲು	ಗಳು	ಬೀS	ಳ್ಗಬ	ದಿಬ	ದಿಗೆ	ಬೀಳು	ಗಳ	ಬಾಳು	ಗಳು
ಗರಿ	ಸಾನಿ	ರಿಸಾ	ನಿಧ	ಸರಿ	ಗಮ	ಧ-	--	ಸಾರಿ	ಗಮ	ಧಧ	ಮಗ	ರಿಗ	ಮಗ	ರಿಗ	ರಿಸಾ
ಕಾS	ಳರ	Sಕ್ಕ	ಸನ	ಕಡೆ	ಕೂS	ಳೂ	SS	ಬಾS	ಳಕ	ವಾS	ದS	ನಾS	ಡS	ನಡು	ಮನೆ
ಸರಿ	ಗಮ	ಧಮ	ಗಮ	ಸಾರಿ	ಗಮ	ರಿಗ	ರಿಸಾ								
ಯಾS	SS	SS	SS	ಕಂS	SS	ಡೆS	SS								

ಸೂಚನೆ : ಗಾಯಕರು ಈ ಹಾಡಿನ ಮುಂದಿನ ನುಡಿಗಳನ್ನು ಮೇಲೆ ಕಾಣಿಸಿದ ಸ್ವರಗಳ ಧಾಟಿಯಲ್ಲಿ ಹಾಡಬೇಕು

ಅಂಬಿಕಾತನಯದತ್ತರ ''ಇಂದಂದಿನದಲ್ಲೀ ಹಾಡು ; ನಾಡಿದಿನಾ ಕನ್ನಡನಾಡು'' - ಸಂ : ವಾಮನ ಬೇಂದ್ರೆ/೬೫

೬ ಏಳು ಶೂರರ ರಾಣಿ

ರಾಗ : ಹಂಸಧ್ವನಿ

ತಾಳ : ಝಪ್‌ತಾಲ್

೧ X	೨	೩ -	೪	೫	೬ O	೭	೮ -	೯	೧೦	೧ X	೨	೩ -	೪	೫	೬ O	೭	೮ -	೯	೧೦
									ಸ್ಥಾಯಿ										
ಸಾ̇	ಸಾ̇	ನಿ	ನಿ	ಪ	ಪ	ಗ	ರಿ	ಸಾ	ರಿ	ಸ	ರಿ	ಗ	ಪ	ಗ	ರಿ	ಪ	ಗ	ರಿ	ಸಾ
ಏ	ಽ	ಳು	ಶೂ	ಽ	ರ	ರ	ಖ	ಣಿ	ಽ	ಏ	ಽ	ಳು	ಶೂ	ಽ	ರ	ರ	ರಾ	ಽ	ಣಿ
ಗ	ಪ	ನಿ	ನಿ	ಪ	ರಿ̇	ಗ̇	ರಿ̇	ರಿ̇	ಸಾ̇	ಸಾ̇	ಗ̇	ಸಾ̇	ರಿ̇	ಸಾ̇	ನಿ	ಪ	ಗ	ಸ	ರಿ
ಏ	ಽ	ಳು	ಮೊ	ಽ	ರಿ	ದ	ಜಾ	ಽ	ನಿ	ಏ	ಽ	ಳು	ಈ	ಽ	ಸ್ಥಿ	ತಿ	ಗಾ	ಽ	ಣಿ
ಸಾ̇	ರಿ̇	ಗ̇	ರಿ̇	ಸಾ̇	ರಿ̇	ಪ̇	ಗ̇	ರಿ̇	ಸಾ̇										
ಏ	ಽ	ಳು	ವ	ರ	ವ	ರ	ದ	ಪಾ	ಣಿ										

									ಅಂತರಾ										
ಗ	ಪ	ನಿ	ನಿ	ಪ	ಪ	ನಿ	ಸಾ̇	-	ಸಾ̇	ಸಾ̇	ರಿ̇	ಗ̇	ಪ̇	ಗ̇	ರಿ̇	ಗ̇	ರಿ̇	ರಿ̇	ಸಾ̇
ನೀ	ಽ	ನು	ನೆ	ಲೆ	ಸಿ	ದ	ಕಾ	ಽ	ಡು	ಮಾ	ಽ	ನಿ	ಸು	ವ	ರೈ	ಽ	ನಾ	ಽ	ಡು
ಗ̇	ರಿ̇	ಸಾ̇	ರಿ̇	ಸಾ̇	ನಿ	ಪ	ರಿ̇	ರಿ̇	ಸಾ̇	ಸಾ̇	ನಿ	ಪ	ಗ	ರಿ	ಗ	ಪ	ರಿ	ರಿ	ಸಾ
ಧ್ಯಾ	ಽ	ನಿ	ಸು	ವ	ರೌ	ಽ	ನಿ	ಽ	ನ್ನ	ಹಾ	ಽ	ಽ	ಽ	ಡಿ	ಹಾ	ಽ	ಽ	ಽ	ಡು
ಸಾ	ರಿ	ಗ	ಪ	ಗ	ರಿ	ಗ	ಪ	ಗ	ಪ	ಗ	ಪ	ನಿ	ಪ	ಗ	ರಿ	ಪ	ಗ	ರಿ	ಸಾ
ಈ	ಽ	ನಾ	ಽ	ಡಿ	ನೊ	ಳು	ಮಾ	ಽ	ಡು	ಪ್ರಾ	ಽ	ಣ	ಪು	ಽ	ತ್ರ	ರ	ಬೀ	ಽ	ಡು
ಸಾ̇	ನಿ	ಪ	ಗ	ರಿ	ಪ	ಗ	ರಿ	ರಿ	ಸಾ										
ಅ	ದು	ವೆ	ಸಂ	ಽ	ತ	ಸ	ದ	ಹಾ	ಡು										

ಸೂಚನೆ : ಗಾಯಕರು ಈ ಹಾಡಿನ ಮುಂದಿನ ನುಡಿಗಳನ್ನು ಅಂತರಾ ಧಾಟಿಯನ್ನು ಅನುಸರಿಸಿ ಹಾಡಬೇಕು.

೭ ಕನಸಿನೊಳಗೊಂದು ಕಣಸು

ರಾಗ : ನಟ ಭೈರವ್ ತಾಳ : ತ್ರಿತಾಲ್

೧ X	೨	೩ -	೪	೫ O	೬	೭ -	೮	೧ X	೨	೩ -	೪	೫ O	೬	೭ -	೮
							ಸ್ಥಾಯಿ								
ಸಾಸಾ	ರಿರಿ	ಗಗ	ಮಮ	ಪಪ	ಧ಼ಧ಼	ಪ-	--	ಧ಼ಪ	ಮಗ	ರಿಗ	ರಿಸಾ	ಧ಼ಧ಼	ನಿ಼ಸಾ	ರಿರಿ	ಸಾ-
ಯಾರು	ನಿಂಽ	ದವ	ರಲ್ಲಿ	ತಾಯಿ	ಎಂಽ	ದೇಽ	ಽಽ	ಯಾರು	ಕೇಽ	ಳುವ	ರೆನ್ಗೆ	ಯಾಽ	ಽಕೆ	ತಂಽ	ದೇಽ
ಪಪ	ಪಪ	ಮಪ	ಮಗ	ಗಗ	ರಿಗ	ಮಗ	ರಿರಿ	ಸಾಸಾ	ರಿಪ	ರಿರಿ	ರಿಸಾ	ಸಾರಿ	ಗಸಾ	ರಿರಿ	ಸಾಸಾ
ಬೇಽ	ಸರ್ದ	ದನಿ	ಏಕೆ	ಹೆಸ	ರಹೇ	ಳಽ	ಲ್ಲಽ	ಹೆಸ	ರಾಗಿ	ಯೂಽ	ಕೂಡ	ಹೇಳ	ಽಳ	ಹೆಸ	ರಿಲ್ಲ
ಗಗ	ಗಗ	ಮಪ	ಪಪ	ಗಗ	ಧ಼ಪ	ಮಗ	ರಿ-	ಸಾಸಾ	ರಿರಿ	ಗಗ	ರಿಸಾ	ರಿರಿ	ರಿಸಾ	ರಿಗ	ರಿಸಾ
ನೀಽ	ನಾರ	ಮನೆ	ಯವ್ವೊ	ಮುಽ	ತ್ತೈದೆ	ಹೇಽ	ಳುಽ	ನಾನಾ	ಽರ	ಮನೆ	ಯವ್ವೊ	ಬಯ	ಲನ್ನೆ	ಕೇಽ	ಳುಽ
ಪಪ	ಧ಼ಪ	ಮಪ	ಮಗ	ರಿಗ	ಮಗ	ರಿಗ	ರಿಸಾ	ಸಾನಿ	ಧ಼ಪ	ಮಗ	ರಿಸಾ	ಸರಿ	ಗಮ	ಪಧ಼	ಪ-
